ಅರ್ಥಶಾಸ್ತ್ರವನ್ನು ಕುರಿತ ಪತ್ರಿಕೆ

ಅರ್ಥ–7

ಫೆಬ್ರುವರಿ 2026

ಮನರೇಗ ಕುರಿತು ವಿಶೇಷ ಸಂಚಿಕೆ





ಆತ್ಮೀಯರೆ

'ಅರ್ಥ' ಏಳನೆಯ ಸಂಚಿಕೆ ನಿಮ್ಮ ಮುಂದಿದೆ. ಈ ತಿಂಗಳು ಹಲವು ಬೆಳವಣಿಗೆಗಳಾಗಿವೆ. ಮನರೇಗಾ ಹೋಗಿ ವಿಬಿ ಜಿ ರಾಂ ಜಿ ಬರಲಿದೆ. ಬಜೆಟ್ ಮಂಡನೆಯಾಗಿದೆ, ಬಳಕೆದಾರರ ಬೆಲೆ ಸೂಚ್ಯಂಕ ಪರಿಷ್ಕರಣಗೊಂಡಿದೆ, ಯೂರೋಪ್ ಅಮೇರಿಕಾ ಜೊತೆಯಲ್ಲಿ ವ್ಯಾಪಾರದ ಒಪ್ಪಂದವಾಗಿದೆ. ಎಷ್ಟೋ ಬೆಳವಣಿಗೆಗಳು ಇನ್ನೂ ಅಸ್ಪಷ್ಟವಾಗಿಯೇ ಇವೆ. ಸಧ್ಯಕ್ಕೆ ಈ ಸಂಚಿಕೆಯಲ್ಲಿ ಮನರೇಗಾ ಕುರಿತ ವಿವಾದಗಳನ್ನು, ನಡೆಯುತ್ತಿರುವ ಚರ್ಚೆಯನ್ನು ಕು-ರಿತಂತೆ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇದೊಂದು ತುಂಬಾ ಮುಖ್ಯವಾದ ವಿಷಯ. ನಿರುದ್ಯೋಗ ಇಂದಿನ ಅರ್ಥಿಕತೆಯ ಮುಂದಿರುವ ದೊಡ್ಡ ಸವಾಲು. ಅದು ಗಂಭೀರವಾಗಿ ಚರ್ಚೆಯಾಗಬೇಕಾದ ವಿಷಯ. ಹಲವು ಅಭಿಪ್ರಾಯಗಳನ್ನು ಒಂದೆಡೆ ಕಲೆಹಾಕಲಾಗಿದೆ. ಇನ್ನೂ ಎಷ್ಟೊ ನಿಲುವುಗಳನ್ನು ದಾಖಲಿಸಲಾಗಿಲ್ಲ. ಬಹುತೇಕ ಅಭಿಪ್ರಾಯಗಳು ಉದ್ಯೋಗವನ್ನು ಹಕ್ಕಾಗಿ ಪರಿಗಣಿಸಬೇಕು ಎಂದೇ ಪ್ರತಿಪಾದಿಸುತ್ತವೆ. ಸಮಸ್ಯೆ ಇರುವುದು ಮನರೇಗಾದ ಅನುಷ್ಠಾನದಲ್ಲಿ ವಿನ್ಯಾಸದಲ್ಲಿ ಅಲ್ಲ ಎಂದು ಕಾರ್ತಿಕ್ ಮುರಳಿಧರನ್ ಅಂತಹವರೂ ವಾದಿಸುತ್ತಿದ್ದಾರೆ. ಪಟ್ಟಣಗಳಲ್ಲೂ ಅಂತಹ ಉದ್ಯೋಗ ಖಾತರಿ ಯೋಜನೆಯನ್ನು ತರುವುದರ ಅಗತ್ಯವನ್ನು ಕುರಿತು ಜೀನ್ ಡ್ರೇಜ್ ಅಂತಹವರು ವಾದಿಸುತ್ತಿದ್ದಾರೆ. ಈ ಬಗ್ಗೆ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ.

ಉಳಿದಂತೆ ಈ ಸಂಚಿಕೆಯಲ್ಲಿ ನಮ್ಮ ಅರ್ಥಶಾಸ್ತ್ರಜ್ಞರು ಮಾಲಿಕೆಯಲ್ಲಿ ಸುಖಮೊಯ್ ಚಕ್ರವರ್ತಿಯವರ ಚಿಂತನೆಗಳನ್ನು ಪರಿಚಯಿಸಲಾಗಿದೆ. ಹಾಗೆಯೇ ಅಮರ್ತ್ಯ ಸೇನ್ ಅವರ ಕೇಪಬಿಲಿಟಿ ಅಪ್ರೋಚ್ ಪರಿಕಲ್ಪನೆಯನ್ನು ಚರ್ಚಿಸಲಾಗಿದೆ. ಕಾರ್ತಿಕ್ ಮುರಳಿಧರನ್ ಅವರ Accelerating India's Development ಪುಸ್ತಕದಲ್ಲಿ ಭಾರತದ ಅಧಿಕಾರಶಾಹಿಯನ್ನು ಕುರಿತ ಅಭಿಪ್ರಾಯಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಅರ್ಥಶಾಸ್ತ್ರ ಎಲ್ಲರನ್ನೂ ಪ್ರಭಾವಿಸುತ್ತದೆ. ಹಾಗಾಗಿ ಅದನ್ನು ಯಾರೋ ಕೆಲವು ಪರಿಣತರು ನಿರ್ಧರಿಸುತ್ತಾರೆ ಅಂತ ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ. ಎಲ್ಲರೂ ಗಂಭೀರವಾಗಿ ಚರ್ಚಿಸಬೇಕು. ಸಮಕಾಲೀನ ವಿಷಯಗಳ ಬಗ್ಗೆ ಅರಿವುಳ್ಳ ಚರ್ಚೆ ಸಾಧ್ಯವಾಗಬೇಕು. ಅಂತಹ ಚರ್ಚೆಗೆ ಅನುಕೂಲ ಮಾಡಿಕೊಡಬಹುದು ಅನ್ನುವ ಭಾವನೆಯಿಂದ ಅರ್ಥವನ್ನು ತರಲಾಗುತ್ತಿದೆ. ಒಮ್ಮೆ ನೋಡಿ. ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ.

ಹಿಂದಿನ ಸಂಚಿಕೆಗಳಿಗಾಗಿ lokayatha.com ಗಮನಿಸಿ.

ವೇಣುಗೋಪಾಲ್ ಟಿ ಎಸ್

ಅರ್ಥದ ಪ್ರತಿಗಳು ಬೇಕೆನಿಸಿದರೆ ದಯವಿಟ್ಟು ನಿಮ್ಮ ಇ-ಮೇಲ್ ತಿಳಿಸಿ, ಆಸಕ್ತ ಗೆಳೆಯರು ಇದ್ದರೆ ಅವರ ಇ-ಮೇಲ್ ತಿಳಿಸಿ

ಸಂಪರ್ಕ:
statsvenugopal@gmail.com
9900082773


ಒಳಗೇನಿದೆ

1

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಮನರೇಗಾ)







ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಮನರೇಗಾ): ೨೦ ವರ್ಷಗಳ ಅವಲೋಕನ

ಜೀನ್ ಡ್ರೇಜ್ ಮತ್ತು ರಾಹುಲ್ ಆರ್

ಕೃಪೆ: ಐಡಿಯಾಸ್ ಫಾರ್ ಇಂಡಿಯಾ–ಜುಲೈ ೨೧, ೨೦೨೫


[೨೦೦೫ರಲ್ಲಿ ಜಾರಿಗೆ ಬಂದ ಭಾರತದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ (ಮನರೇಗಾ) ಈಗ ೨೦ ವರ್ಷಗಳನ್ನು ಪೂರೈಸಿದೆ. ಈ ಲೇಖನದಲ್ಲಿ, ಜೀನ್ ಡ್ರೇಜ್ ಮತ್ತು ರಾಹುಲ್ ಆರ್ ಅವರು ಈ ಯೋಜನೆಯ ಸಾಧನೆಗಳು, ವೈಫಲ್ಯಗಳು ಮತ್ತು ಭವಿಷ್ಯದ ಕುರಿತು ಕೆಲವು ಚಿಂತನೆಗಳನ್ನು ಮಂಡಿಸಿದ್ದಾರೆ. ಅಧಿಕೃತ ಅಂಕಿಅಂಶಗಳ ಆಧಾರಿತ ೧೦ ಚಾರ್ಟ್‌ಗಳ ಮೂಲಕ, ಅವರು ಉದ್ಯೋಗ ಸೃಷ್ಟಿ, ಅಂಚಿನಲ್ಲಿರುವ ಗುಂಪುಗಳ ಭಾಗವಹಿಸುವಿಕೆ, ನೈಜ ವೇತನ, ಆಡಳಿತಾತ್ಮಕ ವೆಚ್ಚ ಇತ್ಯಾದಿ ಅಂಶಗಳನ್ನು ತುಲನಾತ್ಮಕವಾಗಿ ವಿಶ್ಲೇಷಿಸಿದ್ದಾರೆ.]

ಇಂದು 'ಮನರೇಗಾ' ಎಂದು ಕರೆಯಲ್ಪಡುವ ಈ ಕಾಯ್ದೆಯು ಭಾರತದ ಸಂಸತ್ತಿನಲ್ಲಿ ಅವಿರೋಧವಾಗಿ ಅಂಗೀಕಾರಗೊಂಡು ಇಪ್ಪತ್ತು ವರ್ಷಗಳು ಕಳೆದಿವೆ. ಅಂದು ಇದಕ್ಕೆ ಎಲ್ಲಾ ಪಕ್ಷಗಳ ಬೆಂಬಲವಿತ್ತು. ಆದರೂ ಆ ಕಾಲದ ಅನೇಕ ಅರ್ಥಶಾಸ್ತ್ರಜ್ಞರಿಗೆ ಈ ಕಾಯ್ದೆಯ ಉಪಯುಕ್ತತೆಯ ಬಗ್ಗೆ ಅನುಮಾನವಿತ್ತು. ನಿಜ, ಕಾಯ್ದೆಯನ್ನು ಜಾರಿಗೆ ತಂದ ಶುರುವಿನಲ್ಲಿ ಕಾಯ್ದೆಯ ಅನುಷ್ಠಾನದಲ್ಲಿ ಹಲವು ಸಮಸ್ಯೆಗಳು ಕಾಣಿಸಿಕೊಂಡವು. ಆದಾಗ್ಯೂ, ಇಷ್ಟು ದೀರ್ಘಕಾಲದವರೆಗೆ, ಅದರಲ್ಲೂ ಭಾರತದಂತಹ ದೊಡ್ಡ ದೇಶದಲ್ಲಿ ಉದ್ಯೋಗ ಖಾತರಿ ಕಾಯ್ದೆಯೊಂದನ್ನು ಯಶಸ್ವಿಯಾಗಿ ಮತ್ತು ಸುಸ್ಥಿರವಾಗಿ ನಡೆಸಬಹುದು ಎಂಬುದಕ್ಕೆ ಮನರೇಗಾದ ಅನುಭವ ಒಂದು ದೊಡ್ಡ ಪುರಾವೆ.

ಈ ಯೋಜನೆಯ ಸಾಧನೆಗಳು, ವೈಫಲ್ಯಗಳು ಮತ್ತು ಭವಿಷ್ಯದ ಬಗ್ಗೆ ಸಾಮೂಹಿಕವಾಗಿ ಅವಲೋಕಿಸಲು ಇದು ಸರಿಯಾದ ಸಮಯ. ಪ್ರಾರಂಭಕ್ಕೆ, ಮನರೇಗಾದ ಮ್ಯಾನೇಜ್‌ಮೆಂಟ್ ಇನ್ಫರ್ಮೇಷನ್ ಸಿಸ್ಟಮ್‌ನಲ್ಲಿ (MIS) ಲಭ್ಯವಿರುವ ಅಧಿಕೃತ ಅಂಕಿಅಂಶಗಳ ಆಧಾರದ ಮೇಲೆ ಮನರೇಗಾದ ಹಲವು ಪ್ರಮುಖ ಪ್ರವೃತ್ತಿಗಳನ್ನು ಇಲ್ಲಿ ಅವಲೋಕಿಸಲಾಗಿದೆ. ದುರದೃಷ್ಟವಶಾತ್ ನರೇಗಾಕ್ಕೆ ಸಂಬಂದಂತೆ ೨೦೧೪–೧೫ಕ್ಕೂ ಮುಂಚಿನ ದತ್ತಾಂಶಗಳು ಈಗ ಪೋರ್ಟಲ್‌ನಲ್ಲಿ ಲಭ್ಯವಿಲ್ಲ. ಇದು ಉದ್ದೇಶಪೂರ್ವಕವೋ ಅಥವಾ ಅಲ್ಲವೋ ತಿಳಿಯದು. ಆದರೆ ಅದು ಯೋಜನೆ ರೂಪಪಡೆದುಕೊಳ್ಳುತ್ತಿದ್ದ ನಿರ್ಣಾಯಕ ಅವಧಿ. ಅದು ಯೋಜನೆಯನ್ನು 'ಆಚರಣೆಗೆ ತರುತ್ತಾ, ಅನುಭವದಿಂದ ಕಲಿಯುತ್ತಿದ್ದ' ಕಾಲ. ಆ ಸಮಯದ ಮಾಹಿತಿಯ ಕೊರತೆ ನಿಜವಾಗಿ ದೊಡ್ಡ ನಷ್ಟ. ಆದರೂ, ವಿವಿಧ ವಿಶ್ವಾಸಾರ್ಹ ಮೂಲಗಳಿಂದ ನಾವು ಆ ಕಾಲದ ದತ್ತಾಂಶಗಳನ್ನು ಸಂಗ್ರಹಿಸಿ ಬಳಸಿದ್ದೇವೆ. ಇವೆಲ್ಲಾ ಸಾರ್ವಜನಿಕವಾಗಿ ಲಭ್ಯವಿರುವ ಮಾಹಿತಿಗಳು.

ಅನುಭವದ ದೃಷ್ಟಿಯಿಂದ ೨೦೧೧–೧೨ ಒಂದು ಪ್ರಮುಖ ಮೈಲಿಗಲ್ಲು. ಆ ವರ್ಷದಲ್ಲಿ ಮನರೇಗಾ ಯೋಜನೆಯಿಂದಾಗಿ ಸೃಷ್ಟಿಯಾದ ಉದ್ಯೋಗಕ್ಕೆ ಸಂಬಂಧಿಸಿದಂತೆ ಇರುವ ಅಧಿಕೃತ ಅಂದಾಜುಗಳನ್ನು ಎರಡು ಸ್ವತಂತ್ರ ಸಮೀಕ್ಷೆಗಳು ದೃಢೀಕರಿಸಿವೆ. ಒಂದು ನ್ಯಾಷನಲ್ ಸ್ಯಾಂಪಲ್ ಸಮೀಕ್ಷೆಯ (NSS) ೬೮ನೇ ಸುತ್ತಿನ ವರದಿ ಮತ್ತು ಮತ್ತೊಂದು ಇಂಡಿಯಾ ಹ್ಯೂಮನ್ ಡೆವಲಪ್‌ಮೆಂಟ್ ಸರ್ವೆ (IHDS-2). ನಂತರದ ವರ್ಷಗಳಲ್ಲಿ ಅಂದರೆ ೨೦೧೩ ಮತ್ತು ೨೦೧೪ರ ಆರಂಭದಲ್ಲಿ ಈ ಕಾಯಿದೆಯ ಅನುಸೂಚಿಗಳಲ್ಲಿ (Schedules) ಒಂದಾದ ಮೇಲೊಂದರಂತೆ





ನಕ್ಷೆ 1. ಮನರೇಗಾ ಒದಗಿಸಿದ ಉದ್ಯೋಗ (ಮಾನವ ದಿನಗಳು) ಹಾಗೂ ಖರ್ಚು

ಹಲವು ತಿದ್ದುಪಡಿಗಳನ್ನು ತರಲಾಯಿತು. ಇದರಿಂದ ಮನರೇಗಾ ಅನುಷ್ಠಾನದಲ್ಲಿ ಗಣನೀಯವಾದ ಬದಲಾವಣೆಗಳಾದವು. ವಿಶೇಷವಾಗಿ ಆ ಅವಧಿಯಲ್ಲಿ ಯೋಜನೆ ಹೆಚ್ಚೆಚ್ಚು ಕೇಂದ್ರೀಕರಣಗೊಳ್ಳತೊಡಗಿತು ಹಾಗೂ ಡಿಜಿಟಲೀಕರಣಗೊಂಡಿತು. ಹೀಗಾಗಿ, ಈ ಎರಡು ವರ್ಷಗಳು ಮನರೇಗಾ ಬೆಳವಣಿಗೆಯ ತುಲನಾತ್ಮಕ ಅಧ್ಯಯನಕ್ಕೆ ಹೆಚ್ಚು ಉಪಯುಕ್ತವಾಗುತ್ತವೆ.


ಇಲ್ಲಿ ನೀಡಲಾಗಿರುವ ಎಲ್ಲಾ ನಕ್ಷೆಗಳಲ್ಲಿ ಲಭ್ಯವಿರುವ ಅಧಿಕೃತ ಮನರೇಗಾ ದತ್ತಾಂಶಗಳನ್ನು ಯಥಾವತ್ತಾಗಿ ಬಳಸಿಕೊಳ್ಳಲಾಗಿದೆ. ಮನರೇಗಾ ಉದ್ಯೋಗಕ್ಕೆ ಸಂಬಂಧಿಸಿದಂತೆ ಇರುವ ಅಧಿಕೃತ ಅಂಕಿಅಂಶಗಳು ಉತ್ಪ್ರೇಕ್ಷಿತವಾಗಿರುವ ಸಾಧ್ಯತೆ ಹೆಚ್ಚು. ಮನರೇಗಾ ಹಣವನ್ನು ದುರುಪಯೋಗಪಡಿಸಿಕೊಳ್ಳುವ ದೃಷ್ಟಿಯಿಂದ ದಾಖಲಿಸಿದ ನಕಲಿ ಕೆಲಸದ ದಿನಗಳು ಇದರಲ್ಲಿ ಸೇರಿಕೊಂಡಿವೆ. ಇದನ್ನು ಬೇರೆ ಪ್ರತ್ಯೇಕ ಲೇಖನದಲ್ಲಿ ಚರ್ಚಿಸಲಾಗಿದೆ. (ಡ್ರೇಜ್ ಮತ್ತು ಸೋಮಂಚಿ, ಮುಂಬರಲಿರುವುದು).

ಉದ್ಯೋಗ ಸೃಷ್ಟಿ

೨೦೦೮–೦೯ರಲ್ಲಿ ಮನರೇಗಾ ಯೋಜನೆಯನ್ನು ಇಡೀ ದೇಶಕ್ಕೆ ವಿಸ್ತರಿಸಲಾಯಿತು. ಇಡೀ ದೇಶಕ್ಕೆ ವಿಸ್ತಾರಗೊಂಡ ಮೊದಲ ವರ್ಷ ಸೃಷ್ಟಿಯಾದ ವಾರ್ಷಿಕ ಉದ್ಯೋಗದ 'ಮಾನವ ದಿನಗಳನ್ನು' (Person-days) ಚಿತ್ರ ೧ ತೋರಿಸುತ್ತದೆ. ಹೆಚ್ಚಿನ ವರ್ಷಗಳಲ್ಲಿ, ೨೦೦ ರಿಂದ ೩೦೦ ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿತ್ತು. ಎರಡು ಸಂದರ್ಭಗಳಲ್ಲಿ ಹಿಂದಿನ ವರ್ಷಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಾನವ ದಿನಗಳು ಸೃಷ್ಟಿಯಾಗಿದ್ದನ್ನು ಗಮನಿಸಬಹುದು. ಒಮ್ಮೆ ೨೦೦೯–೧೦ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿತ್ತು. ಇನ್ನೊಮ್ಮೆ ೨೦೨೦–೨೨ರ ಕೋವಿಡ್–೧೯ ಸಾಂಕ್ರಾಮಿಕದ ಅವಧಿಯಲ್ಲಿ ಮಾನವ ದಿನಗಳ ಸಂಖ್ಯೆಯಲ್ಲಿ ಗಣನೀಯವಾದ ಏರಿಕೆಯಾಗಿತ್ತು. ಅಂದರೆ ಸಂಕಷ್ಟದ ಸಮಯದಲ್ಲಿ ಮನರೇಗಾ ಆಸರೆಯನ್ನು ಒದಗಿಸಿದೆ. ಇದು ಅದರ ಪ್ರಮುಖ ಗುಣ. ವಿಶೇಷವಾಗಿ ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ, ಕೆಲಸ ಕಳೆದುಕೊಂಡ ಕಾರ್ಮಿಕರಿಗೆ ಮತ್ತು ಊರಿಗೆ ಹಿಂತಿರುಗಿದ ಕಾರ್ಮಿಕರಿಗೆ ಮನರೇಗಾ ಅವಶ್ಯಕ ಉದ್ಯೋಗ ಒದಗಿಸಿ ಆಸರೆಯಾಗಿದೆ. ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ವರ್ಷ ಅಂದರೆ ೨೦೧೪–೧೫ರಲ್ಲಿ ಮಾತ್ರ ಉದ್ಯೋಗ ಸೃಷ್ಟಿ ೨೦೦ ಕೋಟಿ ಮಾನವ ದಿನಗಳಿಗಿಂತ ಕಡಿಮೆ (೧೬೬ ಕೋಟಿ) ಆಗಿತ್ತು. ನರೇಂದ್ರ ಮೋದಿಯವರ ಸರ್ಕಾರಕ್ಕೆ ಮನರೇಗಾ ಬಗ್ಗೆ ತಾತ್ಸಾರವಿತ್ತು ಮತ್ತು ಆ ಸಮಯದಲ್ಲಿ ಸರ್ಕಾರವು ಈ ಯೋಜನೆಯನ್ನು ಕೇವಲ ಕೆಲವು ಆಯ್ದ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸುವ ಪ್ರಯತ್ನ ನಡೆದಿತ್ತು. ಆ ವರ್ಷದಲ್ಲಿ ಕಂಡುಬಂದ ಕುಸಿತಕ್ಕೆ ಬಹುಶಃ ಇದು ಕಾರಣವಿರಬಹುದು. ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಕೆಲವು ಮಾರ್ಗಸೂಚಿಗಳನ್ನು ಬದಲಿಸಿದ್ದು ಕೂಡ ಉದ್ಯೋಗ ಕಮ್ಮಿಯಾಗುವುದಕ್ಕೆ ಕಾರಣವಿದ್ದಿರಬಹುದು.

೨೦೨೩–೨೪ರಲ್ಲಿ, ಮನರೇಗಾ ೩೦೯ ಕೋಟಿ ಮಾನವ ದಿನಗಳಷ್ಟು ಉದ್ಯೋಗವನ್ನು ಸೃಷ್ಟಿಸಿದೆ. ಅಂದರೆ ಸರಾಸರಿ ೬ ಕೋಟಿ ಕುಟುಂಬಗಳಿಗೆ ತಲಾ ೫೦ ದಿನಗಳ ಕೆಲಸ ನೀಡಿದಂತಾಗುತ್ತದೆ. ಒಟ್ಟು ಉದ್ಯೋಗದ ಮಾರುಕಟ್ಟೆಯಲ್ಲಿ ಮನರೇಗಾದ ಪಾಲು ಕೇವಲ ಶೇ. ೨ರಷ್ಟಿದ್ದರೂ, ಬಡ ಕುಟುಂಬಗಳಿಗೆ ಇದು ಬದುಕಿನ ಆಸರೆಯಾಗಿದೆ ಮತ್ತು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಕಲ್ಪಿಸಿದೆ. ೨೦೨೩–೨೪ರಲ್ಲಿ ಸುಮಾರು ೫೦ ಲಕ್ಷ ಕುಟುಂಬಗಳು ಪೂರ್ಣ ೧೦೦ ದಿನಗಳ ಕಾಲ ಕೆಲಸ ಮಾಡಿವೆ. ನಿರ್ದಿಷ್ಟ ಗುಂಪಿನ ಜನರಿಗೆ ಅಥವಾ ಕುಟುಂಬಗಳಿಗೆ ಮನರೇಗಾ ಬದುಕಿನ ಅತ್ಯಂತ ಮುಖ್ಯ ಮೂಲವಾಗಿತ್ತು. ಕೇವಲ ರಾಷ್ಟ್ರೀಯ ಸರಾಸರಿಯನ್ನು ನೋಡಿದರೆ ನಿಜವಾದ ಚಿತ್ರಣ ತಿಳಿಯುವುದಿಲ್ಲ. ೨೦೨೩–೨೪ರಲ್ಲಿ ೫೦ ಲಕ್ಷ ಕುಟುಂಬಗಳು ಪೂರ್ಣ ನೂರು ದಿನಗಳು, ಅಂದರೆ ಗರಿಷ್ಠ ಲಭ್ಯವಿರುವ ಅವಧಿಯ ಪೂರ್ತಿ ಮನರೇಗಾ ಯೋಜನೆಯಲ್ಲಿ ದುಡಿದಿದ್ದಾರೆ.

ಮನರೇಗಾ ಯೋಜನೆಗೆ ಕೇಂದ್ರ ಸರ್ಕಾರ ಮಾಡುತ್ತಿರುವ ವೆಚ್ಚ ನಿಜವಾಗಿ ತುಂಬಾ ಕಡಿಮೆ. ೨೦೦೯–೧೦ರಲ್ಲಿ ಅದು ಭಾರತದ ಒಟ್ಟು ಜಿಡಿಪಿಯ ಶೇಕಡ ೦.೬ರಷ್ಟಿತ್ತು. ಇಂದು ಅದು ಶೇ. ೦.೩ ರಿಂದ ೦.೪ರಷ್ಟಿದೆ. ಇಷ್ಟು ದೊಡ್ಡ ಪ್ರಮಾಣದ ಉದ್ಯೋಗ ಕಾರ್ಯಕ್ರಮಕ್ಕೆ ಇದು ದೊಡ್ಡ ಆರ್ಥಿಕ ಹೊರೆಯೇ ಅಲ್ಲ.




ಚಿತ್ರ-೨. ಪ್ರತಿ ಗ್ರಾಮೀಣ ವ್ಯಕ್ತಿಗೆ ಮನರೇಗಾ ಉದ್ಯೋಗದ ದಿನಗಳು


ಪ್ರಾದೇಶಿಕ ಹಂಚಿಕೆ

ಮನರೇಗಾ ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗವನ್ನು ಸೃಷ್ಟಿಸಿದೆ. ಆದರೆ ಉದ್ಯೋಗದ ಹಂಚಿಕೆ ರಾಜ್ಯಗಳ ನಡುವೆ ಸಮವಾಗಿ ಆಗಿಲ್ಲ, ತುಂಬಾ ವ್ಯತ್ಯಾಸವಿದೆ. ತಮಿಳುನಾಡು, ಆಂಧ್ರಪ್ರದೇಶ, ಉತ್ತರಪ್ರದೇಶ, ರಾಜಸ್ಥಾನ ಮತ್ತು ಮಧ್ಯಪ್ರದೇಶ, ಬಿಹಾರ ರಾಜ್ಯಗಳು ಕ್ರಮವಾಗಿ ಉದ್ಯೋಗ ಸೃಷ್ಟಿಯಲ್ಲಿ ಮುಂದಿವೆ. ಬಿಹಾರ ಮತ್ತು ಉತ್ತರಪ್ರದೇಶದಂತಹ ರಾಜ್ಯಗಳಲ್ಲಿ ಜನಸಂಖ್ಯೆಗೆ ಹೋಲಿಸಿದರೆ ಉದ್ಯೋಗ ಸೃಷ್ಟಿಯಾಗಿರುವುದು ಕಡಿಮೆ ಎಂದೇ ಹೇಳಬೇಕು. ಆದರೂ ಜನಸಂಖ್ಯೆ ಹೆಚ್ಚಿರುವುದರಿಂದ ಉದ್ಯೋಗ ಸಿಕ್ಕವರ ಸಂಖ್ಯೆ ಹೆಚ್ಚಿದೆ. ಹಾಗಾಗಿ ಅತಿಹೆಚ್ಚು ಉದ್ಯೋಗ ಸೃಷ್ಟಿಸಿದ ಐದು ರಾಜ್ಯಗಳ ಪಟ್ಟಿಯಲ್ಲಿ ಅವು ಸೇರಿಕೊಂಡಿವೆ.

ಹಾಗಾಗಿ ಮನರೇಗಾ ಉದ್ಯೋಗ ಹಂಚಿಕೆಯನ್ನು ವಿಶ್ಲೇಷಿಸಲು ಉತ್ತಮ ಮಾರ್ಗವೆಂದರೆ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಮಾನವ ದಿನಗಳನ್ನು ರಾಜ್ಯವಾರು ವಿಂಗಡಿಸುವುದು. ಚಿತ್ರ-೨ರಲ್ಲಿ ತಲಾ ಉದ್ಯೋಗದ ಸಂಖ್ಯೆಯನ್ನು ಎರಡು ನಕ್ಷೆಗಳಲ್ಲಿ ನೀಡಲಾಗಿದೆ. ಒಂದರಲ್ಲಿ ೨೦೧೧-೧೨ನ್ನು ಇನ್ನೊಂದರಲ್ಲಿ ೨೦೨೩-೨೪ನ್ನು ಹೋಲಿಕೆಗೆ ಆರಿಸಿಕೊಳ್ಳಲಾಗಿದೆ. ತಲಾ ಜನಸಂಖ್ಯೆಯ ಆಧಾರದ ಮೇಲೆ ನೋಡಿದರೆ ಎರಡೂ ವರ್ಷಗಳಲ್ಲಿ ಏಳು ಪ್ರಮುಖ ರಾಜ್ಯಗಳಾದ ಆಂಧ್ರಪ್ರದೇಶ, ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಕೇರಳ, ರಾಜಸ್ಥಾನ, ತಮಿಳುನಾಡು ಹಾಗೂ ತೆಲಂಗಾಣ ಸಾಪೇಕ್ಷವಾಗಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿದ್ದವು. ಈ ಎಲ್ಲಾ ರಾಜ್ಯಗಳು ಮನರೇಗಾವನ್ನು ಉತ್ತಮವಾಗಿ ಅನುಷ್ಠಾನಗೊಳಿಸಿದ ರಾಜ್ಯಗಳು. ೨೦೨೩-೨೪ರಲ್ಲಿ ಅತಿ ಹೆಚ್ಚಿನ ಪ್ರಮಾಣದ ಮನರೇಗಾ ಉದ್ಯೋಗ ಸೃಷ್ಟಿಯಾಗಿರುವುದು ಕೆಲವು ಸಣ್ಣ ಈಶಾನ್ಯ ರಾಜ್ಯಗಳಲ್ಲಿ

ಚಿತ್ರ-೩: ಸರಾಸರಿ ಮನರೇಗಾ ತಲಾ ವೆಚ್ಚ ಮತ್ತು ಮನರೇಗಾ ತಲಾ ಉದ್ಯೋಗ (ಗ್ರಾಮೀಣ, ೨೦೨೩-೨೪)





ಚಿತ್ರ ೪. ಮನರೇಗಾ ಉದ್ಯೋಗದ ಮಾನವ ದಿನಗಳು ೨೦೨೩–೨೪ರ ವಿಭಿನ್ನ ತಿಂಗಳುಗಳಲ್ಲಿ

ಹಾಗೂ ಲಡಾಖ್‌ನಲ್ಲಿ.


೨೦೧೧–೧೨ರಲ್ಲಿ ಕೆಲವು ರಾಜ್ಯಗಳು ಮನರೇಗಾವನ್ನು ತುಂಬಾ ಕಡಿಮೆ ಬಳಸಿಕೊಂಡಿದ್ದವು. ಬಿಹಾರ, ಗುಜರಾತ್, ಒಡಿಶಾ, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶಗಳಂತಹ ಹೆಚ್ಚು ಜನಸಂಖ್ಯೆ ಇರುವ ರಾಜ್ಯಗಳೂ ಇದನ್ನು ಸರಿಯಾಗಿ ಬಳಸಿಕೊಂಡಿರಲಿಲ್ಲ. ೨೦೨೩–೨೪ರಲ್ಲಿ ಇವುಗಳಲ್ಲಿ ಕೆಲವು ರಾಜ್ಯಗಳಲ್ಲಿ ಸುಧಾರಣೆಯಾಗಿದೆ. ಆದರೆ ಮನರೇಗಾ ಉದ್ಯೋಗದ ಪ್ರಮಾಣ ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ತುಂಬ ಕಡಿಮೆ ಇತ್ತು. ಗುಜರಾತ್ ವಿಷಯದಲ್ಲಿ ಆಶ್ಚರ್ಯವಿಲ್ಲ, ಏಕೆಂದರೆ ಅದು ಸಾಪೇಕ್ಷವಾಗಿ ಉತ್ತಮ ಸ್ಥಿತಿಯಲ್ಲಿದ್ದ ರಾಜ್ಯ ಮತ್ತು ಅಲ್ಲಿನ ರಾಜಕೀಯ ನಾಯಕತ್ವ ಮನರೇಗಾದಲ್ಲಿ ಎಂದೂ ಆಸಕ್ತಿಯನ್ನು ತೋರಿರಲಿಲ್ಲ. ಆದರೆ ಮಹಾರಾಷ್ಟ್ರದ ನಿರಾಸಕ್ತಿಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಏಕೆಂದರೆ ಅದು ತನ್ನದೇ ಆದ ಉದ್ಯೋಗ ಖಾತರಿ ಕಾಯ್ದೆಯನ್ನು ೧೯೭೦ರಲ್ಲೇ ಜಾರಿಗೆ ತಂದಿತ್ತು.

ಬಡತನ ಮತ್ತು ಮನರೇಗಾ

ಛತ್ತೀಸ್‌ಗಢದಂತಹ ಬಡ ರಾಜ್ಯಗಳಲ್ಲಿ ತಲಾ ಮನರೇಗಾ ಉದ್ಯೋಗ ಹೆಚ್ಚಿನ ಪ್ರಮಾಣದಲ್ಲಿ ಸೃಷ್ಟಿಯಾಗಿರುವಂತೆಯೇ, ಸಾಪೇಕ್ಷವಾಗಿ ಉತ್ತಮ ಸ್ಥಿತಿಯಲ್ಲಿರುವ ತಮಿಳುನಾಡಿನಂತಹ ರಾಜ್ಯಗಳಲ್ಲೂ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿದೆ. ಹಾಗೆಯೇ ಕಡಿಮೆ ಉದ್ಯೋಗ ಸೃಷ್ಟಿಯಾಗಿರುವ ರಾಜ್ಯಗಳಲ್ಲಿ ಬಡ ರಾಜ್ಯಗಳು ಹಾಗೂ ಶ್ರೀಮಂತ ರಾಜ್ಯಗಳೂ ಸೇರಿವೆ. ರಾಜ್ಯಗಳ ಬಡತನ ಹಾಗೂ ಉದ್ಯೋಗದ ನಡುವೆ 'ವಿಲೋಮ ಸಂಬಂಧ' (Inverse relationship) ಇದೆ ಎಂದು ಕೆಲವೊಮ್ಮೆ ವಾದಿಸಲಾಗುತ್ತದೆ. ಅಂದರೆ ಮನರೇಗಾ ಅನುದಾನವು ಅತಿಯಾಗಿ ಶ್ರೀಮಂತ ರಾಜ್ಯಗಳಿಗೆ ಹೋಗುತ್ತಿದೆ ಎನ್ನಲಾಗಿದೆ. ಇತ್ತೀಚೆಗೆ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ನೇಮಿಸಿದ ಸಮಿತಿಯು ಇತರ ವಿಷಯಗಳ ಜೊತೆಗೆ ಈ ಬಗ್ಗೆಯೂ ಪರಿಶೀಲಿಸಿದೆ. ಶ್ರೀಮಂತ ರಾಜ್ಯಗಳ ಮನರೇಗಾ ವೆಚ್ಚದ ಮೇಲೆ ಮಿತಿಯನ್ನು ವಿಧಿಸುವ ಉದ್ದೇಶದಿಂದ ಮಂತ್ರಾಲಯವು ಸಮಿತಿಗೆ ಈ ಬಗ್ಗೆ ಪರಿಶೀಲಿಸಲು ತಿಳಿಸಿದ್ದಿರಬಹುದು. ಸಮಿತಿಯ ವರದಿ ಸಾರ್ವಜನಿಕವಾಗಿ ಲಭ್ಯವಿಲ್ಲ. ಅದಕ್ಕಾಗಿ ಮಾಹಿತಿ ಹಕ್ಕು ಕಾಯ್ದೆಯಡಿ ಹಲವು ಬಾರಿ ಕೇಳಿದ್ದರೂ ಅದನ್ನು ಪ್ರಕಟಿಸಿಲ್ಲ. ಕೆಲವು ಮಾಧ್ಯಮಗಳ ವರದಿಯ ಪ್ರಕಾರ, ಸಮಿತಿಯು ಮಂತ್ರಾಲಯದ ಕೋರಿಕೆಗೆ ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡಿದೆ. ಆದರೆ, ರಾಜ್ಯಗಳ ಬಡತನ ಮತ್ತು ಮನರೇಗಾ ಉದ್ಯೋಗದ ನಡುವೆ ಯಾವುದೇ 'ವಿಲೋಮ ಸಂಬಂಧ' ಕಂಡುಬಂದಿಲ್ಲ.

ಚಿತ್ರ ೩ರಲ್ಲಿ ೨೦೨೩–೨೪ನ್ನು ಹೋಲಿಕೆಯ ವರ್ಷವನ್ನಾಗಿಟ್ಟುಕೊಂಡು ಇದನ್ನು ಗಮನಿಸಲಾಗಿದೆ. ಈ ಚಿತ್ರದಲ್ಲಿ ತಲಾ ಮನರೇಗಾ ಉದ್ಯೋಗವನ್ನು ಹಾಗೂ ಗ್ರಾಮೀಣ ಪ್ರದೇಶದ ಮಾಸಿಕ ತಲಾ ಖರ್ಚನ್ನು (MPCE) ಹೋಲಿಸಲಾಗಿದೆ. ಆ ವರ್ಷದ ಬಡತನದ ಅಂದಾಜು ಲಭ್ಯವಿಲ್ಲದ ಕಾರಣ ಹೀಗೆ ಮಾಡಲಾಗಿದೆ. ರಾಜ್ಯಗಳ ಬಡತನದ ಮಟ್ಟ ಮತ್ತು ಮನರೇಗಾ ಉದ್ಯೋಗದ ನಡುವೆ ಗಣನೀಯವಾದ ಯಾವುದೇ ಋಣಾತ್ಮಕ ಸಂಬಂಧ ಕಂಡುಬಂದಿಲ್ಲ. ೨೦೦೯–೧೦ ಹಾಗೂ ೨೦೧೧–೧೨ರ ಗ್ರಾಮೀಣ ಬಡತನದ ಅಂದಾಜು ಲಭ್ಯವಿದೆ. ಆದರೆ ಆಗಲೂ ಮನರೇಗಾ ತಲಾ ಉದ್ಯೋಗಕ್ಕೂ ಬಡತನಕ್ಕೂ ನಡುವೆ ಯಾವುದೇ ಸಂಬಂಧವೂ ಕಾಣಿಸುವುದಿಲ್ಲ.

ಅನೇಕರು ಮನರೇಗಾ ಅನುದಾನವು ಕೇವಲ ಶ್ರೀಮಂತ ರಾಜ್ಯಗಳಿಗೆ ಹೋಗುತ್ತಿದೆ ಎಂದು ವಾದಿಸುತ್ತಾರೆ. ನಿಜವಾಗಿ ಬಡತನ ಹಾಗೂ ಮನರೇಗಾ ಉದ್ಯೋಗ ಸೃಷ್ಟಿಯ ನಡುವೆ ಧನಾತ್ಮಕ ಸಂಬಂಧ ಇದ್ದರೆ ಒಳ್ಳೆಯದಿತ್ತು. ಬಿಹಾರ ಹಾಗೂ ಜಾರ್ಖಂಡ್‌ನಂತಹ ಬಡ ರಾಜ್ಯಗಳಲ್ಲಿ ಹೆಚ್ಚಿನ ಮನರೇಗಾ ಉದ್ಯೋಗವನ್ನು ಸೃಷ್ಟಿಸುವುದಕ್ಕೆ ಹಾಗೂ ಅದಕ್ಕಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗಿದ್ದರೆ ಒಳ್ಳೆಯದಿತ್ತು. ಈ ರಾಜ್ಯಗಳಿಗೆ ಹಾಗೆ ಮಾಡುವುದಕ್ಕೆ ನಿಜವಾಗಿ ಅಡ್ಡಿಯಾಗಿರುವುದು ಅಲ್ಲಿನ ಆಡಳಿತಾತ್ಮಕ ಸಾಮರ್ಥ್ಯದ ಕೊರತೆಯೋ ಅಥವಾ ರಾಜಕೀಯ ಇಚ್ಛಾಶಕ್ತಿಯ ಕೊರತೆಯೋ ಹೇಳುವುದು ಕಷ್ಟವಾಗಬಹುದು. ಬಹುಶಃ ಎರಡೂ ಕಾರಣಗಳಿರಬಹುದು. ಆದರೆ ವಾಸ್ತವವೆಂದರೆ, ಶ್ರೀಮಂತ ರಾಜ್ಯಗಳ ಮನರೇಗಾ ವೆಚ್ಚದ ಮೇಲೆ ಮಿತಿ ಹೇರುವುದರಿಂದ ಬಡ ರಾಜ್ಯಗಳಿಗೆ ಯಾವುದೇ ಅನುಕೂಲವಾಗುವುದಿಲ್ಲ. ಬದಲಾಗಿ ಹಾಗೆ ಮಾಡುವುದರಿಂದ 'ಬೇಡಿಕೆಗೆ ತಕ್ಕ ಕೆಲಸ' ಎಂಬ ಮೂಲ ತತ್ವಕ್ಕೇ



ಚಿತ್ರ–೫. ಮನರೇಗಾ ಮಾನವ–ದಿನದಲ್ಲಿ ಮಹಿಳೆಯರ ಪಾಲು (ಶೇಕಡವಾರು)

ಧಕ್ಕೆಯಾಗುತ್ತದೆ.

ರಾಜ್ಯಗಳ ಒಳಗೆ ಮನರೇಗಾ ಉದ್ಯೋಗವು ಹೆಚ್ಚಾಗಿ ಅವಶ್ಯಕತೆ ಇರುವವರಿಗೇ ತಲುಪಿದೆ. ಮನರೇಗಾ ನಡೆಯುತ್ತಿರುವ ಪ್ರದೇಶಗಳನ್ನು ಗಮನಿಸಿದರೆ, ಕೆಲಸ ಮಾಡುತ್ತಿರುವವರು ಬಹುತೇಕ ಬಡ ಕುಟುಂಬಗಳಿಂದ ಬಂದಿರುವುದು ತಿಳಿಯುತ್ತದೆ. ಇದನ್ನು ಹಲವಾರು ಅಧ್ಯಯನಗಳು ಸ್ಪಷ್ಟಪಡಿಸಿವೆ.

ಋತುಮಾನದ ಪ್ರವೃತ್ತಿ (Seasonal Patterns)


ಕೃಷಿ ಕೆಲಸಗಳು ಕಡಿಮೆ ಇರುವ ಕಾಲದಲ್ಲಿ ನರೇಗಾ ಆಸರೆಯಾಗುತ್ತದೆ ಎಂಬುದನ್ನು ಚಿತ್ರ ೪ ವಿವರಿಸುತ್ತದೆ. ೨೦೨೩–೨೪ರಲ್ಲಿ, ನರೇಗಾ ಉದ್ಯೋಗವು ಏಪ್ರಿಲ್–ಮೇ–ಜೂನ್ ತಿಂಗಳುಗಳಲ್ಲಿ ಗರಿಷ್ಠ ಮಟ್ಟಕ್ಕೆ ತಲುಪಿದೆ. ಇವು ಬೇಸಿಗೆಯ ಒಣ ತಿಂಗಳುಗಳಾಗಿದ್ದು, ಹೊಲಗಳಲ್ಲಿ ಕೆಲಸ ಕಡಿಮೆಯಿರುತ್ತದೆ. ಒಟ್ಟು ಮನರೇಗಾ ಮಾನವ ದಿನಗಳಲ್ಲಿ ಶೇ. ೪೦ ಕ್ಕಿಂತ ಹೆಚ್ಚು ಈ ಮೂರು ತಿಂಗಳುಗಳಲ್ಲೇ ಸೃಷ್ಟಿಯಾಗಿವೆ.

ಆಶ್ಚರ್ಯವೆನಿಸಿದರೂ, ಜುಲೈ ೨೦೨೩ರಲ್ಲೂ ಸಾಕಷ್ಟು ಪ್ರಮಾಣದ ನರೇಗಾ ಕೆಲಸ ನಡೆದಿದೆ. ಇದು ಭಾರತದ ಬಹುತೇಕ ಭಾಗಗಳಲ್ಲಿ ಮುಂಗಾರು ಮಳೆಯ ಕಾಲವಾಗಿದೆ. ವಾಸ್ತವವಾಗಿ ಇದರಲ್ಲಿ ಒಂದಿಷ್ಟು ಕೆಲಸಗಳು ಬೇಸಿಗೆಯಲ್ಲಿ ನಡೆದಿದ್ದು, ಯಾವುದೋ ಕಾರಣದಿಂದಾಗಿ ಪೋರ್ಟಲ್‌ನಲ್ಲಿ ನಂತರದ ದಿನಾಂಕದಲ್ಲಿ ನಮೂದಾಗಿರುವ ಸಾಧ್ಯತೆಯೂ ಇದೆ. ವರ್ಷದ ಉಳಿದ ಅವಧಿಯಲ್ಲಿ, ಮನರೇಗಾ ಉದ್ಯೋಗವು ಪ್ರತಿ ತಿಂಗಳು ಸುಮಾರು ೨೦ ಕೋಟಿ ಮಾನವ ದಿನಗಳಷ್ಟಿತ್ತು. ಇದು ೨೦೨೩–೨೪ರಲ್ಲಿ ಗಮನಿಸಿದ ಅಂಶ. ಆದರೆ ರಾಷ್ಟ್ರ ಮಟ್ಟದಲ್ಲಿ ಇತರ ವರ್ಷಗಳಲ್ಲೂ ನರೇಗಾ ಉದ್ಯೋಗದ ಹಂಚಿಕೆಯು ಬಹುತೇಕ ಇದೇ ರೀತಿಯಲ್ಲಿ ಆಗಿದೆ. ರಾಜ್ಯ ಮಟ್ಟದಲ್ಲಿ ಮಾತ್ರ ಸ್ಥಳೀಯ ಕೃಷಿ ಚಟುವಟಿಕೆಗಳ ಸ್ವರೂಪಕ್ಕೆ ಅನುಗುಣವಾಗಿ ಈ ಅಂಕಿಅಂಶಗಳಲ್ಲಿ ಗಣನೀಯ ವ್ಯತ್ಯಾಸಗಳು ಕಂಡುಬರುತ್ತವೆ.

ಮಹಿಳೆಯರ ಪಾಲ್ಗೊಳ್ಳುವಿಕೆ

ಆರಂಭದಿಂದಲೂ ಗ್ರಾಮೀಣ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಮನರೇಗಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ. ಇದಕ್ಕೆ ಹಲವು ಕಾರಣಗಳಿವೆ. ತಮ್ಮ ಸ್ವಂತ ದುಡಿಮೆಗೆ ಮನರೇಗಾ ಮಹಿಳೆಯರಿಗೆ ಒಂದು ಅಪರೂಪದ ಅವಕಾಶವನ್ನು ಒದಗಿಸಿದೆ. ಮನೆಯ ಸಮೀಪದಲ್ಲೇ ಕೆಲಸ ಸಿಗುತ್ತದೆ. ಕೆಲಸದ ವಾತಾವರಣ ಹೆಚ್ಚು ಸುರಕ್ಷಿತವಾಗಿರುತ್ತದೆ. ಪುರುಷರಷ್ಟೇ ವೇತನ ಇವರಿಗೂ ಸಿಗುತ್ತದೆ. ಸರ್ಕಾರಿ ಕೆಲಸ ಹೆಚ್ಚು ಗೌರವದ ಕೆಲಸ ಅನ್ನುವ ಭಾವನೆ ಕೆಲವು ಹೆಂಗಸರಲ್ಲಿ ಇರುವುದೂ ಇದಕ್ಕೆ ಕಾರಣವಿರಬಹುದು. ಕೆಲಸವನ್ನು ಹಂಚುವಾಗ "ಮಹಿಳೆಯರಿಗೆ ಆದ್ಯತೆ ಕೊಡಬೇಕು" ಎಂದು ಕಾಯ್ದೆ ತಿಳಿಸುತ್ತದೆ. "ಕನಿಷ್ಠ ಮೂರನೇ ಒಂದರಷ್ಟು ಮಹಿಳೆಯರಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು" ಎಂದು ಹೇಳುತ್ತದೆ. ಆದರೆ ಹೆಚ್ಚಿನ ರಾಜ್ಯಗಳಲ್ಲಿ ಇದಕ್ಕಾಗಿ ವಿಶೇಷ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಬರಲಿಲ್ಲ. ಅದರಷ್ಟಕ್ಕೆ ಮಹಿಳೆಯರ "ಕೋಟಾ" ಭರ್ತಿಯಾಯಿತು.

೨೦೦೮–೦೯ರಲ್ಲಿ ಯೋಜನೆಯನ್ನು ಇಡೀ ದೇಶಕ್ಕೆ ವಿಸ್ತರಿಸಿದಾಗ ರಾಷ್ಟ್ರ ಮಟ್ಟದಲ್ಲಿ ಮನರೇಗಾ ಮಾನವ ದಿನಗಳಲ್ಲಿ ಮಹಿಳಾ ಕಾರ್ಮಿಕರ ಪಾಲು ಸುಮಾರಾಗಿ ಶೇಕಡ ೫೦ರಷ್ಟಿತ್ತು. ಅದು ಕ್ರಮೇಣ ಹೆಚ್ಚುತ್ತಾ ಬಂದಿದೆ (ಚಿತ್ರ–೫). ಈಗ ಅದು ಶೇಕಡ ೬೦ರಷ್ಟಾಗಿದೆ. ಇನ್ನೂ ಹೆಚ್ಚುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಾಗಿ ತೋರಬಹುದು. ಆದರೆ ಮನರೇಗಾದ ನೈಜ ಕೂಲಿ ಸ್ಥಗಿತವಾಗಿದೆ. ಇದನ್ನು ಮುಂದೆ ಚರ್ಚಿಸಲಾಗಿದೆ. ಮಾರುಕಟ್ಟೆ ಕೂಲಿಗಿಂತ ಮನರೇಗಾ ಕೂಲಿ ಕಡಿಮೆಯಾದಂತೆ, ಪುರುಷರು ಬೇರೆ ಕೆಲಸಗಳಿಗೆ ಹೋಗುತ್ತಿದ್ದರು. ಅನಿವಾರ್ಯವಾಗಿ ಮಹಿಳೆಯರು



ಚಿತ್ರ ೬: ಮನರೇಗಾ ಮಾನವ ದಿನಗಳಲ್ಲಿ ಮಹಿಳೆಯರ ಪಾಲು, ೨೦೧೧–೧೨ ಹಾಗೂ ೨೦೨೩–೨೪ರಲ್ಲಿ (ಶೇಕಡವಾರು)

ಮತ್ತು ವಯಸ್ಸಾದವರು ಮಾತ್ರ ಉಳಿದುಕೊಳ್ಳುತ್ತಿದ್ದರು. ಈ ಹಿನ್ನಲೆಯಲ್ಲಿಯೂ ಇದನ್ನು ನೋಡಬೇಕು.


ಉದ್ಯೋಗ ಸೃಷ್ಟಿಯಲ್ಲಿ ಆದಂತೆ, ಮನರೇಗಾ ಉದ್ಯೋಗದಲ್ಲಿಯೂ ಮಹಿಳೆಯರ ಪಾಲು ವಿವಿಧ ರಾಜ್ಯಗಳ ನಡುವೆ ಗಣನೀಯವಾಗಿ ಬದಲಾಗುತ್ತದೆ. ಚಿತ್ರ ೬ನ್ನು ನೋಡಿ (೨೦೧೧–೧೨ ಮತ್ತು ೨೦೨೩–೨೪ರ ಎರಡು ನಕ್ಷೆಗಳು). ಪ್ರಮುಖವಾಗಿ ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿ, ಯೋಜನೆ ಆರಂಭವಾದ ನಂತರ ಹಲವು ವರ್ಷಗಳವರೆಗೆ ಮಹಿಳೆಯರ ಪಾಲು ನಿಗದಿಪಡಿಸಿದ ಕನಿಷ್ಠ ಮೂರನೇ ಒಂದು ಭಾಗಕ್ಕಿಂತ (ಒಂದು ತೃತೀಯಾಂಶ) ಕಡಿಮೆ ಇತ್ತು.

೨೦೧೧–೧೨ರಲ್ಲಿ, ಈ ಕನಿಷ್ಠ ಮಿತಿಯನ್ನು ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಜಮ್ಮು ಮತ್ತು ಕಾಶ್ಮೀರ ಹಾಗೂ ಈಶಾನ್ಯದ ಹಲವಾರು ರಾಜ್ಯಗಳಲ್ಲಿ ತಲುಪಲು ಸಾಧ್ಯವಾಗಿರಲಿಲ್ಲ. ಆದರೆ, ೨೦೨೩–೨೪ರ ಹೊತ್ತಿಗೆ (ಅದಕ್ಕಿಂತಲೂ ಮುಂಚೆಯೇ), ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಉಳಿದೆಲ್ಲಾ ರಾಜ್ಯಗಳಲ್ಲಿ ಮನರೇಗಾ ಕೆಲಸದಲ್ಲಿ ಮಹಿಳೆಯರ ಪಾಲು ಮೂರನೇ ಒಂದಕ್ಕಿಂತ ಹೆಚ್ಚೇ ಇತ್ತು.


ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಪಾಲು

2011ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿ ಮತ್ತು ಪಂಗಡಗಳ ಪಾಲು ಕ್ರಮವಾಗಿ

ಚಿತ್ರ 7: ಅನುಸೂಚಿತ ಜಾತಿ ಹಾಗು ಪಂಗಡಗಳು ಶೇಕಡವಾರು ಮನರೇಗಾ ಮಾನವ ದಿನಗಳು



ಚಿತ್ರ 8: ಮನರೇಗಾ ಕಾರ್ಮಿಕರಿಗೆ ಸಿಗುತ್ತಿದ್ದ ನೈಜ ಕೂಲಿ



ಶೇಕಡ 16.6 ಮತ್ತು 8.6 ರಷ್ಟಿತ್ತು. ಒಟ್ಟಾರೆ ಮನರೇಗಾ ಮಾನವ ದಿನಗಳಲ್ಲಿ ಅವರ ಪಾಲು ಆರಂಭದಿಂದಲೂ ಹೆಚ್ಚೇ ಇತ್ತು (ಚಿತ್ರ 7ನ್ನು ಗಮನಿಸಿ). ಆದರೆ ಇವರಲ್ಲಿನ ಬೆಳವಣಿಗೆಯು ಮಹಿಳೆಯರ ಪಾಲ್ಗೊಳ್ಳುವಿಕೆಯಲ್ಲಿ ಕಂಡುಬಂದಂತೆ ಒಂದು ಸರಳ ಮಾದರಿಯಲ್ಲಿಲ್ಲ.

2006–07 ಮತ್ತು 2010–11ರ ನಡುವೆ, ಪರಿಶಿಷ್ಟ ಬುಡಕಟ್ಟು (ST) ವರ್ಗದವರ ಪಾಲು ಸ್ಥಿರವಾಗಿ ಕುಸಿದರೆ, ಪರಿಶಿಷ್ಟ ಜಾತಿಯ (SC) ವರ ಪಾಲು ಹೆಚ್ಚಾಯಿತು. ಇದರಲ್ಲಿ ಆಶ್ಚರ್ಯವೇನಿಲ್ಲ; ಏಕೆಂದರೆ ಇದು ಮನರೇಗಾ ಕ್ರಮೇಣ ಇಡೀ ದೇಶಕ್ಕೆ ವಿಸ್ತರಣೆಯಾದ ಅವಧಿಯಾಗಿತ್ತು. ಆರಂಭದಲ್ಲಿ (ಫೆಬ್ರವರಿ 2, 2006) ಕಾಯ್ದೆ ಜಾರಿಗೆ ಬಂದ 200 ಜಿಲ್ಲೆಗಳಲ್ಲಿ ಹೆಚ್ಚಿನವು ಬುಡಕಟ್ಟು ಜನಸಂಖ್ಯೆ ಹೆಚ್ಚಿದ್ದ ಜಿಲ್ಲೆಗಳಾಗಿದ್ದವು. ಯೋಜನೆ ವಿಸ್ತರಣೆಯಾದಂತೆ, ಒಟ್ಟು ಉದ್ಯೋಗದಲ್ಲಿ ಪರಿಶಿಷ್ಟ ಬುಡಕಟ್ಟಿನವರ ಪಾಲು ಸಾಪೇಕ್ಷವಾಗಿ ಕಡಿಮೆಯಾಗಿ ಪರಿಶಿಷ್ಟ ಜಾತಿಯವರ ಪಾಲು ಹೆಚ್ಚಾಯಿತು. ಆದರೆ, 2010–11 ಮತ್ತು 2011–12ರ ನಡುವೆ ಇವೆರಡೂ ವರ್ಗಗಳ ಪಾಲು ಏಕೆ ಕುಸಿಯಿತು ಎಂಬುದು ಇಂದಿಗೂ ಒಗಟಾಗಿಯೇ ಇದೆ. ಅದರಲ್ಲೂ ಪರಿಶಿಷ್ಟ ಜಾತಿಯವರ ಪಾಲು ತೀವ್ರವಾಗಿ ಕುಸಿದಿದೆ. ಇದಕ್ಕೆ ಯಾವುದೇ ಸ್ಪಷ್ಟ ವಿವರಣೆ ದೊರೆತಿಲ್ಲ. 2011–12ರ ನಂತರ ಪರಿಶಿಷ್ಟ ಬುಡಕಟ್ಟಿನವರ ಪಾಲು ಸುಮಾರಾಗಿ ಅಷ್ಟೇ ಉಳಿದಿದೆ, ಆದರೆ ಪರಿಶಿಷ್ಟ ಜಾತಿಯವರ ಪಾಲು ಸ್ವಲ್ಪ ಕಡಿಮೆಯಾಗಿದೆ.

ಈ ಕುಸಿತದ ಹೊರತಾಗಿಯೂ, 2023–24ರಲ್ಲಿ ಮನರೇಗಾ ಕೆಲಸದಲ್ಲಿ ಎಸ್‌ಸಿ ಮತ್ತು ಎಸ್‌ಟಿಗಳ ಒಟ್ಟು ಪಾಲು (ಶೇ. 37), ಅವರ ಒಟ್ಟು ಜನಸಂಖ್ಯೆಯ ಪಾಲಿಗಿಂತ (ಸುಮಾರು ಶೇ. 25) ಇನ್ನೂ ಗಣನೀಯವಾಗಿ ಹೆಚ್ಚೇ ಇದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಇವರ ಒಟ್ಟು ಪಾಲು ಕಡಿಮೆಯಾಗಲು ಪ್ರಾರಂಭವಾಗಿದೆ. ಈ ಬಗ್ಗೆ ಆಳವಾದ ಅಧ್ಯಯನದ ಅಗತ್ಯವಿದೆ. ವಾಸ್ತವವಾಗಿ, ಮಾರುಕಟ್ಟೆ ಕೂಲಿಗಿಂತ ಮನರೇಗಾ ಕೂಲಿ ದರವು ಕುಸಿಯಲು ಪ್ರಾರಂಭವಾದಾಗಲೇ ಈ ವರ್ಗಗಳ ಪಾಲೂ ಕಡಿಮೆಯಾಗತೊಡಗಿದೆ. ಸಾಮಾನ್ಯವಾಗಿ ಮಾರುಕಟ್ಟೆ ಕೂಲಿ ಕಡಿಮೆಯಾದಾಗ ಬಡವರು ಮನರೇಗಾದತ್ತ ಹೆಚ್ಚು ಆಕರ್ಷಿತರಾಗಬೇಕಿತ್ತು, ಆದರೆ ಇಲ್ಲಿ ವಿಭಿನ್ನ ಪ್ರವೃತ್ತಿ ಕಂಡುಬರುತ್ತಿದೆ.


ನೈಜ ಕೂಲಿ

ಯೋಜನೆಯ ಆರಂಭಿಕ ಹಂತದಲ್ಲಿ, ಮನರೇಗಾ ಕಾರ್ಮಿಕರಿಗೆ ಕಾಯ್ದೆಯ ಸೆಕ್ಷನ್ 6(2)ರ ಅಡಿಯಲ್ಲಿ ಆಯಾ ರಾಜ್ಯದ ಕೃಷಿ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಠ ವೇತನವನ್ನು ಪಡೆಯುವ ಹಕ್ಕಿತ್ತು. ಆ ಸಮಯದಲ್ಲಿ ಮನರೇಗಾ ಕೂಲಿಯು ಮಾರುಕಟ್ಟೆ ಕೂಲಿಗಿಂತ ಹೆಚ್ಚಾಗಿರುತ್ತಿತ್ತು; ಕೆಲವು ರಾಜ್ಯಗಳಲ್ಲಂತೂ ಇದು ಗಣನೀಯವಾಗಿ ಹೆಚ್ಚಿತ್ತು. ಆದರೆ 2009ರಲ್ಲಿ ಕೇಂದ್ರ ಸರ್ಕಾರವು ತನ್ನ ಕಾರ್ಯವೈಖರಿಯನ್ನು ಬದಲಿಸಿ, ಕಾಯ್ದೆಯ ಸೆಕ್ಷನ್ 6(1) ಅನ್ನು ಜಾರಿಗೆ ತಂದಿತು. ಇದು ಕೇಂದ್ರ ಸರ್ಕಾರಕ್ಕೆ ಮನರೇಗಾ ಕೂಲಿ ದರಗಳನ್ನು ನಿಶ್ಚಯಿಸುವ ಅಧಿಕಾರವನ್ನು ನೀಡಿತು.

ಇದರ ಅಡಿಯಲ್ಲಿ ದಿನಕ್ಕೆ 100 ರೂ.ಗಳ ಏಕರೂಪದ ಕೂಲಿ ದರವನ್ನು ಜಾರಿಗೆ ತರಲಾಯಿತು. ಕೃಷಿ ಕಾರ್ಮಿಕರ ಕನಿಷ್ಠ ವೇತನವು 100 ರೂ.ಗಿಂತ ಹೆಚ್ಚಿದ್ದ ಕೆಲವು ರಾಜ್ಯಗಳಲ್ಲಿ ಮಾತ್ರ ಸ್ವಲ್ಪ ಹೆಚ್ಚಿನ ಹಣವನ್ನು ನೀಡಲಾಯಿತು. ಅಂದಿನಿಂದ, ಕೇಂದ್ರ ಸರ್ಕಾರವು ಪ್ರತಿ ವರ್ಷ ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕಕ್ಕೆ (CPI-AL) ಅನುಗುಣವಾಗಿ ಕೂಲಿಯನ್ನು ಪರಿಷ್ಕರಿಸತೊಡಗಿತು. ಸರಳವಾಗಿ ಹೇಳುವುದಾದರೆ, ನೈಜ ಮೌಲ್ಯದಲ್ಲಿ (Inflation-adjusted) ಮನರೇಗಾ ಕೂಲಿಯು ಕಳೆದ ಹಲವು ವರ್ಷಗಳಿಂದ ಹೆಚ್ಚಾಗದೆ ಸ್ಥಗಿತಗೊಂಡಿದೆ.

ಈ ನಡುವೆ, ಕಾರ್ಮಿಕ ಮಾರುಕಟ್ಟೆಯಲ್ಲಿ ಹೊಸ ಬೆಳವಣಿಗೆಯೊಂದು ಸಂಭವಿಸಿತು: ದೀರ್ಘಕಾಲ ನಿಧಾನವಾಗಿ ಏರುತ್ತಿದ್ದ ಕೃಷಿ ಕ್ಷೇತ್ರದ ನೈಜ ಕೂಲಿ ದರಗಳು 2007ರ ಸುಮಾರಿಗೆ ಸ್ಥಿರವಾಗಿ ಏರಲು ಪ್ರಾರಂಭಿಸಿ 2014ರವರೆಗೆ ಮುಂದುವರಿದವು. ಅದರ ನಂತರ, ಮತ್ತೆ ಕೂಲಿ ಏರಿಕೆಯ ದರ ಬಹುತೇಕ ಸ್ಥಗಿತಗೊಂಡಿತು. ಲೇಬರ್ ಬ್ಯೂರೋ ಸಂಗ್ರಹಿಸಿದ 'ಗ್ರಾಮೀಣ

ಚಿತ್ರ –9: ಮನರೇಗಾ ಒಟ್ಟು ವೆಚ್ಚದಲ್ಲಿ ಆಡಳಿತಾತ್ಮಕ ವೆಚ್ಚದ ಪಾಲು



ಭಾರತದ ಕೂಲಿ ದರಗಳ' ದತ್ತಾಂಶದಿಂದ ಈ ಪ್ರವೃತ್ತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ (ಚಿತ್ರ 8ನ್ನು ಗಮನಿಸಿ).

ಕೂಲಿ ದರಗಳ ಲೆಕ್ಕಾಚಾರ ಮತ್ತು ಪ್ರವೃತ್ತಿ

ಈ ನಕ್ಷೆಯಲ್ಲಿ ಬಳಸಿರುವ ಅಖಿಲ ಭಾರತ ಮನರೇಗಾ ಕೂಲಿ ದರಗಳನ್ನು ನೇರವಾಗಿ ಮ್ಯಾನೇಜ್‌ಮೆಂಟ್ ಇನ್ಫರ್ಮೇಷನ್ ಸಿಸ್ಟಮ್‌ನಿಂದ ಪಡೆಯಲಾಗಿದೆ. ನೇರ ಮಾಹಿತಿ ಲಭ್ಯವಿಲ್ಲದ ವರ್ಷಗಳಲ್ಲಿ, ಒಟ್ಟು ವೇತನ ವೆಚ್ಚವನ್ನು ಮನರೇಗಾ ಉದ್ಯೋಗದ ಒಟ್ಟು ಮಾನವ ದಿನಗಳಿಂದ ಭಾಗಿಸುವ ಮೂಲಕ ಲೆಕ್ಕ ಹಾಕಲಾಗಿದೆ (ನೇರ ಮಾಹಿತಿ ಲಭ್ಯವಿರುವ ವರ್ಷಗಳಲ್ಲಿ ಈ ಎರಡೂ ವಿಧಾನಗಳು ಒಂದೇ ರೀತಿಯ ಫಲಿತಾಂಶವನ್ನು ನೀಡುತ್ತವೆ).

ಲಿಂಗಾಧಾರಿತ ಕೃಷಿ ಕೂಲಿಯನ್ನು ಲೆಕ್ಕ ಹಾಕಲು ಮೂರು ಉದ್ಯೋಗಗಳ ಕೂಲಿಯ ಸರಾಸರಿಯನ್ನು ತೆಗೆದುಕೊಳ್ಳಲಾಗಿದೆ. ಇದಕ್ಕೆ ಆರಂಭಿಕ ಕೃಷಿ ಚಟುವಟಿಕೆಗಳು ಮತ್ತು ಕೊಯ್ಲಿನ ಸಮಯದ ಚಟುವಟಿಕೆಗಳನ್ನು ಪ್ರತ್ಯೇಕವಾಗಿ ಪರಿಗಣಿಸಲಾಗಿದೆ. ಬಿತ್ತನೆ, ನಾಟಿ ಮತ್ತು ಕಳೆ ತೆಗೆಯುವುದನ್ನು 'ಆರಂಭಿಕ ಚಟುವಟಿಕೆಗಳು' ಎಂದು ಹಾಗೂ ಕೊಯ್ಲು, ಒಕ್ಕಣೆ ಮತ್ತು ತೂರುವುದನ್ನು 'ಕೊಯ್ಲಿನ ಸಮಯದ ಚಟುವಟಿಕೆಗಳು' ಎಂದು ವರ್ಗೀಕರಿಸಲಾಗಿದೆ. ಈ ಎರಡೂ ಗುಂಪಿನ ಚಟುವಟಿಕೆಗಳಿಗೆ ಕೂಲಿ ದರಗಳು ಬಹುತೇಕ ಒಂದೇ ಸಮನಾಗಿವೆ. ಎಲ್ಲಾ ನಗದು ಕೂಲಿಯನ್ನು ಕೃಷಿ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ ಬಳಸಿ 2014–15ರ ಬೆಲೆಗಳಿಗೆ ಅನುಗುಣವಾಗಿ 'ನೈಜ ವೇತನ'ಕ್ಕೆ ಪರಿವರ್ತಿಸಲಾಗಿದೆ.

ಇಲ್ಲಿ ಒಂದು ಸ್ಪಷ್ಟವಾದ ಪ್ರವೃತ್ತಿಯನ್ನು ಗಮನಿಸಬಹುದು: ಆರಂಭದಲ್ಲಿ ಮನರೇಗಾ ಕೂಲಿಯು ಕೃಷಿ ಕೂಲಿಗಿಂತ ಸ್ವಲ್ಪ ಹೆಚ್ಚಿತ್ತು. ಆದರೆ ಮಾರುಕಟ್ಟೆ ಕೂಲಿ ಸ್ಥಿರವಾಗಿ ಏರತೊಡಗಿದಾಗ, ಮನರೇಗಾ ಕೂಲಿಯ ನೈಜ ಮೌಲ್ಯದಲ್ಲಿ ಏರಿಕೆಯಾಗಲಿಲ್ಲ; ಅದು ಸ್ಥಗಿತಗೊಂಡಿತು. ಹಾಗಾಗಿ ಅದು ಮಾರುಕಟ್ಟೆ ಕೂಲಿಗಿಂತ ಹಿಂದೆ ಬಿತ್ತು. 2014–15ರ ಹೊತ್ತಿಗೆ, ಮನರೇಗಾ ಕೂಲಿಯು ಪುರುಷ ಕೃಷಿ ಕಾರ್ಮಿಕರ ಕೂಲಿಯ ಕೇವಲ ಮೂರರಲ್ಲಿ ಎರಡು (2/3) ಭಾಗದಷ್ಟಾಯಿತು. ನಂತರದ ದಿನಗಳಲ್ಲಿ ಈ ಅಂತರವು ಹಾಗೆಯೇ ಮುಂದುವರಿಯಿತು.

ನೈಜ ವೇತನ ಸ್ಥಗಿತಗೊಂಡಿದ್ದರ ಜೊತೆಗೆ, ಕೂಲಿಯ ಪಾವತಿಯಲ್ಲೂ ಸಮಸ್ಯೆಗಳು ಪ್ರಾರಂಭವಾದವು (ಮುಖ್ಯವಾಗಿ ವಿಳಂಬಿತ ಪಾವತಿಗಳು, ಪಾವತಿಗಳನ್ನು ಬೇರೆ ಖರ್ಚುಗಳಿಗೆ ಬಳಸಿಕೊಂಡಿದ್ದು, ತಿರಸ್ಕೃತಗೊಂಡ ಅಥವಾ ತಡೆಹಿಡಿಯಲಾದ ಪಾವತಿಗಳು). ಇದರಿಂದ ಅನೇಕ ಗ್ರಾಮೀಣ ಕಾರ್ಮಿಕರಿಗೆ ಮನರೇಗಾದ ಮೇಲಿದ್ದ ಆಸಕ್ತಿ ಕಡಿಮೆಯಾಗತೊಡಗಿತು. ಆದರೂ ಅಧಿಕೃತವಾಗಿ ಉದ್ಯೋಗದ ಪ್ರಮಾಣ ಕಡಿಮೆಯಾಗಲಿಲ್ಲ. ಇದಕ್ಕೆ ಬಹುಶಃ ಎರಡು ಸಾಧ್ಯತೆಗಳಿವೆ:

1. ಆರಂಭದಿಂದಲೂ ಮನರೇಗಾ ಕೆಲಸಕ್ಕಿದ್ದ ಬೇಡಿಕೆಯನ್ನು ಸಂಪೂರ್ಣವಾಗಿ ಪೂರೈಸಲಾಗಿರಲಿಲ್ಲ (ಅಂದರೆ ಇನ್ನೂ ಪೂರೈಕೆಯಾಗದ ಬೇಡಿಕೆ ಇತ್ತು).


2. ಮನರೇಗಾ ಮಾನವ ದಿನಗಳ ಲೆಕ್ಕಾಚಾರದಲ್ಲಿ ನಕಲಿ ದಿನಗಳ ಪಾಲು ಹೆಚ್ಚುತ್ತಿರಬಹುದು. ದುರದೃಷ್ಟವಶಾತ್, ಅಧಿಕೃತ ಅಂಕಿಅಂಶಗಳು ಈ ಬಗ್ಗೆ ಯಾವುದೇ ಬೆಳಕು ಚೆಲ್ಲುವುದಿಲ್ಲ.

ಆಡಳಿತಾತ್ಮಕ ವೆಚ್ಚ ಚಿತ್ರ 9ರಲ್ಲಿ ಇಲ್ಲಿಯವರೆಗೆ ಅಷ್ಟಾಗಿ ಗಮನ ಸೆಳೆಯದೇ ಇದ್ದ ಒಂದು ಅಂಶ ಕಾಣುತ್ತದೆ. ಅದೇನೆಂದರೆ 2014–15 ರಿಂದ ಮನರೇಗಾ ಒಟ್ಟು ವೆಚ್ಚದಲ್ಲಿ ಆಡಳಿತಾತ್ಮಕ ವೆಚ್ಚದ ಪಾಲು ತೀವ್ರವಾಗಿ ಕುಸಿದಿದೆ.

ಆಡಳಿತಾತ್ಮಕ ವೆಚ್ಚ

ಈ ಕಾಯ್ದೆಯ ಅಡಿಯಲ್ಲಿ, ಆಡಳಿತಾತ್ಮಕ ವೆಚ್ಚಗಳಿಗೆ ಭತ್ಯೆಯನ್ನು ನಿಗದಿಪಡಿಸುವುದು ಮತ್ತು ಅವುಗಳನ್ನು ಪಾವತಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಆರಂಭದಲ್ಲಿ, ಸಂಬಂಧಿತ ರಾಜ್ಯದ ಒಟ್ಟು ಮನರೇಗಾ ವೆಚ್ಚದ ಗರಿಷ್ಠ ಶೇ.4 ರಷ್ಟನ್ನು ಆಡಳಿತಾತ್ಮಕ

೭ ಮತ್ತು ೧೫ ದಿನಗಳೊಳಗೆ ಪಾವತಿ ಆದೇಶಗಳು ಮಂಜೂರಾದ ಶೇಕಡವಾರು ಸಂಖ್ಯೆ (೨೦೨೧–೨೨ರಲ್ಲಿ)



ಭತ್ಯೆಯಾಗಿ ನಿಗದಿಪಡಿಸಲಾಗಿತ್ತು; ಈ ಮಾನದಂಡವು ಇಂದಿಗೂ ಅನ್ವಯಿಸುತ್ತದೆ (ಭಾರತ ಸರ್ಕಾರ, 2024). ನೈಜ ಆಡಳಿತಾತ್ಮಕ ವೆಚ್ಚಗಳು ಒಂದೇ ಸಮನೆ ಏರುತ್ತಾ ಹೋಗಿದ್ದರಿಂದ 2014–15ರಲ್ಲಿ ಅದು ಶೇಕಡ 6ರಷ್ಟಾಯಿತು. ಆದರೆ ನಂತರದ ದಿನಗಳಲ್ಲಿ ನಿರಂತರವಾಗಿ ಕುಸಿಯುತ್ತಾ ಬಂದು, ಕೊನೆಗೆ ಆರಂಭದಲ್ಲಿದ್ದ ಶೇಕಡ 3–4ಕ್ಕೆ ಬಂದು ಮುಟ್ಟಿವೆ.

ಆಡಳಿತಾತ್ಮಕ ವೆಚ್ಚಗಳು ಕಡಿಮೆಯಿರುವುದು ಒಳ್ಳೆಯ ವಿಷಯವೆಂದು ಮೇಲ್ನೋಟಕ್ಕೆ ಅನ್ನಿಸಬಹುದು, ಆದರೆ ಇದು ಹಾಗಲ್ಲ. ಮನರೇಗಾ ಅನುಷ್ಠಾನದಲ್ಲಿ ಆಡಳಿತಾತ್ಮಕ ವೆಚ್ಚಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಏಕೆಂದರೆ ಇವು ಗ್ರಾಮ ಉದ್ಯೋಗ ಸಹಾಯಕರು, ಕಾರ್ಯಕ್ರಮ ಅಧಿಕಾರಿಗಳು, ಕಂಪ್ಯೂಟರ್ ಆಪರೇಟರ್‌ಗಳು, ಕಿರಿಯ ಇಂಜಿನಿಯರ್‌ಗಳು ಮತ್ತು ಇತರ ಸಿಬ್ಬಂದಿಯನ್ನು ಒಳಗೊಂಡ ಬೃಹತ್ ಪೂರಕ ವ್ಯವಸ್ಥೆಗೆ ಹಣ ಒದಗಿಸುತ್ತವೆ. ಕೇವಲ ಅವರ ಸಂಬಳಕ್ಕೆ ಮಾತ್ರವಲ್ಲದೆ ಅವರಿಗೆ ಅಗತ್ಯವಿರುವ ಸೌಲಭ್ಯಗಳಿಗೂ ಇದು ಬಳಕೆಯಾಗುತ್ತದೆ. ಸಾಮಾಜಿಕ ಲೆಕ್ಕಪರಿಶೋಧನೆಗಳಿಗೂ (Social Audits) ಆಡಳಿತಾತ್ಮಕ ವೆಚ್ಚಗಳಿಂದಲೇ ಧನಸಹಾಯ ನೀಡಲಾಗುತ್ತದೆ. ಈ ನಿರ್ಣಾಯಕ ಬೆಂಬಲ ವ್ಯವಸ್ಥೆಗೆ ಶೇ. 6ರಷ್ಟು ಹಣವನ್ನು ನಿಗದಿಮಾಡಿರುವುದು ದೊಡ್ಡ ಮೊತ್ತವೇನಲ್ಲ.

ಈ ವ್ಯವಸ್ಥೆಯಿಂದ ಇನ್ನೂ ಹಲವು ಅಂತರ್ಗತ ಉಪಯೋಗಗಳಿವೆ. ಇದು ಗ್ರಾಮ ಪಂಚಾಯತ್‌ಗಳಿಗೆ ಮತ್ತು ಬ್ಲಾಕ್ ಕಚೇರಿಗಳಿಗೆ ಅತ್ಯಗತ್ಯ ಸಂಪನ್ಮೂಲವಾಗಿದೆ ಹಾಗೂ ಕೌಶಲ್ಯ ಅಭಿವೃದ್ಧಿಗೂ ಇದರ ಕೊಡುಗೆ ಮಹತ್ವದ್ದು. ಈ ದೃಷ್ಟಿಕೋನದಿಂದ ನೋಡಿದಾಗ, 2014–15ರಿಂದ ಆಡಳಿತಾತ್ಮಕ ವೆಚ್ಚಗಳ ಪಾಲಿನಲ್ಲಿ ಕಂಡುಬಂದಿರುವ ತೀವ್ರ ಕುಸಿತವು ನಿಜಕ್ಕೂ ಆತಂಕದ ವಿಷಯವಾಗಿದೆ. ಪ್ರಾಯಶಃ, ಆಡಳಿತಾತ್ಮಕ ವೆಚ್ಚ ಕಡಿಮೆಯಾಗಿದ್ದು ಆ ಅವಧಿಯಲ್ಲಿ ಮನರೇಗಾ ಅನುಷ್ಠಾನದ ಗುಣಮಟ್ಟ ಹದಗೆಡಲು ಕಾರಣವೂ ಆಗಿರಬಹುದು.

ಕೂಲಿ ಪಾವತಿಗಳು

ನಮ್ಮ ಕೊನೆಯ ಚಿತ್ರವು ಅತ್ಯಂತ ಪ್ರಮುಖ ವಿಷಯವಾದ ಕೂಲಿ ಪಾವತಿಯಲ್ಲಿನ ವಿಳಂಬಕ್ಕೆ ಸಂಬಂಧಿಸಿದೆ. ಈ ವಿಷಯದ ಬಗ್ಗೆ ಮನರೇಗಾದ MIS ವ್ಯವಸ್ಥೆಯಿಂದ ಸ್ಪಷ್ಟ ಮಾಹಿತಿ ಸಿಗುವುದಿಲ್ಲ ಮತ್ತು ಕೆಲವು ಸಂದರ್ಭಗಳಲ್ಲಿ ಅದು ದಾರಿ ತಪ್ಪಿಸುತ್ತದೆ. ಕಾಯ್ದೆಯ ಪ್ರಕಾರ, ಕೆಲಸ ಮುಗಿದ 14 ದಿನಗಳ ಒಳಗೆ ಕಾರ್ಮಿಕರಿಗೆ ವೇತನ ಪಾವತಿಯಾಗಬೇಕು. ಅದು ಅವರ ಹಕ್ಕು. ಆದರೆ ಯೋಜನೆ ಜಾರಿಯಾಗಿ 20 ವರ್ಷಗಳ ನಂತರವೂ ಇದು ಕೇವಲ ಕನಸಾಗಿಯೇ ಉಳಿದಿದೆ.

ಮನರೇಗಾ ಕೂಲಿ ಪಾವತಿ ಪ್ರಕ್ರಿಯೆಯು ಎರಡು ಹಂತಗಳಲ್ಲಿ ನಡೆಯುತ್ತದೆ.

ಮೊದಲ ಹಂತ: 'ಫಂಡ್ ಟ್ರಾನ್ಸ್‌ಫರ್ ಆರ್ಡರ್' (FTO) ಸಿದ್ಧಪಡಿಸುವುದು. ಇದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ.

ಎರಡನೇ ಹಂತ: ಇದು ಕೇಂದ್ರದ ಜವಾಬ್ದಾರಿಯಾಗಿದ್ದು, ಕೇಂದ್ರ ಸರ್ಕಾರವು ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಹಣವನ್ನು ಪಾವತಿಸುತ್ತದೆ.

ನಿಯಮಗಳ ಪ್ರಕಾರ, ಪ್ರತಿಯೊಂದು ಹಂತವು ಏಳು ದಿನಗಳೊಳಗೆ ಪೂರ್ಣಗೊಳ್ಳಬೇಕು. ಆದರೆ, 10 ರಾಜ್ಯಗಳಲ್ಲಿ ನಡೆಸಿದ ಅಧ್ಯಯನದ ಪ್ರಕಾರ, 2016–17ರಲ್ಲಿ ಅರ್ಧದಷ್ಟು ಪಾವತಿಗಳಿಗೆ ಮೊದಲ ಹಂತ ಪೂರೈಸಲು 15 ದಿನಗಳಿಗಿಂತ ಹೆಚ್ಚು ಕಾಲ ಬೇಕಾಗಿತ್ತು. ಇಂದು ಮೊದಲ ಹಂತದ ವಿಳಂಬಗಳು ಕಡಿಮೆಯಾಗಿವೆ. ಆದರೆ, ಎರಡನೇ ಹಂತದಲ್ಲಿ ಇಂದಿಗೂ ವಿಳಂಬವಾಗುತ್ತಿದೆ. ಮುಖ್ಯವಾಗಿ ಹಣಕಾಸು ವರ್ಷ ಮುಗಿಯುವ ಮೊದಲೇ ಮನರೇಗಾ ನಿಧಿ



ಕೃಪೆ: ideas for i
https://www.id
inequality/a-sh
in-10-charts

ಖಾಲಿಯಾಗುವುದರಿಂದ ಕೂಲಿ ಪಾವತಿಗಳು ತಾತ್ಕಾಲಿಕವಾಗಿ ಸ್ಥಗಿತಗೊಳ್ಳುತ್ತವೆ. ಈ ಎರಡನೇ ಹಂತದ ವಿಳಂಬಗಳ ಬಗ್ಗೆ ಎಂಐಎಸ್ ವರದಿ ಮಾಡುವುದಿಲ್ಲ.

ಇತ್ತೀಚಿನ ಅಧ್ಯಯನವೊಂದು (ಭೀಮರಶೆಟ್ಟಿ ಮತ್ತು ಇತರರು, 2025) 2021–22ರಲ್ಲಿ 3.1 ಕೋಟಿಗೂ ಹೆಚ್ಚು ಪಾವತಿಗಳನ್ನು ವಿಶ್ಲೇಷಿಸಿ ವಿಭಿನ್ನ ಚಿತ್ರಣವನ್ನು ನೀಡಿದೆ (ಚಿತ್ರ 10). ಕೇವಲ ಶೇಕಡ 37ರಷ್ಟು ಪಾವತಿಗಳು ಮಾತ್ರ ನಿಗದಿತ 7 ದಿನಗಳೊಳಗೆ ಪೂರ್ಣಗೊಂಡಿವೆ. ಸುಮಾರು ಶೇಕಡ 42ರಷ್ಟು ಪಾವತಿಗಳು FTO ಆದ ಮೇಲೂ 15 ದಿನಗಳಿಗಿಂತ ಹೆಚ್ಚು ವಿಳಂಬವಾಗಿವೆ. ಈ ವಿಳಂಬದ ಪ್ರಮಾಣವು ಬಿಹಾರದಲ್ಲಿ 21% ಇದ್ದರೆ, ಪಶ್ಚಿಮ ಬಂಗಾಳದಲ್ಲಿ 64% ರಷ್ಟಿದೆ. ಇಲ್ಲಿ ರಾಜಕೀಯ ಪಕ್ಷಪಾತದ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ.

ಅಲ್ಲದೆ, ಆಧಾರ್ ಆಧಾರಿತ ಪಾವತಿಗಳು (APBS) ಬ್ಯಾಂಕ್ ಖಾತೆ ಆಧಾರಿತ ಪಾವತಿಗಳಿಗಿಂತ ವೇಗವಾಗಿಲ್ಲ ಎಂದು ಅಧ್ಯಯನವು ತೋರಿಸಿದೆ. ಈ ಸಂಕೀರ್ಣ ವ್ಯವಸ್ಥೆಯಿಂದ ಕಾರ್ಮಿಕರಿಗೆ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚಾಗಿದೆ.

ಉಪಸಂಹಾರ

ಮನರೇಗಾದ ಸಂಕ್ಷಿಪ್ತ ಇತಿಹಾಸವು ನಮಗೆ ಮಿಶ್ರ ಫಲಿತಾಂಶಗಳನ್ನು ನೀಡುತ್ತದೆ. ಅಧಿಕೃತ ಅಂಕಿಅಂಶಗಳ ಪ್ರಕಾರ, ಮನರೇಗಾ ಬಡವರಿಗೆ ಮತ್ತು ಅಂಚಿನಲ್ಲಿರುವ ವರ್ಗಗಳಿಗೆ, ವಿಶೇಷವಾಗಿ ಬಿಕ್ಕಟ್ಟಿನ ಸಮಯದಲ್ಲಿ ದೊಡ್ಡ ಮಟ್ಟದ ಆಸರೆಯನ್ನು ಒದಗಿಸಿದೆ. ಆದರೆ, ಈ ಸಾಧನೆಗಳು ಕೇವಲ ಕೆಲವು ರಾಜ್ಯಗಳಿಗೆ ಮಾತ್ರ ಸೀಮಿತವಾಗಿವೆ. ಅನೇಕ ಬಡ ರಾಜ್ಯಗಳಲ್ಲಿ 'ಬೇಡಿಕೆಗೆ ತಕ್ಕ ಕೆಲಸ' ಎಂಬ ಮೂಲ ತತ್ವವು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

ಅಧಿಕೃತ ಅಂಕಿಅಂಶಗಳನ್ನು ಕುಟುಂಬ ಸಮೀಕ್ಷೆಗಳಂತಹ ಸ್ವತಂತ್ರ ಮೂಲಗಳಿಂದ ದೃಢಪಡಿಸಿಕೊಳ್ಳಬೇಕಾದ ಅಗತ್ಯವಿದೆ. 2011–12ರ ನಂತರ ಇಂತಹ ಸಮೀಕ್ಷೆಗಳ ಕೊರತೆಯಿರುವುದು ದೊಡ್ಡ ಕಂದಕವಾಗಿದೆ. ಮನರೇಗಾ ಬಡದೇಶವೊಂದರಲ್ಲಿ ಉದ್ಯೋಗ ಖಾತರಿಯನ್ನು ಸುಸ್ಥಿರವಾಗಿ ನಡೆಸಬಹುದು ಎಂಬುದನ್ನು ಸಾಬೀತುಪಡಿಸಿದೆ. ಆದರೆ ಕೆಲಸ ಕೇಳಿದ ತಕ್ಷಣ ಕೆಲಸ ಸಿಗುವ 'ಕೆಲಸದ ಹಕ್ಕನ್ನು' ಪ್ರಾಯೋಗಿಕವಾಗಿ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಳಿಸಲು ನಾವು ಸಾಗಬೇಕಾದ ದಾರಿ ಇನ್ನೂ ಬಹಳಷ್ಟಿದೆ.

ವಿಬಿ–ಜಿ ರಾಮ್–ಜಿ: ಮನರೇಗಾ ನಿರ್ಮಿಸಿದ ಪರಂಪರೆಯ ಬುಡಮೇಲು

ಜೀನ್ ಡ್ರೇಜ್

ಇಪ್ಪತ್ತು ವರ್ಷಗಳ ಹಿಂದೆ, ಭಾರತವು 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ'ಯನ್ನು (NREGA) ಜಾರಿಗೆ ತರುವ ಮೂಲಕ ಜಗತ್ತಿಗೆ ಮಾದರಿಯಾಗಿತ್ತು. ಉದ್ಯೋಗ ಖಾತರಿ ಕಲ್ಪನೆ ಸಂಪೂರ್ಣವಾಗಿ ಹೊಸದೇನಲ್ಲ. ಬಿಕ್ಕಟ್ಟಿನ ಸಮಯದಲ್ಲಿ ಪರಿಹಾರವಾಗಿ ಸಾರ್ವಜನಿಕ ಕಾಮಗಾರಿಗಳನ್ನು ಬಳಸುವ ಸುದೀರ್ಘ ಇತಿಹಾಸ ಭಾರತಕ್ಕಿದೆ. ಮಹಾರಾಷ್ಟ್ರವು 1970ರ ದಶಕದ ಆರಂಭದಿಂದಲೇ ತನ್ನ ಉದ್ಯೋಗ ಖಾತರಿ ಯೋಜನೆಯ ಮೂಲಕ ದಾರಿ ತೋರಿಸಿತ್ತು. ಆದರೆ ನರೇಗಾ ಈ ಕಲ್ಪನೆಯನ್ನು ಇನ್ನಷ್ಟು ವಿಸ್ತರಿಸಿತು ಮತ್ತು ಜಗತ್ತಿಗೆ ಸ್ಫೂರ್ತಿಯಾಯಿತು. ಇದು ಪಕ್ಷದ ಎಲ್ಲೆ ಮೀರಿ ಬೆಳೆದಿದ್ದ ರಾಷ್ಟ್ರೀಯ ಕಾರ್ಯಕ್ರಮವಾಗಿತ್ತು ಮತ್ತು ಸಂಸತ್ತಿನಲ್ಲಿ ಸರ್ವಾನುಮತದ ಬೆಂಬಲ ಪಡೆದಿತ್ತು.

ಈ ಕಾರ್ಯಕ್ರಮವು ಉತ್ತಮವಾಗಿ ನಡೆಯುತ್ತಿತ್ತು ಎನ್ನುವುದಕ್ಕೆ ಆರು ವರ್ಷಗಳ ನಂತರ, 2011–12ರಲ್ಲಿ ಪುರಾವೆಗಳೂ ಸಿಕ್ಕವು. ಆ ವೇಳೆಗೆ 'ಮನರೇಗಾ' (MGNREGA ಎಂದು ಮರುನಾಮಕರಣಗೊಂಡಿತ್ತು) ಅಧಿಕೃತವಾಗಿ ವರ್ಷಕ್ಕೆ 5 ಕೋಟಿ ಗ್ರಾಮೀಣ ಕುಟುಂಬಗಳಿಗೆ 200 ಕೋಟಿಗೂ ಹೆಚ್ಚು ಮಾನವ ದಿನಗಳ ಉದ್ಯೋಗವನ್ನು ಕೊಟ್ಟಿತ್ತು. ಉದ್ಯೋಗ ಪಡೆದುಕೊಂಡವರಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರು ಮತ್ತು ಶೇಕಡ 40ಕ್ಕಿಂತ ಹೆಚ್ಚು ಜನ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರು. ಈ ಅಧಿಕೃತ ಅಂಕಿಅಂಶಗಳನ್ನು 68ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಎರಡನೇ ಭಾರತೀಯ ಮಾನವ ಅಭಿವೃದ್ಧಿ ಸಮೀಕ್ಷೆಯಂತಹ ಸ್ವತಂತ್ರ ಸಮೀಕ್ಷೆಗಳು ಪುಷ್ಟೀಕರಿಸಿದ್ದವು. ಗ್ರಾಮೀಣ ವೇತನದಲ್ಲೂ ಹಿಂದೆಂದಿಗಿಂತ ಹೆಚ್ಚಿನ ಏರಿಕೆ ಕಾಣತೊಡಗಿತು. ಮನರೇಗಾ ಉತ್ಪಾದಕ ಕೆಲಸಗಳನ್ನು ಕಸಿದುಕೊಳ್ಳಲಿಲ್ಲ, ಬದಲಿಗೆ ಆರ್ಥಿಕ ದಕ್ಷತೆ ಮತ್ತು ಒಟ್ಟು ಉತ್ಪಾದಕತೆಯನ್ನು ಹೆಚ್ಚಿಸಿತು ಎಂಬುದನ್ನು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ. ಮನರೇಗಾದ ಆರಂಭಿಕ ವರ್ಷಗಳಲ್ಲಿನ ಕಂಡುಬಂದ ಉತ್ಸಾಹ ಮತ್ತು ಹುರುಪಿನಿಂದ ಈ ಸಾಧನೆಗಳು ಸಾಧ್ಯವಾದವು.

ನಂತರದ ದಿನಗಳಲ್ಲಿ, ಅನುಷ್ಠಾನಕ್ಕೆ ಅಡೆತಡೆಗಳು ಪ್ರಾರಂಭವಾದವು. ಕೇಂದ್ರೀಕರಣ, ಅನುದಾನದ ಕೊರತೆ, ವೇತನ ಪಾವತಿಯಲ್ಲಿ ವಿಳಂಬ, ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿನ ವೈಫಲ್ಯ ಇತ್ಯಾದಿ ಕಾರಣಗಳು ಕಾರ್ಯಕ್ರಮಕ್ಕೆ ಅಪಾರ ಹಾನಿ ಮಾಡಿದವು. ಕೋವಿಡ್–19ರ ಬಿಕ್ಕಟ್ಟಿನ ಸಮಯದಲ್ಲಿ ಇದು ಸ್ವಲ್ಪ ಚೇತರಿಸಿಕೊಂಡಂತೆ ಕಂಡರೂ, ಮನರೇಗಾಕ್ಕೆ ಹಳೆಯ ಮೆರಗು ಮರಳಿ ಬರಲಿಲ್ಲ.

ಅನುಷ್ಠಾನದ ಸಮಸ್ಯೆಗಳನ್ನು ಪರಿಹರಿಸಬಹುದು, ಆದರೆ ಇದಕ್ಕೆ ಪ್ರಬಲ ರಾಜಕೀಯ ಬದ್ಧತೆ ಬೇಕು. ಆದರೆ 'ವಿಬಿ–ಜಿ ರಾಮ್–ಜಿ' (VB-G RAM-G) ಮಸೂದೆ 2025 ಇದಕ್ಕೆ ವಿರುದ್ಧವಾದ ಹಾದಿಯಲ್ಲಿ ಸಾಗುತ್ತಿದೆ. ಇದು ಐತಿಹಾಸಿಕ ಕಾಯ್ದೆಯನ್ನು ಕೇಂದ್ರ ನಿರ್ದೇಶಿತ ಯೋಜನೆಯಾಗಿ ಬದಲಿಸಲು ಪ್ರಯತ್ನಿಸುತ್ತಿದೆ. ಈ ಮಸೂದೆಯಡಿಯಲ್ಲಿ ಕೇಂದ್ರವು ಸಂಪೂರ್ಣ ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಳ್ಳುತ್ತಿದೆ, ಆದರೆ ಯಾವುದೇ ಪ್ರಮುಖ ಜವಾಬ್ದಾರಿಗಳನ್ನು ಹೊರಲು ಸಿದ್ಧವಿಲ್ಲ. ಉದ್ಯೋಗ ನೀಡುವುದು, ನಿರುದ್ಯೋಗ ಭತ್ಯೆ ಪಾವತಿಸುವುದು, ವಿಳಂಬ ಪಾವತಿಗೆ





ಕಾರ್ಮಿಕರಿಗೆ ಪರಿಹಾರ ನೀಡುವುದು ಮತ್ತು ಸಮರ್ಪಕ ಹಣಕಾಸು ಒದಗಿಸುವಂತಹ ಎಲ್ಲಾ ಜವಾಬ್ದಾರಿಗಳನ್ನು ರಾಜ್ಯ ಸರ್ಕಾರಗಳ ಮೇಲೆ ಹೇರಲಾಗಿದೆ.

ಯೋಜನೆಯನ್ನು ಎಲ್ಲಿ ಮತ್ತು ಯಾವಾಗ ಜಾರಿಗೆ ತರಬೇಕು ಎಂದು ನಿರ್ಧರಿಸುವ 'ಸ್ವಿಚ್ ಆಫ್' ಅಧಿಕಾರ ಕೇಂದ್ರದ ಕೈಯಲ್ಲಿದೆ. ಇದು ಉದ್ಯೋಗ ಖಾತರಿಯ ಮೂಲ ಉದ್ದೇಶವನ್ನೇ ಸೋಲಿಸುತ್ತದೆ ಇದು ಖಾತ್ರಿಯಾಗಿ ಅನ್ವಯವಾಗುತ್ತದೆ ಎನ್ನುವ ಖಾತ್ರಿಯೇ ಇಲ್ಲದೆ ಉದ್ಯೋಗ ಖಾತರಿ ನೀಡಿದಂತೆ!

ಹಣಕಾಸಿನ ಹಂಚಿಕೆಯಲ್ಲೂ ದೊಡ್ಡ ಬದಲಾವಣೆ ಮಾಡಲಾಗಿದೆ. ಇಲ್ಲಿಯವರೆಗೆ ಕೇಂದ್ರ ಮುಕ್ತವಾಗಿ ಧನಸಹಾಯ ಮಾಡುತ್ತದೆ ತತ್ತ್ವದ ಮೇಲೆ ಮನರೇಗಾ ಆಧಾರಿತವಾಗಿತ್ತು. ಹೊಸ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳು ಮಾಡಬಹುದಾದ ವೆಚ್ಚದ ಮಿತಿಯನ್ನು ನಿಗದಿಪಡಿಸುತ್ತದೆ. ನಿಗದಿಪಡಿಸಿದ ಮೊತ್ತದಲ್ಲಿ ಕೇಂದ್ರ ಹಾಗೂ ರಾಜ್ಯಗಳು 60:40 ಅನುಪಾತದಲ್ಲಿ ವೆಚ್ಚ ಹಂಚಿಕೊಳ್ಳುತ್ತವೆ. ಅದಕ್ಕೂ ಮೀರಿದ ಎಲ್ಲಾ ಹಣಕಾಸನ್ನು ರಾಜ್ಯಗಳೇ ಭರಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ತನ್ನ ವಿವೇಚನಾ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ದಟ್ಟವಾಗಿದೆ. ಈ ಅಪಾಯ ಕೇವಲ ಕಲ್ಪನೆಯಲ್ಲ; ಪಶ್ಚಿಮ ಬಂಗಾಳದಲ್ಲಿ ಕಳೆದ ಮೂರು ವರ್ಷಗಳಿಂದ ಮನರೇಗಾ ಹಣಕಾಸು ಸ್ಥಗಿತಗೊಳಿಸಿರುವುದನ್ನು ನಾವು ನೋಡಿದ್ದೇವೆ. ಈ ಕಠಿಣ ಕ್ರಮಕ್ಕೆ ಕಾರಣಗಳನ್ನು ಕೇಂದ್ರ ಸರ್ಕಾರವು ಸಂಸತ್ತಿನಲ್ಲೂ ಸ್ಪಷ್ಟಪಡಿಸಿಲ್ಲ. ಇದರ ಹಿಂದಿನ ರಾಜಕೀಯ ಉದ್ದೇಶ ಸ್ಪಷ್ಟವಾಗಿದೆ.

ಹೊಸ ಹಣಕಾಸು ವ್ಯವಸ್ಥೆಯಿಂದ ಮನರೇಗಾ ದುರ್ಬಲಗೊಳ್ಳಲಿದೆ. ಇಲ್ಲಿಯವರೆಗೆ ರಾಜ್ಯ ಸರ್ಕಾರಗಳು ಕೇವಲ ಶೇಕಡ 25ರಷ್ಟು ಸಾಮಗ್ರಿ ವೆಚ್ಚವನ್ನು ಮಾತ್ರ ಭರಿಸಬೇಕಾಗಿತ್ತು, ಉಳಿದೆಲ್ಲಾ ವೆಚ್ಚವನ್ನು ಕೇಂದ್ರವೇ ನೀಡುತ್ತಿತ್ತು. ಇದು ರಾಜ್ಯಗಳಿಗೆ ಯೋಜನೆಯನ್ನು ಹುರುಪಿನಿಂದ ಜಾರಿಗೆ ತರಲು ಪ್ರೋತ್ಸಾಹ ನೀಡುತ್ತಿತ್ತು. ಹೊಸ 40% ಪಾಲುದಾರಿಕೆಯ ಮಾದರಿಯು ಇದಕ್ಕೆ ದೊಡ್ಡ ಅಡ್ಡಿಯಾಗಲಿದೆ. ಮನರೇಗಾ ಯಶಸ್ಸಿಗೆ ಕೆಲಸದ ಬೇಡಿಕೆಯಷ್ಟೇ ಮುಖ್ಯವಾಗಿದ್ದು ರಾಜ್ಯಗಳಿಗೆ ಕೇಂದ್ರ ನೀಡುತ್ತಿದ್ದ ಆರ್ಥಿಕ ಬೆಂಬಲ. ರೈತರು ಬಾವಿ ನಿರ್ಮಾಣ, ತೋಟಗಾರಿಕೆಗೆ ಉತ್ಸುಕರಾಗಿದ್ದಾರೆ; ಕೆರೆ–ರಸ್ತೆಗಳ ಅಗತ್ಯವಿದೆ. ವೆಚ್ಚದ ಹೊರೆ ಹೆಚ್ಚಾದಂತೆ, ವಿಶೇಷವಾಗಿ ಬಡ ರಾಜ್ಯಗಳು ಹೊಸ ಯೋಜನೆಗಳ ಅನುಮೋದನೆಯನ್ನು ನಿಧಾನಿಸಬಹುದು ಅಥವಾ ತಡೆಹಿಡಿಯಬಹುದು. ಈ ಮಸೂದೆಯ ಪ್ರಕಾರ ಉದ್ಯೋಗ ನೀಡುವ ಜವಾಬ್ದಾರಿ ರಾಜ್ಯಗಳದ್ದು, ಆದರೆ ಹಣಕಾಸಿನ ಖಾತರಿ ಕೇಂದ್ರ ನೀಡುವುದಿಲ್ಲ. ಇದನ್ನು ರಾಜ್ಯಗಳು ವಿರೋಧಿಸುವುದು ನ್ಯಾಯಸಮ್ಮತವಾಗಿದೆ.

ಮಸೂದೆಯನ್ನು ಬೆಂಬಲಿಸುವ ಕೆಲವು ಅರ್ಥಶಾಸ್ತ್ರಜ್ಞರು ಇದರಿಂದ ಬಡ ರಾಜ್ಯಗಳಿಗೆ ಹೆಚ್ಚಿನ ಹಣ ಸಿಗುತ್ತದೆ ಎಂದು ವಾದಿಸುತ್ತಾರೆ. ಆದರೆ ಬಡ ರಾಜ್ಯಗಳಿಗೆ ನೆರವಾಗಲು ಅಲ್ಲಿನ ವೇತನ ದರಗಳನ್ನು ಹೆಚ್ಚಿಸುವುದು ಸರಿಯಾದ ಮಾರ್ಗವೇ ಹೊರತು, ವೆಚ್ಚದ ಹೊರೆಯನ್ನು ರಾಜ್ಯಗಳ ಮೇಲೆ ಹೇರುವುದಲ್ಲ.

ಎರಡು ವಿಷಯಗಳು ಈ ಮಸೂದೆಯ ವಿನಾಶಕಾರಿ ಸ್ವರೂಪದಿಂದ ಜನರ ಗಮನವನ್ನು ಬೇರೆಡೆಗೆ ಸೆಳೆದಿವೆ. ಮೊದಲನೆಯದು, ಕಾಯ್ದೆಯ ಹೆಸರನ್ನು ಮನರೇಗಾ ಬದಲಿಗೆ 'ವಿಕಸಿತ್ ಭಾರತ್ ಜಿ ರಾಮ್ ಜಿ' ಎಂದು ಬದಲಿಸಿರುವುದು. ಹೆಸರನ್ನು ಬದಲಿಸುವುದು ಸಮಯ ಮತ್ತು ಹಣದ ಪೋಲು ಮಾತ್ರವಲ್ಲ, ಕಾಯ್ದೆಗಿದ್ದ ಪಕ್ಷಾತೀತ ಸ್ವರೂಪವನ್ನೂ ನಾಶಪಡಿಸುತ್ತದೆ. ದುರದೃಷ್ಟವಶಾತ್, ವಿರೋಧ ಪಕ್ಷಗಳು ಮಸೂದೆಯ ಆಳವಾದ ಸಮಸ್ಯೆಗಳನ್ನು ಚರ್ಚಿಸುವ ಬದಲಿಗೆ ಹೆಸರು ಬದಲಾವಣೆಯ ಬಗ್ಗೆ ಮಾತ್ರ ಆಕ್ರೋಶ ವ್ಯಕ್ತಪಡಿಸುತ್ತಿವೆ.

ಮತ್ತೊಂದು ವಿಷಯವೆಂದರೆ ಉದ್ಯೋಗದ ಮಿತಿಯನ್ನು 100 ದಿನಗಳಿಂದ 125 ದಿನಗಳಿಗೆ ಹೆಚ್ಚಿಸಿರುವುದು. ಕೇಂದ್ರವು ಇದನ್ನು ದೊಡ್ಡ ಸುಧಾರಣೆಯಂತೆ ಬಿಂಬಿಸುತ್ತಿದೆ. ಆದರೆ ವಾಸ್ತವದಲ್ಲಿ, ಶೇಕಡ 2ರಷ್ಟು ಕುಟುಂಬಗಳು ಮಾತ್ರ ಪ್ರಸ್ತುತ 100 ದಿನಗಳ ಕೆಲಸ ಪಡೆಯುತ್ತಿವೆ. ಅಸ್ತಿತ್ವದಲ್ಲಿರುವ ಮಿತಿಯೇ ಬಳಕೆಯಾಗದಿರುವಾಗ, ಅದನ್ನು ಹೆಚ್ಚಿಸುವುದು ಕೇವಲ ತೋರಿಕೆಯ ಕ್ರಮವಾಗಿದೆ. ಇದರ ಬದಲಿಗೆ ವೇತನ ದರವನ್ನು ಹೆಚ್ಚಿಸುವುದರಿಂದ ಜನರಿಗೆ ಹೆಚ್ಚು ಉಪಯೋಗವಾಗುತ್ತಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕೇಂದ್ರದ ಹೊಸ ಮಸೂದೆಯು ಉದ್ಯೋಗ ಖಾತರಿ ಯೋಜನೆಯನ್ನು ಸುಧಾರಿಸುವ ಬದಲಿಗೆ ರಾಜ್ಯಗಳನ್ನು ನಿರುತ್ಸಾಹಗೊಳಿಸುತ್ತಿದೆ ಮತ್ತು ಕಾರ್ಮಿಕರ ಅಧಿಕಾರವನ್ನು ಕಸಿದುಕೊಳ್ಳುತ್ತಿದೆ. ಕೃಷಿ ಕಾಯ್ದೆಗಳಂತೆ ಈ ಮಸೂದೆಯೂ ಸಾರ್ವಜನಿಕ ಒತ್ತಡದಿಂದ ರದ್ದಾಗಬೇಕು. ಇಲ್ಲದಿದ್ದರೆ, ಇದು ಒಂದು ಐತಿಹಾಸಿಕ ಯುಗದ ಅಂತ್ಯವಾಗಲಿದೆ.



ಅಧಿಕಾರದ ಕೇಂದ್ರೀಕರಣ ಮತ್ತು ಖರ್ಚಿನ ವಿಕೇಂದ್ರೀಕರಣ – ಮನರೇಗಾದಿಂದ ಜಿರಾಮ್‌ಜಿಯ ಪಯಣ

ಎಂ. ಎಸ್. ಶ್ರೀರಾಮ್

ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು (ಮನರೇಗಾ) ರದ್ದು ಮಾಡಿ ಅದರ ಜಾಗದಲ್ಲಿ ಹೊಸತಾಗಿ ರೂಪಿಸಿದ ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಅಜೀವಿಕಾ ಮಿಷನ್ (ಗ್ರಾಮೀಣ್) (ಜಿ ರಾಮ್ ಜಿ) ಮಸೂದೆಯನ್ನು ಲೋಕಸಭೆ ಇತ್ತೀಚೆಗೆ ಅಂಗೀಕರಿಸಿತು. ವಿರೋಧ ಪಕ್ಷಗಳ ಸಭಾತ್ಯಾಗದ ಮಧ್ಯೆ ಅಂಗೀಕಾರವಾದ ಈ ಮಸೂದೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದ ಮಹಾತ್ಮಾಗಾಂಧಿಯವರ ಹೆಸರನ್ನು ಅಳಿಸುವುದಕ್ಕೆ ಸೀಮಿತವಾಗಿಲ್ಲ. ಇದು ಯೋಜನೆಯ ಆತ್ಮವನ್ನೇ ಕಿತ್ತೊಗೆಯುತ್ತಿದೆ. ಹೀಗಾಗಿ ಈ ಹೊಸ ಮಸೂದೆಯನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಬೇಕು. ರಾಜ್ಯಗಳ ಸ್ವಾಯತ್ತತೆಯ ಬಗ್ಗೆ ಕಾಳಜಿ ಇರುವ ಎಲ್ಲರೂ ಕಳೆದ ಹತ್ತಾರು ವರ್ಷಗಳಿಂದ ನಡೆಯುತ್ತಿರುವ 'ಕೇಂದ್ರೀಕರಣ'ದ ಕುರಿತು ಜಾಗ್ರತರಾಗಬೇಕು.

ಮನರೇಗಾದಿಂದ ಜಿರಾಮ್‌ಜಿಗೆ ನಡೆಸುತ್ತಿರುವ ಪಯಣದಲ್ಲಿ ಸರ್ಕಾರವು ಬಡಜನರ ಸ್ವಾಭಿಮಾನವನ್ನು ಕಸಿದಿದೆ. ಕೆಲಸ ಮಾಡಲು ತಯಾರಿರುವವರಿಗೆ ಕೆಲಸದ ಹಕ್ಕನ್ನು ಕೊಟ್ಟಿದ್ದ ಮನರೇಗಾ ಕಾರ್ಯಕ್ರಮ ಬಡವರ ಪರವಾದ ಅತ್ಯಂತ ಪ್ರಭಾವಶಾಲಿ ಯೋಜನೆಯೆಂದು ಜಗತ್ತಿನಲ್ಲಿ ಹೆಸರುಮಾಡಿತ್ತು. ಪ್ರಾಯೋಗಿಕವಾಗಿ ಕೆಲವೇ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಿ, ನಂತರ ದೇಶವ್ಯಾಪ್ತಿಗೆ ಅನ್ವಯಿಸಿ? 'ಯೋಜನೆ'ಯಷ್ಟೇ ಆಗಿದ್ದ ಈ ಕಾರ್ಯಕ್ರಮವನ್ನು ಕಾನೂನಿನ ಮೂಲಕ ಹಕ್ಕಾಗಿ ಪರಿವರ್ತಿಸಲಾಯಿತು. ಈ ಮೂಲಕ ಬಡತನ, ಉದ್ಯೋಗ ಖಾತರಿ ಮತ್ತು ಸಾಮಾಜಿಕ ಸುರಕ್ಷತೆಗೆ ಹೊಸ ಪರಿಭಾಷೆಯನ್ನು ನಿರ್ವಚಿಸಲಾಯಿತು. ಮನರೇಗಾದಿಂದ ಕನಿಷ್ಠ ಕೂಲಿಯ ದರದಲ್ಲಿ ಹೆಚ್ಚಳವಾಯಿತು. ಮನರೇಗಾದಿಂದಾಗಿ ಬಡವರಿಗೆ ಹಕ್ಕು ಕೊಟ್ಟಿದ್ದಲ್ಲದೇ, ಅವರು ಊಳಿಗಕ್ಕೆ ಬೀಳದಂತೆ ನಿಲ್ಲುವ ವಾತಾವರಣವನ್ನು ಉಂಟುಮಾಡಿದ್ದು ಮಹತ್ವದ ವಿಚಾರವಾಗಿತ್ತು. ನೇರ ನಗದು ಪಾವತಿಯನ್ನು ಸರ್ಕಾರದ ಉದಾರತೆಯೆಂದು ಬಣ್ಣಿಸಿ ಅದನ್ನು



ಪಡೆದವರನ್ನು 'ಫಲಾನುಭವಿ'ಗಳೆಂದು ಗುರುತಿಸುತ್ತಿರುವ ಈ ಸಂದರ್ಭದಲ್ಲಿ ಹಕ್ಕಿನಿಂದ ಕೆಲಸ ಕೇಳಿ ಕೂಲಿಯನ್ನು "ಸಂಪಾದಿಸುವ" ಮನರೇಗಾ ರದ್ದು ಮಾಡಿರವುದು ಬಡವರ ಸ್ವಾಭಿಮಾನಿ ಮಾರ್ಗಕ್ಕೆ ಪ್ರತಿಗಾಮಿಯಾಗಿದೆ.

ಗ್ರಾಮದಲ್ಲಿ ಸರಿಯಾದ ಕೂಲಿ ಸಿಗದಿದ್ದರೆ ಅದನ್ನು ನಿರಾಕರಿಸುವ. ಸರ್ಕಾರಿ ಕೆಲಸವನ್ನು ಹಕ್ಕಿನಿಂದ ಪಡೆಯುವ ಆಯ್ಕೆಯಿದ್ದ ಮನರೇಗಾ ಕಾಯಿದೆಯನ್ನು ರದ್ದುಗೊಳಿಸಿ, ಹೊಸ ಜಿ ರಾಮ್ ಜಿ ಮಸೂದೆಯನ್ನು ಸ್ಥಾಯಿ ಸಮಿತಿಗೆ ಕಳುಹಿಸದೇ, ವ್ಯಾಪಕ ಪರಾಮರ್ಶೆಯಿಲ್ಲದೇ, ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿನ ಚರ್ಚೆಯ ನಾಟಕದ ನಂತರ ಯಾವುದೇ ಬದಲಾವಣೆಯಿಲ್ಲದೆ ಅಂಗೀಕರಿಸಲಾಯಿತು.

ಹೊಸ ಮಸೂದೆಯಲ್ಲಿ ಅನೇಕ ತೊಡಕುಗಳಿವೆ. ಮಸೂದೆಯ ಐದನೇ ಅಂಶದಲ್ಲಿ ಕನಿಷ್ಠ ೧೨೫ದಿನಗಳ ಕೆಲಸವನ್ನು ಕೊಡಲಾಗುವುದೆಂದು ಹೇಳಿದ್ದರೂ ಅದಕ್ಕೆ ಇನ್ನಷ್ಟು 'ಕಿಂತು-ಪರಂತು'ಗಳನ್ನು ಜೋಡಿಸಿ ಕೇಂದ್ರ ಸರ್ಕಾರ ಸೂಚಿಸಿದ ಜಿಲ್ಲೆ, ಮತ್ತು ಗ್ರಾಮಗಳಲ್ಲಿ, ಮೊದಲೇ ಗುರುತಿಸಿ, ಅಂಗೀಕರಿಸಿರುವ ರಾಷ್ಟ್ರ ನಿರ್ಮಾಣ ಯೋಜನೆಗಳಲ್ಲಿ, ಕೃಷಿ ಕೆಲಸಗಳು ಹೆಚ್ಚಿರುವ ೬೦ ದಿನಗಳನ್ನು ಹೊರತುಪಡಿಸಿ, ಒಟ್ಟಾರೆ ಬಜೆಟ್ಟಿನಲ್ಲಿ ನಿಗದಿ ಪಡಿಸಿದ ಮೊತ್ತವನ್ನು ಮೀರದಂತೆ ಕೆಲಸವನ್ನು ಕೊಡುವುದಾಗಿ ಮಸೂದೆ ಹೇಳುತ್ತದೆ. ಅಂದರೆ, ಇದು ಜನರ ಹಕ್ಕಲ್ಲ, ಕಾರ್ಯಕ್ರಮ ಸಾರ್ವತ್ರಿಕವೂ ಅಲ್ಲ. ದಿನಗಳನ್ನು ಸರ್ಕಾರ ಹೆಚ್ಚಿಸಿದಂತೆ ಕಂಡರೂ, ಅದನ್ನು ಜಾರಿಮಾಡುವುದಕ್ಕೆ ಯಾವುದೇ ಪೂರಕ ಸೂತ್ರಗಳನ್ನು ಸರ್ಕಾರ ನೀಡಿಲ್ಲ. ಮೇಲಾಗಿ ತನ್ನ ಪಾಲನ್ನು ಶೇಕಡಾ ೯೦ರಿಂದ ಶೇಕಡಾ ೬೦ಕ್ಕೆ ಇಳಿಸಿ, ರಾಜ್ಯಗಳ ಮೇಲೆ ಹೆಚ್ಚಿನ ಭಾರವನ್ನು ಈ ಮಸೂದೆ ಹೇರುತ್ತದೆ. ರಾಜ್ಯದ ಬಜೆಟ್ಟನ್ನು ಕೇಂದ್ರ ಸರ್ಕಾರ ನಿರ್ದೇಶಿಸುತ್ತಿರುವಂತೆ ಕಾಣುತ್ತದೆ. ಇದನ್ನು ಯಾವುದೇ ದೃಷ್ಟಿಯಿಂದ ಪ್ರಗತಿಪರವೆಂದು ಹೇಳಲು ಸಾಧ್ಯವಿಲ್ಲ. ಕಳೆದ ದಶಕದಿಂದ ಎಲ್ಲ ಅಧಿಕಾರವನ್ನು, ಆರ್ಥಿಕ ಸಂಪನ್ಮೂಲಗಳನ್ನು ಕೇಂದ್ರಿಕರಿಸುವ, ಖರ್ಚನ್ನು ವಿಕೇಂದ್ರೀಕರಿಸುವ, ವಿಕೇಂದ್ರೀಕೃತ ಅನುದಾನಗಳನ್ನು ಮನಸೋಯಿಚ್ಛೆ ನೀಡುವ, ಅದನ್ನು ತಡಮಾಡುವ ಪ್ರಕ್ರಿಯೆಯನ್ನು ಕಂಡಿದ್ದೇವೆ.

ನಮ್ಮ ಸಂವಿಧಾನ ಒಕ್ಕೂಟ ವ್ಯವಸ್ಥೆಯನ್ನು ಆದರ್ಶವಾಗಿ ಸ್ವೀಕ-ರಿಸಿದ್ದರೂ, ಸಂವಿಧಾನ ರಚನೆಯ ಸಂದರ್ಭದ ಅನಿವಾರ್ಯತೆಗಳು ವ್ಯವಸ್ಥೆಯನ್ನು 'ಕೇಂದ್ರ'ದತ್ತ ವಾಲುವಂತೆ ಮಾಡಿತ್ತು. ಸ್ವಾತಂತ್ರಾನಂತರ ಚದುರಿ ಹೋಗಿದ್ದ ರಾಜಮನೆತನಗಳ ಆಳ್ವಿಕೆಯಲ್ಲಿದ್ದ ಪ್ರಾಂತಗಳನ್ನು ಒಂದುಗೂಡಿಸುವ ಪ್ರಕ್ರಿಯೆಯಲ್ಲಿ ಹೊಸ ರಾಜ್ಯಗಳ ಸ್ಥಾಪನೆ, ಹಳೆ ಪ್ರಾಂತಗಳ ಮರುವಿಂಗಡಣೆಯ ಅವಶ್ಯಕತೆಯಿತ್ತು. ಹೀಗಾಗಿ ಕೇಂದ್ರ ಸರ್ಕಾರದ ಬಳಿ ಹೆಚ್ಚು ಅಧಿಕಾರವಿದ್ದದ್ದು ಸಹಜವೂ ಆಗಿತ್ತು. ಆದ-ರೆ ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಮನ್ವಯದ ಮೂಲಕ, ಮತ್ತು ಸಂವಿಧಾನದಲ್ಲಿ ಗುರುತಿಸಿರುವ ಕೇಂದ್ರ ಮತ್ತು ರಾಜ್ಯಗಳ ಪರಿಧಿಯಲ್ಲಿ ಬರುವ ಅಧಿಕಾರ ಕ್ಷೇತ್ರದ ಪಟ್ಟಿಗಳನ್ನು ಗೌರವಿಸಿ ವಿಕೇಂದ್ರೀಕರಣದ ಆತ್ಮವನ್ನು ಜಾಗೃತವಾಗಿ ಇಡಲಾಗಿತ್ತು.

ಜಿಎಸ್‌ಟಿ ಕಾನೂನಿನಿಂದಾಗಿ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟಾಯಿತು. ವ್ಯಾಪಾರ ವ್ಯವಹಾರಗಳನ್ನು ಕೈಗೊಳ್ಳಲು, ಹೂಡಿಕೆಯನ್ನು ಆಕರ್ಷಿಸಲು ಇದು ಅತ್ಯವಶ್ಯಕವಾದ "ಸುಧಾರಣೆ" ಎಂದು ಪರಿಗಣಿಸಬಹುದು. ಆದರೆ ಇದು, ಧನಸಂಪನ್ಮೂಲ ಮತ್ತು ಅಧಿಕಾರವನ್ನು ರಾಜ್ಯಗಳು ಕೇಂದ್ರಕ್ಕೆ ಹಸ್ತಾಂತರ ಮಾಡುವದ ಆತ್ಮಘಾತಕ ಕ್ರಿಯೆಯಾಗಿ-ತ್ತು. ಒಂದು ರಾಷ್ಟ್ರ-ಒಂದು ತೆರಿಗೆ ಎನ್ನುತ್ತಾ ಸ್ಥಳೀಯತೆಯನ್ನು ಗೌಣವಾಗಿಸಿ, ಎಲ್ಲವನ್ನೂ ಕೇಂದ್ರದ ಜೋಳಿಗೆಯಲ್ಲಿ ಹಾಕುವ ಪ್ರಕ್ರಿಯೆಗೆ ನಾಂದಿ ಹಾಡಿತು. ಈಗ ರಾಜ್ಯ ಸರ್ಕಾರಗಳು ತಮ್ಮ ಸ್ವಾಯತ್ತತೆಯನ್ನು ಕಳೆದುಕೊಂಡು ಕೇಂದ್ರ ಸರ್ಕಾರದ ಶಾಖೆಗಳಾಗಿ ಕೆಲಸ ಮಾಡಬೇಕಾಗಿದೆ.
ಮದ್ಯ, ಇಂಧನ, ಆಸ್ತಿ, ನೊಂದಣಿ ತೆರಿಗೆಗಳನ್ನು ಬಿಟ್ಟರೆ ಮಿಕ್ಕೆಲ್ಲ ತೆರಿಗೆಗಳ ದರವನ್ನು ನಿರ್ಧರಿಸುವ ಹಕ್ಕು ಜಿಎಸ್‌ಟಿ ಮಂಡಲಿಯ ಕೈಯಲ್ಲಿದೆ. ರಾಜ್ಯದ ಪಾಲಿನ ತೆರಿಗೆ ತಕ್ಷಣಕ್ಕೆ ಬಂದರೂ, ಕೇಂದ್ರದ ಪಾಲಿನಿಂದ ಬರಬೇಕಾದ ಮೊತ್ತ ಹಣಕಾಸು ಆಯೋಗದ ಅನುದಾನದ ಸೂತ್ರಾನುಸಾರ ಬರುತ್ತದೆ. ತೆರಿಗೆಯ ದರವನ್ನು ಬದಲಿಸಲು ರಾಜ್ಯಗಳಿಗೆ ಅಧಿಕಾರವಿಲ್ಲ. ಹೋಗಲಿ ರಾಜ್ಯಗಳು ಸಾಲಪಡೆದು ಬೆಳವಣಿಗೆ ಮತ್ತು ವಿಕಾಸ ಕಾರ್ಯಗಳಲ್ಲಿ ಹೂಡಿಕೆ ಮಾಡಬಹುದೆಂದರೆ ಅದಕ್ಕೂ ಮೇಲ್ಮಿತಿಗಳಿವೆ. ಅದನ್ನು ಪಾಲಿಸದಿದ್ದರೆ ದಂಡಿಸುವ ಅಧಿಕಾರ ಕೇಂದ್ರಕ್ಕಿದೆ. ಆದರೆ ಕೇಂದ್ರಕ್ಕೆ ಈ ಯಾವುದೂ ಅನ್ವಯಿಸುವುದಿಲ್ಲ. ಹೆಚ್ಚಿನ ಸಾಲ ಪಡೆದು ಆರ್ಥಿಕ ಖೋತಾವನ್ನು ಹೆಚ್ಚಿಸಬೇಕೆಂದರೆ ಕೇಂದ್ರ ಸರ್ಕಾರ ಸುಲಭವಾಗಿ ಕಾನೂನನ್ನು ತಿದ್ದಿ ಬೇಜವಾಬ್ದಾರಿಯಾಗಿ ವರ್ತಿಸಬಹುದು. ಜಿಎಸ್‌ಟಿಯಿಂದ ಪ್ರಾರಂಭವಾದ ಕೇಂದ್ರೀಕರಣ ಈಗ ಸಾಕಷ್ಟು ವಿಸ್ತಾರಗೊಂಡಿದೆ.

ಮೊದಲಿಗೆ ರಾಜ್ಯಗಳ ಪಟ್ಟಿಯಲ್ಲಿರುವ ಕೃಷಿಗೆ ಅನ್ವಯಿಸುವ ಕಾನೂನುಗಳನ್ನು ವ್ಯಾಪಾರದ ಛದ್ಮ ಹೊದಿಸಿ ಕೇಂದ್ರವು ತನ್ನ ಅಧಿಕಾರ ವ್ಯಾಪ್ತಿಯನ್ನು ಹಿಗ್ಗಿಸಲು ಪ್ರಯತ್ನಿಸಿತ್ತು. ಸಹಕಾರವೂ ರಾಜ್ಯಗಳಿಗೆ ಮೀಸಲಿಟ್ಟಿರುವ ವಿಷಯ. ಆದರೆ ಈಗ ಗೃಹ ಮಂತ್ರಿಗಳ ವ್ಯಾಪ್ತಿಗೆ ಬರುವ ಹೊಸ ಸಹಕಾರ ಮಂತ್ರಾಲಯವನ್ನು ಕೇಂದ್ರ ಸರ್ಕಾರ ಆರಂಭಿಸಿದೆ. ರಾಜ್ಯದ ವ್ಯಾಪ್ತಿಯಲ್ಲಿರುವ ಅಧಿಕಾರ ಕ್ಷೇತ್ರದಲ್ಲಿ ಕೇಂದ್ರದ ಪರೋಕ್ಷ ಕೈವಾಡ ಆರಂಭವಾಗಿದೆ. ಕಾರ್ಮಿಕ, ವಿದ್ಯೆ ಮತ್ತು ಇತರ ಕ್ಷೇತ್ರಗಳಲ್ಲೂ ಕೇಂದ್ರೀಕರಣ ಆಗುತ್ತಿರುವುದಲ್ಲದೆ, ಎಲ್ಲಕ್ಕೂ ಪ್ರಧಾನ ಮಂತ್ರಿ ಎನ್ನುವ ಉಪಸರ್ಗವನ್ನು ಜೋಡಿಸಿ ಕೈವಶ ಮಾಡಿಕೊಳ್ಳುತ್ತಿದೆ.

ಈಗ ಹೊರಡಿಸಿರುವ ಜಿ ರಾಮ್ ಜಿ ಮಸೂದೆಯೂ ಕೇಂದ್ರೀಕರಣದತ್ತ ಪಯಣಿಸಿದೆ. ಹೆಸರು ಬದಲಾಯಿಸಿ ಗಮನವನ್ನು ಬೇರೆಡೆ ಸೆಳೆವ, ಡಬಲ್-ಇಂಜನ್ ಅನ್ನುತ್ತಾ ಕೇಂದ್ರದ ಕೃಪೆಯಲ್ಲಿರುವ ರಾಜ್ಯಗಳಿಗೆ ಮಾತ್ರ ಸಂಪನ್ಮೂಲಗಳನ್ನು ಕೊಡುವ, ಎಲ್ಲವನ್ನೂ "ಒಂದು ರಾಷ್ಟ್ರ"ದ ಕೇಂದ್ರೀಕರಣದ ಏಕತಾನತೆಯತ್ತ ಒಯ್ಯುತ್ತಿರುವುದನ್ನು ರಾಜ್ಯಗಳು ಗಮನಿಸಿ ಎಚ್ಚೆತ್ತುಕೊಳ್ಳಬೇಕು. ರಾಜ್ಯಗಳ ಪ್ರಗತಿ, ಸ್ಥಳೀಯ ಸಂದರ್ಭಕ್ಕನುಸಾರವಾಗಿ ಮುಂದುವರೆಯಲು ವಿಕೇಂದ್ರೀಕರಣವು ಅತ್ಯಗತ್ಯವಾಗಿದೆ. ತೆರಿಗೆಯಾಗಲಿ, ಮಾಹಿತಿಯಾಗಲೀ, ಎಲ್ಲವನ್ನೂ ಬಕಾಸುರನಂತೆ ಕಬಳಿಸುವ ಕೇಂದ್ರ, ಹಂಚುವ ವಿಷಯಕ್ಕೆ ಬಂದಾಗ ಮಾಹಿತಿಯನ್ನೂ ಹಂಚದೇ ಕಾಪಿಟ್ಟುಕೊಳ್ಳುವ ಜುಗ್ಗತನವನ್ನು ತೋರಿಸುತ್ತದೆ, ಎಲ್ಲವೂ ಕೇಂದ್ರ ಸರ್ಕಾರದ ಪ್ರಚಾರಕ್ಕೆ ಮಾತ್ರ ಮುಡಿಪಾಗಿವೆ. ಜಿ ರಾಮ್ ಜಿ ಮಸೂದೆ ಒಂದೊಂದೇ ಇಟ್ಟಿಗೆ ಜೋಡಿಸಿ ಮುತುವರ್ಜಿಯಿಂದ ಕಟ್ಟಿದ್ದ ಸಾಮಾಜಿಕ ಭದ್ರತೆಯ ಕಟ್ಟಡವನ್ನು, ಒಂದೇ ಏಟಿಗೆ ಬುಲ್‌ಡೋಜರ್ ಮೂಲಕ ನೆಲಸಮ ಮಾಡುತ್ತದೆ. ನಾವು ಜಿ ರಾಮ್ ಜಿ ಮಸೂದೆಯನ್ನು ವಿರೋಧಿಸಬೇಕಾದ್ದು ಕನಿಷ್ಠ ಅಗತ್ಯ.

ಅದೇ ಸಮಯಕ್ಕೆ ವಿಕೇಂದ್ರೀಕರಣದ ವಿಚಾರದಲ್ಲಿ ಏನಾಗುತ್ತಿದೆ ಎನ್ನುವುದನ್ನೂ ಗಮನಿಸಬೇಕು. ಸಂವಿಧಾನದ ತಿದ್ದುಪಡಿಗೆ ಮುಂದಾಗದೆ, ಬಿಡಿ ಕಾಯ್ದೆಗಳನ್ನು ತಿದ್ದುತ್ತಾ, ಹೆಸರು ಬದಲಾಯಿಸುತ್ತಾ ನಿರಂಕುಶತೆಯತ್ತ ಸಾಗುತ್ತಿರುವ ಪ್ರವೃತ್ತಿಯನ್ನು ನಾವು ಅರ್ಥಮಾಡಿಕೊಳ್ಳಬೇಕು.

ಐದು ವರ್ಷಗಳ ಕಾಲ ವರ್ಷಕ್ಕೆ ನೂರು ದಿನ ಕೆಲಸ ಕೊಡುತ್ತಿದ್ದ ಸರ್ಕಾರ ಈಗ ಚುನಾವಣೆಯ ಮುನ್ನ ಖಾತೆಗೆ ಹತ್ತು ಸಾವಿರ ರೂಪಾಯಿಗಳನ್ನು ಹಾಕಿ ಓಟು ಗಿಟ್ಟಿಸುವ ಕುಯುಕ್ತಿಯನ್ನು ಗಮನಿಸಬೇಕು. ಜಿಎಸ್‌ಟಿ ಕಾಯ್ದೆಯ ವಿರುದ್ಧ ಹೋರಾಟ ರೂಪಿಸಿ ರಾಜ್ಯಗಳು ತಮ್ಮ ಆರ್ಥಿಕ ಸ್ವಾಯತ್ತತೆಯನ್ನು ಮರಳಿ ಪಡೆಯುವ ಹಾದಿಯಲ್ಲಿ ಹೆಜ್ಜೆಯಿಟ್ಟು ಸಮಸ್ಯೆಯ ಮರ್ಮವನ್ನು ತಲುಪಬೇಕು. ಇಲ್ಲವಾದರೆ ಅಂಚನ್ನು ಮೆಲ್ಲುತ್ತಾ ಬರುತ್ತಿರುವ ಕೇಂದ್ರದ ತಂತ್ರಗಳು ಒಂದು ದಿನ ತಿರುಳನ್ನೇ ಇಲ್ಲವಾಗಿಸಬಹುದು. ಜಿ ರಾಮ್ ಜಿ ಒಂದು ಎಚ್ಚರಿಕೆಯ ಗಂಟೆ. ಈಗಲೇ ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

ಕೃಪೆ: ಪ್ರಜಾವಾಣಿ

ಉದ್ಯೋಗ ಯೋಜನೆಯನ್ನು ಸುಧಾರಿಸಿ, ಆದರೆ ಅದರ ಲಾಭಗಳನ್ನು ಉಳಿಸಿಕೊಳ್ಳಿ

ಲೇಖಕರು: ಕಾರ್ತಿಕ್ ಮುರಳಿಧರನ್ ಮತ್ತು ಸಂದೀಪ್ ಸುಖ್ತಂಕರ್

ಭಾರತದ ಗ್ರಾಮೀಣ ಉದ್ಯೋಗ ಕಾರ್ಯಕ್ರಮವಾದ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಮನರೇಗಾ ಬಗ್ಗೆ ಬಹು ದಿನಗಳಿಂದ ಮುಖ್ಯವಾಗಿ ಎರಡು ಟೀಕೆಗಳು ಕೇಳಿ ಬರುತ್ತಿವೆ. ಮೊದಲನೆಯದಾಗಿ, ಇದು ಸಂಪನ್ಮೂಲಗಳ ಪೋಲು. ಮತ್ತು ಇದು ಅಪಾರ ಸೋರಿಕೆ ಮತ್ತು ಭ್ರಷ್ಟಾಚಾರದಿಂದ ಕೂಡಿದೆ ಎಂಬುದು; ಎರಡನೆಯದಾಗಿ, ಇದರಿಂದ ಉತ್ಪಾದಕತೆ ಹೆಚ್ಚುತ್ತಿಲ್ಲ. ವೇತನ ಹೆಚ್ಚುತ್ತಿದೆ. ಹಾಗಾಗಿ ಮಾರುಕಟ್ಟೆ ವಿರೂಪಗೊಳ್ಳುತ್ತಿದೆ. ಉದ್ಯೋಗಕ್ಕೆ ಧಕ್ಕೆಯಾಗುತ್ತಿದೆ ಎಂಬುದು. ಇವೆರಡು ಒಂದೇ ನೀತಿಯನ್ನು ಕುರಿತ ಟೀಕೆಗಳಾಗಿವೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಯೋಜನೆಯ ಅನುಷ್ಠಾನವನ್ನು ಸರಿಪಡಿಸಬೇಕೊ ಅಥವಾ ಇಡೀ ಯೋಜನೆಯನ್ನು ಮರುವಿನ್ಯಾಸಗೊಳಿಸಬೇಕೋ ಅನ್ನುವುದು ಪ್ರಶ್ನೆ.

ಕಳೆದ ಒಂದು ದಶಕದ ವಿಶ್ವಾಸಾರ್ಹ ಸಂಶೋಧನೆಯಿಂದ ಒಂದು ಅಂಶ ಸ್ಪಷ್ಟವಾಗಿದೆ. ಉದ್ಯೋಗವು ಸುಲಭವಾಗಿ ದೊರೆಯುವಂತೆ ಮಾಡುವ ಮೂಲಕ, ಸೋರಿಕೆಯನ್ನು ಕಡಿಮೆ ಮಾಡುವ ಮೂಲಕ ಮತ್ತು ಸಮಯಕ್ಕೆ ಸರಿಯಾಗಿ ವೇತನವನ್ನು ಪಾವತಿಸುವ ಮೂಲಕ ಯೋಜನೆಯ ಅನುಷ್ಠಾನವನ್ನು ಸುಧಾರಿಸಿದರೆ ಅದರಿಂದ ಆಗುವ ಲಾಭವು ಗಣನೀಯವಾಗಿ ಸುಧಾರಿಸುತ್ತದೆ. ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಯೋಜನೆಯ ಅನುಷ್ಠಾನ ಸುಧಾರಣೆಯನ್ನು ಕುರಿತಂತೆ ಬೃಹತ್ ಪ್ರಮಾಣದ ಯಾದೃಚ್ಛಿಕ ಮೌಲ್ಯಮಾಪನ ನಡೆಸಲಾಗಿತ್ತು. ಅದರಲ್ಲಿ ಸುಮಾರು 1.9 ಕೋಟಿ ಜನರು ಪಾಲ್ಗೊಂಡಿದ್ದರು. ಅವರ ಆದಾಯದಲ್ಲಿ ಭಾರಿ ಏರಿಕೆಯಾಗಿತ್ತು ಮತ್ತು ಬಡತನ ಗಮನಾರ್ಹವಾಗಿ ಕಡಿಮೆಯಾಗಿತ್ತು.

ಮುಖ್ಯವಾಗಿ, ಈ ಎಲ್ಲಾ ಅನುಕೂಲಗಳು ಕೇವಲ ಮನರೇಗಾ ಯೋಜನೆಯ ವೇತನದಿಂದಲೇ ಆಗಿದ್ದಲ್ಲ. ಬದಲಿಗೆ ಖಾಸಗಿ ಕಾರ್ಮಿಕ ಮಾರುಕಟ್ಟೆಯಲ್ಲೂ ಅವರಿಗೆ ಹೆಚ್ಚಿನ ಗಳಿಕೆ ಸಾಧ್ಯವಾಗಿದೆ. ಈ ಸಂಶೋಧನೆಗಳು ನಮ್ಮ ಹಿಂದಿನ ನಂಬಿಕೆಗಳನ್ನೇ ಬದಲಿಸಿದವು. ಅನೇಕ ಅರ್ಥಶಾಸ್ತ್ರಜ್ಞರಂತೆ, ಮನರೇಗಾ ಯೋಜನೆಯಿಂದ ಉದ್ಯೋಗ ಕಡಿಮೆಯಾಗದೆ ವೇತನವೂ ಹೆಚ್ಚಬಹುದು ಅನ್ನುವುದರ ಬಗ್ಗೆ ನಮಗೂ ಅನುಮಾನವಿತ್ತು. ಆದರೆ ಅಂಕಿಅಂಶಗಳು ನಮ್ಮ ಅನುಮಾನವನ್ನು ನಿರಾಕರಿಸಿದವು. ಯೋಜನೆಯನ್ನು ಉತ್ತಮವಾಗಿ ಜಾರಿಗೊಳಿಸುವುದರಿಂದ ಕಾರ್ಮಿಕರಿಗೆ ಗ್ರಾಮೀಣ ಆರ್ಥಿಕತೆಯಲ್ಲಿ ಪರ್ಯಾಯ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಇದರಿಂದ ಮಾರುಕಟ್ಟೆ ವೇತನ ಮತ್ತು ಖಾಸಗಿ ಉದ್ಯೋಗ ಎರಡೂ ಹೆಚ್ಚಾಗಿರುವುದು ಕಂಡುಬಂದಿತು. ಹೆಚ್ಚಿನ ಆದಾಯದಿಂದ ಸ್ಥಳೀಯವಾಗಿ ಬೇಡಿಕೆ ಹೆಚ್ಚಿದೆ. ಇದರಿಂದ ಕೃಷಿಯೇತರ ಉದ್ಯಮಗಳು ಮತ್ತು ಉದ್ಯೋಗಗಳ ಗಮನಾರ್ಹ ವಿಸ್ತರಣೆಗೆ ಅನುಕೂಲವಾಗಿದೆ ಎಂದು ಆರ್ಥಿಕ ಜನಗಣತಿಯ ದತ್ತಾಂಶಗಳು ದೃಢಪಡಿಸಿವೆ.

ಹೀಗಾಗಿ, ಮನರೇಗಾದ ಅನುಷ್ಠಾನದಲ್ಲಿ ಸುಧಾರಣೆಯನ್ನು ತಂದಾಗ ಸಮಾನತೆ ಹಾಗೂ ದಕ್ಷತೆ ಎರಡರಲ್ಲೂ ಸುಧಾರಣೆ ಸಾಧ್ಯವಾಗಿತ್ತು. ಇದು ಸಾಮಾನ್ಯವಾಗಿ ಕಲ್ಯಾಣ ಯೋಜನೆಗಳಲ್ಲಿ ತೀರಾ ಅಪರೂಪ. ಯೋಜನೆಯಿಂದ ಆದ ಲಾಭವೂ ವ್ಯಾಪಕವಾಗಿತ್ತು. ಭೂಹಿಡುವಳಿಯ ಆಧಾರದ ಮೇಲೆ ಪರಿಶೀಲಿಸಿದಾಗ, ಕೆಳಗಿನ ಶೇ. 93ರಷ್ಟು ಜನರ ಪರಿಸ್ಥಿತಿ ಸುಧಾರಿಸಿದೆ. ಮೇಲಿನ ಕೇವಲ ಶೇಕಡ 7ರಷ್ಟು ಶ್ರೀಮಂತರು ಸ್ವಲ್ಪ ನಷ್ಟ ಅನುಭವಿಸಿದ್ದಾರೆ. ಅವರಿಗೆ ಹೆಚ್ಚಿನ ಕೂಲಿ ಕೊಡಬೇಕಾಗಿ ಬಂದಿದೆ. ಆದರೆ ಅನೇಕ ದೊಡ್ಡ ಭೂಮಾಲೀಕರು ಕೃಷಿಯೇತರ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಹಾಗಾಗಿ ಸ್ಥಳೀಯವಾಗಿ ಬೇಡಿಕೆ ಹೆಚ್ಚಾದಾಗ ಅವರಿಗೂ ಲಾಭವಾಗುತ್ತದೆ. ಆದ್ದರಿಂದ, ಕೇವಲ ಭೂಹಿಡುವಳಿ ಮಾತ್ರವಲ್ಲದೆ ಒಟ್ಟಾರೆ ಸಾಮಾಜಿಕ-ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಮೌಲ್ಯಮಾಪನ ಮಾಡಿದಾಗ, ಬಹುತೇಕ ಎಲ್ಲರಿಗೂ ಉತ್ತಮವಾಗಿ ಅನುಷ್ಠಾನಗೊಂಡ ಮನರೇಗಾ ಯೋಜನೆಯಿಂದ ಲಾಭವಾಗಿದೆ ಎಂದು ತಿಳಿದುಬರುತ್ತದೆ. ಆಳವಾಗಿ ನೋಡಿದರೆ, ಸರಿಯಾಗಿ ಕಾರ್ಯನಿರ್ವಹಿಸುವ ಮನರೇಗಾ ಕೇವಲ ಬಡವರ ಪರವಾದ ನೀತಿಯಲ್ಲ; ಇದು ವ್ಯಾಪಕವಾದ ಗ್ರಾಮೀಣ ಬೆಳವಣಿಗೆಯ ನೀತಿಯೂ ಹೌದು. ಉದ್ಯೋಗಾಧರಿತ ಖಾತರಿಗಳಿಗೆ ಇನ್ನೂ ಎರಡು ಅನುಕೂಲಗಳಿವೆ. ಮೊದಲನೆಯದಾಗಿ, ಕೆಲಸದ ಅಗತ್ಯವಿರುವುದರಿಂದ ಅತ್ಯಂತ ಸಂಕಷ್ಟದಲ್ಲಿರುವವರನ್ನು ಇದು ಸುಲಭವಾಗಿ ತಲುಪುತ್ತದೆ. ಅವರನ್ನು ಗುರುತಿಸುವುದಕ್ಕೆ ಯಾವುದೇ ಕಠಿಣ ಆಡಳಿತಾತ್ಮಕ ಕ್ರಮದ ಅಗತ್ಯವಿಲ್ಲ. ಭೂಹೀನ ಕಾರ್ಮಿಕರು, ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ಈ ಯೋಜನೆಯಲ್ಲಿ ಭಾಗವಹಿಸುತ್ತಿರುವುದು ಇದಕ್ಕೆ ಸಾಕ್ಷಿ. ಎರಡನೆಯದಾಗಿ, ಇದು ಪ್ರಬಲವಾದ 'ಆಟೋಮ್ಯಾಟಿಕ್ ಸ್ಟೆಬಿಲೈಸರ್' ಆಗಿದೆ. ಬರಗಾಲ, ಆರ್ಥಿಕ ಕುಸಿತ ಅಥವಾ ಕೋವಿಡ್-19ರ ರೀತಿಯ ದೊಡ್ಡ ಬಿಕ್ಕಟ್ಟುಗಳ ಸಮಯದಲ್ಲಿ ಉದ್ಯೋಗದ ಬೇಡಿಕೆ ಹೆಚ್ಚಾಗುತ್ತದೆ ಮತ್ತು ಪರಿಸ್ಥಿತಿ ಸುಧಾರಿಸಿದಾಗ ಬೇಡಿಕೆ ತಾನಾಗಿಯೇ ಕಡಿಮೆಯಾಗುತ್ತದೆ.

ಆದರೆ, ಕಳೆದ ಎರಡು ದಶಕಗಳಲ್ಲಿ ರಾಜ್ಯಗಳ ನಡುವೆ ಅನುಷ್ಠಾನದ



ಗುಣಮಟ್ಟದಲ್ಲಿ ಭಾರಿ ವ್ಯತ್ಯಾಸವಿದೆ. ತಮಿಳುನಾಡು, ಆಂಧ್ರಪ್ರದೇಶ/ ತೆಲಂಗಾಣ, ಕೇರಳ ಮತ್ತು ರಾಜಸ್ಥಾನದಂತಹ ರಾಜ್ಯಗಳು ಹೆಚ್ಚು ಮಾನವದಿನಗಳ ಕೆಲಸವನ್ನು ಸೃಷ್ಟಿಸಿವೆ ಮತ್ತು ವೇತನವನ್ನು ಸರಿಯಾಗಿ ಪಾವತಿಸಿವೆ. ಆದರೆ ಭಾರತದ ಕೆಲವು ಬಡ ರಾಜ್ಯಗಳು ಹೆಚ್ಚಿನ ಅಗತ್ಯವಿದ್ದರೂ ಕೆಲಸ ನೀಡುವಲ್ಲಿ ವಿಫಲವಾಗಿವೆ. ಈ ವೈಫಲ್ಯಕ್ಕೆ ಯೋಜನೆಯ ವಿನ್ಯಾಸ ಕಾರಣವಲ್ಲ, ಬದಲಾಗಿ ಅಸಮರ್ಪಕ ಅನುಷ್ಠಾನ ಸಾಮರ್ಥ್ಯ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ, ಸಂಸತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯ ಬದಲಿಗೆ 'ವಿಕಸಿತ ಭಾರತ ರೋಜಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ)' ಎಂಬ ಹೊಸ ಮಸೂದೆಯನ್ನು ಜಾರಿಗೆ ತಂದಿದೆ. ಈ ಸುಧಾರಣೆಯಲ್ಲಿ ಕೆಲವು ಉತ್ತಮ ಅಂಶಗಳಿವೆ. ಉದ್ಯೋಗದ ಮಿತಿಯನ್ನು 100 ರಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ. ಸಮಯಕ್ಕೆ ಸರಿಯಾಗಿ ವೇತನ ಪಾವತಿ ಮಾಡುವುದಕ್ಕೆ ಆದ್ಯತೆ ನೀಡಲಾಗಿದೆ. ಅಲ್ಲದೆ, ಸಾರ್ವಜನಿಕ ಕಾಮಗಾರಿಗಳ ಪಟ್ಟಿಯಲ್ಲಿ ಜಲ ಭದ್ರತೆ, ಗ್ರಾಮೀಣ ಮೂಲಸೌಕರ್ಯ, ಜೀವನೋಪಾಯ ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವಕ್ಕೆ ಸಂಬಂಧಿಸಿದ ಬಾಳಿಕೆ ಬರುವ ಆಸ್ತಿಗಳನ್ನು ತರಲಾಗಿದೆ. ಇದು ಸ್ವಾಗತಾರ್ಹ.

ಸುಧಾರಣೆಗಳು ಇಲ್ಲಿಗೆ ನಿಂತಿದ್ದರೆ, ಚರ್ಚೆ ಅನುಷ್ಠಾನಕ್ಕೆ ಸೀಮಿತವಾಗಿರುತ್ತಿತ್ತು. ಅದು ಹಾಗೆ ಆಗಬೇಕಿತ್ತು. ಆದರೆ ಹೊಸ ಕಾನೂನು ತಂದಿರುವ ಬದಲಾವಣೆಗಳು ಯೋಜನೆಯ ಮೂಲ ಉದ್ದೇಶವಾದ 'ಉದ್ಯೋಗ ಖಾತರಿ'ಯನ್ನೇ ದುರ್ಬಲಗೊಳಿಸುತ್ತದೆ ಎಂಬ ಆತಂಕ ಸೃಷ್ಟಿಯಾಗಿದೆ. ಇದು ನಾಗರಿಕರು ಒತ್ತಾಯಿಸುವ 'ಹಕ್ಕು-ಆಧಾರಿತ' ಖಾತರಿಯನ್ನು ಕೇಂದ್ರ ವಿನ್ಯಾಸದ ಯೋಜನೆಯನ್ನಾಗಿ ಬದಲಾಯಿಸಿದೆ. ಅಷ್ಟೇ ಅಲ್ಲ, ಕೇಂದ್ರ ಸರ್ಕಾರವೇ ವೇತನದ ಪೂರ್ಣ ಹಣವನ್ನು ನೀಡುವ ಬದಲು ಈಗ ಕೇಂದ್ರ ಮತ್ತು ರಾಜ್ಯಗಳ ನಡುವೆ 60:40 ಅನುಪಾತದಲ್ಲಿ ವೆಚ್ಚವನ್ನು ಭರಿಸಬೇಕಾಗಿದೆ. ಯೋಜನೆ ಎಲ್ಲಿ ಹೆಚ್ಚು ಅವಶ್ಯಕತೆಯಿದೆಯೋ ಅಲ್ಲಿ ಅದನ್ನು ಜಾರಿಗೆ ತರುವುದು ಕಷ್ಟವಾಗುತ್ತದೆ. ರಾಜ್ಯಗಳಿಗೆ ತೀರಾ ಹೊರೆಯಾಗುತ್ತದೆ. ಹಣಕಾಸಿನ ಸಾಮರ್ಥ್ಯ ಕಡಿಮೆ ಇರುವ ರಾಜ್ಯಗಳು ಅಗತ್ಯವಿದ್ದರೂ ಸಹ ಹಣದ ಕೊರತೆಯಿಂದಾಗಿ ಯೋಜನೆಯನ್ನು ಕಡಿಮೆ ಬಳಸಿಕೊಳ್ಳುವ ಅಪಾಯವಿದೆ.

ಕೊನೆಯದಾಗಿ, ಕಡ್ಡಾಯವಾಗಿ 60 ದಿನಗಳ ಕಾಲ ಕೆಲಸವನ್ನು ಸ್ಥಗಿತಗೊಳಿಸುವುದರಿಂದ ದಕ್ಷತೆ ಹೆಚ್ಚುವುದಿಲ್ಲ. ಏಕೆಂದರೆ ಕೃಷಿ ಕಾಲದಲ್ಲಿ ಕಾರ್ಮಿಕರು ತಾವಾಗಿಯೇ ಮನರೇಗಾ ಕೆಲಸ ಬಿಟ್ಟು ಕೃಷಿ ಕೆಲಸಕ್ಕೆ ಹೋಗುತ್ತಾರೆ. ಆದರೆ ಈ ಕಡ್ಡಾಯ ವಿರಾಮವು ಉದ್ಯೋಗದ ಲಭ್ಯತೆಯ ಬಗ್ಗೆ ಅನಿಶ್ಚಿತತೆಯನ್ನು ಮೂಡಿಸುತ್ತದೆ. ಅದರಿಂದ ಕೂಲಿ ಮಾರುಕಟ್ಟೆ ಮತ್ತು ಬೇಡಿಕೆಯ ಮೇಲೆ ಋಣಾತ್ಮಕ ಪರಿಣಾಮ ಉಂಟು ಮಾಡುತ್ತದೆ. ಕೆಲವು ಶ್ರೀಮಂತ ರಾಜ್ಯಗಳು ಅವರಲ್ಲಿರುವ ಬಡವರ ಪಾಲಿಗಿಂತ ಹೆಚ್ಚಿನ ಮನರೇಗಾ ಅನುದಾನವನ್ನು ಬಳಸಿಕೊಳ್ಳುತ್ತವೆ ಎಂಬುದು ಸುಧಾರಣೆಯ ಹಿಂದಿನ ಕಾಳಜಿಯಾಗಿದ್ದಿರಬಹುದು. ಆದರೆ ಅದಕ್ಕೆ ಪರಿಹಾರವೆಂದರೆ ಬಡ ರಾಜ್ಯಗಳಲ್ಲಿ ಅನುಷ್ಠಾನದ ಗುಣಮಟ್ಟವನ್ನು ಸುಧಾರಿಸುವುದು. ಯೋಜನೆಯನ್ನು ಚೆನ್ನಾಗಿ ಅನುಷ್ಠಾನಗೊಳಿಸಿದವರನ್ನು ಶಿಕ್ಷಿಸುವುದಲ್ಲ. ಕೇಂದ್ರದ ಹಣಕಾಸಿನ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದು ಉದ್ದೇಶವಾಗಿದ್ದರೆ ಖರ್ಚನ್ನು 60:40 ಅನುಪಾತದಲ್ಲಿ ವಿಂಗಡಿಸುವುದಕ್ಕಿಂತ ಕೇಂದ್ರವು 75 ದಿನಗಳ ಖರ್ಚನ್ನು ಪೂರ್ಣ ವಹಿಸಿಕೊಂಡು ಹೆಚ್ಚಿನ 50 ದಿನಗಳ ಖರ್ಚನ್ನು ಕ್ರೋಡೀಕರಿಸಲು ರಾಜ್ಯಗಳಿಗೆ ತಿಳಿಸಬಹುದಿತ್ತು.

ಭಾರತವು ತನ್ನ ಗ್ರಾಮೀಣ ಸುರಕ್ಷಾ ಜಾಲವನ್ನು ಆಧುನೀಕರಿಸುವ ಅಗತ್ಯವಿದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಪುರಾವೆಗಳು ಹೇಳುವಂತೆ ಮನರೇಗಾ ಎದುರಿಸುತ್ತಿರುವ ನಿಜವಾದ ಸವಾಲು ಅದರ ವಿನ್ಯಾಸವಲ್ಲ, ಬದಲಾಗಿ ಅಸಮರ್ಪಕ ಅನುಷ್ಠಾನವಾಗಿದೆ. ಆದ್ದರಿಂದ ಸಮಯಕ್ಕೆ ಸರಿಯಾದ ವೇತನ ಪಾವತಿ, ಪರಿಣಾಮಕಾರಿ ಕುಂದುಕೊರತೆ ನಿವಾರಣೆ ಮತ್ತು ಆಡಳಿತಾತ್ಮಕ ಬೆಂಬಲದ ಮೂಲಕ ಅನುಷ್ಠಾನವನ್ನು ಬಲಪಡಿಸುವುದು ಆದ್ಯತೆಯ ವಿಷಯವಾಗಬೇಕು.
'ವಿಕಸಿತ' ಮತ್ತು 'ಆತ್ಮನಿರ್ಭರ' ಭಾರತವಾಗಲು ಬಯಸುವ ದೇಶಕ್ಕೆ, ಗ್ರಾಮೀಣ ವೇತನವನ್ನು ಹೆಚ್ಚಿಸುವುದು ಮತ್ತು ಬೇಡಿಕೆಯ ನಿರಂತರತೆಯನ್ನು ಕಾಪಾಡಿಕೊಳ್ಳುವುದು ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕೆ, ಕೃಷಿಯೇತರ ಉದ್ಯೋಗವನ್ನು ಹೆಚ್ಚಿಸುವುದಕ್ಕೆ, ಹಾಗೂ ಸ್ಥಳೀಯ ಮಾರುಕಟ್ಟೆಯನ್ನು ವಿಸ್ತರಿಸುವುದಕ್ಕೆ ಅತ್ಯಗತ್ಯ.

ಒಂದು ವಿಶ್ವಾಸಾರ್ಹ ಹಾಗೂ ಸಮರ್ಪಕವಾಗಿ ಜಾರಿಯಾದ ಉದ್ಯೋಗ ಖಾತರಿ ಕಾರ್ಯಕ್ರಮವು, ಸಮಾನತೆಯನ್ನು ಹೆಚ್ಚಿಸುವ ಹಾಗೂ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಫಲಿತಾಂಶಗಳನ್ನು ದೊಡ್ಡ ಪ್ರಮಾಣದಲ್ಲಿ ನೀಡಬಲ್ಲದು ಎಂಬುದಕ್ಕೆ ಪ್ರಬಲ ಪುರಾವೆಗಳಿವೆ. ಯಾವುದೇ ಸುಧಾರಣೆಗಳು ಈ ಯೋಜನೆಯನ್ನು ಹೆಚ್ಚು ಬಲಗೊಳಿಸಬೇಕೆ ಹೊರತು, ಅದರ ಯಶಸ್ಸಿಗೆ ಕಾರಣವಾದ ಮೂಲಭೂತ ವೈಶಿಷ್ಟ್ಯಗಳನ್ನು ದುರ್ಬಲಗೊಳಿಸಬಾರದು.

Karthik Muralidharan is Tata Chancellor's professor of economics at University of California, San Diego and Sandip Sukhtankar is professor of economics at University of Virginia.

ಕೃಪೆ: ಹಿಂದುಸ್ತಾನ್ ಟೈಮ್ಸ್



‘ವಿಬಿ–ಗ್ರಾಮ್ ಜಿ’ ಕಾಯ್ದೆ 2025: ರಚನಾತ್ಮಕ ಲೋಪದೋಷಗಳ ನಿವಾರಣೆ

ಶಿವ್‌ರಾಜ್ ಸಿಂಗ್ ಚೌಹಾಣ್

ಭಾರತದ ರಾಷ್ಟ್ರಪತಿಯವರು ‘ವಿಕಸಿತ ಭಾರತ ಉದ್ಯೋಗ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) ಕಾಯ್ದೆ, 2025’ಕ್ಕೆ ಅಂಕಿತ ಹಾಕಿದ್ದಾರೆ. ಈ ಕಾಯ್ದೆಯು ಶಾಸನಬದ್ಧ ಕೂಲಿ ಉದ್ಯೋಗ ಖಾತರಿಯನ್ನು 125 ದಿನಗಳಿಗೆ ಹೆಚ್ಚಿಸುವುದಲ್ಲದೆ, ಸಬಲೀಕರಣ ಮತ್ತು ಸಮನ್ವಯದ ಮೂಲಕ ಗ್ರಾಮೀಣ ಜೀವನೋಪಾಯವನ್ನು ಬಲಪಡಿಸಿ, ಸ್ವಾವಲಂಬಿ ಗ್ರಾಮೀಣ ಭಾರತವನ್ನು ನಿರ್ಮಿಸುವ ಗುರಿ ಹೊಂದಿದೆ.

ಅಪಾರ್ಥ ಮತ್ತು ತಪ್ಪು ಕಲ್ಪನೆಗಳು

‘ವಿಬಿ–ಗ್ರಾಮ್ ಜಿ’ ಕಾಯ್ದೆ ಜಾರಿಗೆ ಬರುತ್ತಿದ್ದಂತೆಯೇ, ಕೆಲವು ಟೀಕಾಕಾರರು ಹಲವು ಊಹೆಗಳನ್ನು ಮಂಡಿಸಿದ್ದಾರೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವ್ಯಾವುವು ನಿಲ್ಲುವುದಿಲ್ಲ. ಉದ್ಯೋಗ ಖಾತರಿಯನ್ನು ದುರ್ಬಲಗೊಳಿಸಲಾಗಿದೆ, ವಿಕೇಂದ್ರೀಕರಣ ಮತ್ತು ಬೇಡಿಕೆ ಆಧಾರಿತ ಹಕ್ಕುಗಳನ್ನು ಸಮಾಲೋಚನೆ ನಡೆಸದೆ ಕಡೆಗಣಿಸಲಾಗಿದೆ. ಮತ್ತು ಈ ಸುಧಾರಣೆಯು ವಿತ್ತೀಯ ಹಿಂತೆಗೆತದ ತಂತ್ರವಾಗಿದೆ ಎಂದು ಪ್ರತಿಪಾದಿಸಲಾಗುತ್ತಿದೆ. ಆದರೆ ಈ ಎಲ್ಲಾ ವಾದಗಳೂ ಕಾಯ್ದೆಯ ವಸ್ತು ಹಾಗು ಆಶಯವನ್ನು ತಪ್ಪಾಗಿ ಅರ್ಥೈಸಿಕೊಂಡಿರುವುದರಿಂದ ಉದ್ಭವಿಸಿವೆ. ಈ ತಪ್ಪು ಗ್ರಹಿಕೆಗೆ ಕಾರಣವೇನೆಂದರೆ, ಪರಿಕಲ್ಪನೆಗಳನ್ನು ಪೂರ್ಣ ತಪ್ಪಾಗಿ ಗ್ರಹಿಸಿರುವುದು. ಇವರು ಕಲ್ಯಾಣ (Welfare) ಮತ್ತು ಅಭಿವೃದ್ಧಿ (Development) ಎರಡನ್ನೂ ಪರಸ್ಪರ ವಿರುದ್ಧವಾದ ಆಯ್ಕೆಗಳು ಎಂದು ತಪ್ಪಾಗಿ ಗ್ರಹಿಸಿಕೊಂಡಿದ್ದಾರೆ. ಆದರೆ ಹೊಸ ಕಾಯ್ದೆ ಇವೆರಡನ್ನೂ ಪೂರಕವಾಗಿ ನೋಡುತ್ತದೆ. ಜೀವನೋಪಾಯದ ಖಾತರಿಯನ್ನು ಒದಗಿಸುವ ಕಲ್ಯಾಣ ಕಾರ್ಯಕ್ರಮ ಹಾಗೂ ಸುಸ್ಥಿರ ಮೂಲಸೌಕರ್ಯದ ಸೃಷ್ಟಿ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಅಭಿವೃದ್ಧಿ– ಇವೆರಡೂ ಒಂದಕ್ಕೊಂದು ಪೂರಕ ಎಂದು ಭಾವಿಸುತ್ತದೆ. ಆದಾಯದ ಬೆಂಬಲ, ಆಸ್ತಿಯ ಸೃಷ್ಟಿ, ಕೃಷಿ ಸ್ಥಿರತೆ ಮತ್ತು ದೀರ್ಘಕಾಲೀನ ಗ್ರಾಮೀಣ ಉತ್ಪಾದಕತೆಯನ್ನು ನಾವು ಒಂದು ಸರಪಳಿಯಂತೆ ನೋಡುತ್ತಿದ್ದೇವೆಯೆ ಹೊರತು ಪ್ರತ್ಯೇಕ ಆಯ್ಕೆಗಳನ್ನಾಗಿಯಲ್ಲ. ಇದು ಕೇವಲ ಆಶಯವಲ್ಲ, ಬದಲಾಗಿ ಶಾಸನಬದ್ಧ ವಿನ್ಯಾಸವಾಗಿದೆ.

ಉದ್ಯೋಗದ ಕಾನೂನುಬದ್ಧ ಹಕ್ಕನ್ನು ದುರ್ಬಲಗೊಳಿಸಲಾಗಿದೆ ಎಂಬ ವಾದ ಸರಿಯಲ್ಲ. ಈ ಕಾಯ್ದೆಯು ಉದ್ಯೋಗ ಖಾತರಿಯ ಶಾಸನಬದ್ಧ ಮತ್ತು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾದ (Justiciable) ಸ್ವರೂಪವನ್ನು ಉಳಿಸಿಕೊಂಡಿದೆ. ಮಾತ್ರವಲ್ಲದೆ, ಅದರ ಜಾರಿಯನ್ನು ಮತ್ತಷ್ಟು ಬಲಪಡಿಸಿದೆ. ಉದ್ಯೋಗದ ಹಕ್ಕನ್ನು ಕಡಿತಗೊಳಿಸುವ ಬದಲು 100ರಿಂದ 125 ದಿನಗಳವರೆಗೆ ವಿಸ್ತರಿಸಲಾಗಿದೆ. ಹಿಂದೆ ನಿರುದ್ಯೋಗ ಭತ್ಯೆಯನ್ನು ಪಡೆಯಲು ಅಡ್ಡಿಯಾಗಿದ್ದ ಕ್ಲಿಷ್ಟಕರ ನಿಯಮಗಳನ್ನು ತೆಗೆದುಹಾಕಲಾಗಿದೆ ಮತ್ತು ಕಾಲಮಿತಿಯ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲಾಗಿದೆ. ಈ ಸುಧಾರಣೆಯು ಶಾಸನಬದ್ಧ ಭರವಸೆ ಮತ್ತು ವಾಸ್ತವದ ನಡುವೆ ದೀರ್ಘಕಾಲದಿಂದ ಇದ್ದ ಕಂದಕವನ್ನು ನೇರವಾಗಿ ಸರಿಪಡಿಸುತ್ತದೆ. ಈ ಅರ್ಥದಲ್ಲಿ, ಯೋಜನೆಯು ಬೇಡಿಕೆಯನ್ನು ಹತ್ತಿಕ್ಕುವುದಿಲ್ಲ; ಬದಲಾಗಿ ಅದನ್ನು ಕಾರ್ಯರೂಪಕ್ಕೆ ತರುತ್ತದೆ.

ಬೇಡಿಕೆ ಆಧಾರಿತ ಉದ್ಯೋಗವನ್ನು ಕೈಬಿಟ್ಟು ಮೇಲಿನಿಂದ ಹೇರಲಾಗುವ (Top-down) ಯೋಜನೆಗೆ ಆದ್ಯತೆ ನೀಡಲಾಗಿದೆ ಎಂಬ ವಾದವೂ ಸುಳ್ಳು. ಕೆಲಸದ ಬೇಡಿಕೆಯು ಇಂದಿಗೂ ಕಾರ್ಮಿಕರಿಂದಲೇ ಬರಲಿದೆ. ವ್ಯತ್ಯಾಸವೇನೆಂದರೆ, ಸಂಕಷ್ಟ ಬಂದ ಮೇಲೆ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ, ಗ್ರಾಮ ಮಟ್ಟದ ಮುನ್ನೆಚ್ಚರಿಕೆಯ ಯೋಜನೆಗಳ ಮೂಲಕ ಕಾರ್ಮಿಕರು ಕೆಲಸ ಕೇಳಿದಾಗ ಅವರಿಗೆ ತಕ್ಷಣ ಕೆಲಸ ಸಿಗುವಂತೆ ಆಡಳಿತಾತ್ಮಕ ಸಿದ್ಧತೆ ಮಾಡಿಕೊಳ್ಳುವುದು. ಮತ್ತು ಕೆಲಸವು ಸದಾ ಲಭ್ಯವಿರುವಂತೆ ಸಿದ್ಧವಾಗಿರುವುದು. ಇಲ್ಲಿ ‘ಯೋಜನೆ’ಯ ಉದ್ದೇಶ ಬೇಡಿಕೆಯನ್ನು ಹತ್ತಿಕ್ಕುವುದಕ್ಕಲ್ಲ, ಬದಲಾಗಿ ಅದನ್ನು ವ್ಯವಸ್ಥಿತವಾಗಿ ಪೂರೈಸುವುದು.

ಕೇಂದ್ರೀಕರಣದ ಆರೋಪವು ಈ ಕಾನೂನಿನ ಮೂಲ ರಚನೆಯನ್ನೇ ಕಡೆಗಣಿಸುತ್ತದೆ. ಗ್ರಾಮ ಪಂಚಾಯತ್‌ಗಳೇ ಪ್ರಾಥಮಿಕ ಯೋಜನೆಯನ್ನು ರೂಪಿಸುವ ಹಾಗೂ ಅನುಷ್ಠಾನಗೊಳಿಸುವ ಸಂಸ್ಥೆಗಳಾಗಿ ಮುಂದುವರಿಯುತ್ತವೆ. ಮತ್ತು ಗ್ರಾಮ ಸಭೆಗಳಿಗೆ ಸ್ಥಳೀಯ ಯೋಜನೆಗಳನ್ನು ಅನುಮೋದಿಸುವ ಅಧಿಕಾರ ಹಾಗೆ ಮುಂದುವರಿಯುತ್ತದೆ. ಇಲ್ಲಿ ಆಗಿರುವ ಬದಲಾವಣೆಯೆಂದರೆ, ವಿಕೇಂದ್ರೀಕೃತ ಯೋಜನೆಯು ಇನ್ನು ಮುಂದೆ ತಾತ್ಕಾಲಿಕ ಅಥವಾ



ಸಾಂದರ್ಭಿಕವಾಗಿ ಇರದೆ, ಒಂದು ಸಾಂಸ್ಥಿಕ ಮತ್ತು ಸಹಭಾಗಿತ್ವದ ಪ್ರಕ್ರಿಯೆಯಾಗಿ ಬದಲಾಗಿದೆ. 'ವಿಕಸಿತ ಗ್ರಾಮ ಪಂಚಾಯತ್ ಯೋಜನೆ'ಗಳನ್ನು ಬ್ಲಾಕ್, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕ್ರೋಢೀಕರಿಸುವುದರ ಉದ್ದೇಶ ವಿವಿಧ ಕ್ಷೇತ್ರಗಳ ನಡುವೆ ಸಮನ್ವಯ ಮತ್ತು ಪಾರದರ್ಶಕತೆ ತರುವುದೇ ಹೊರತು ಸ್ಥಳೀಯ ಆದ್ಯತೆಗಳನ್ನು ಕಡೆಗಣಿಸುವುದಲ್ಲ. ಇಲ್ಲಿ ಕೇಂದ್ರೀಕೃತವಾಗಿರುವುದು ಕೇವಲ ವ್ಯವಸ್ಥೆಯ ಸುಸಂಬದ್ಧತೆ (Coherence) ಮಾತ್ರ; ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಸ್ಥಳೀಯವಾಗಿಯೇ ಉಳಿಯಲಿದೆ. ಇದು ವಿಕೇಂದ್ರೀಕರಣವನ್ನು ದುರ್ಬಲಗೊಳಿಸುತ್ತಿಲ್ಲ. ಬದಲಿಗೆ ಛಿದ್ರವಾಗಿದ್ದ ವ್ಯವಸ್ಥೆಯನ್ನು ಸರಿಪಡಿಸುತ್ತದೆ.

ಸಮಾಲೋಚನೆ ನಡೆಸದೆ ಈ ಸುಧಾರಣೆಯನ್ನು ತರಲಾಗಿದೆ ಎಂಬ ಆರೋಪವು ನಿರಾಧಾರವಾದದ್ದು ಎಂಬುದು ದಾಖಲೆಗಳನ್ನು ನೋಡಿದರೆ ತಿಳಿಯುತ್ತದೆ. ಈ ಮಸೂದೆಯನ್ನು ರೂಪಿಸುವ ಮೊದಲು ರಾಜ್ಯ ಸರ್ಕಾರಗಳೊಂದಿಗೆ ವ್ಯಾಪಕ ಸಮಾಲೋಚನೆಗಳು, ತಾಂತ್ರಿಕ ಕಾರ್ಯಾಗಾರಗಳು ಮತ್ತು ವಿವಿಧ ಪಾಲುದಾರರೊಂದಿಗೆ ಚರ್ಚೆಗಳು ನಡೆದಿವೆ. ಗ್ರಾಮ ಯೋಜನಾ ರಚನೆಗಳು, ಸಮನ್ವಯದ ಕಾರ್ಯವಿಧಾನಗಳು ಮತ್ತು ಡಿಜಿಟಲ್ ಆಡಳಿತ ವ್ಯವಸ್ಥೆಯಂತಹ ಪ್ರಮುಖ ವಿನ್ಯಾಸಗಳನ್ನು ರಾಜ್ಯಗಳ ಹಿಮ್ಮಾಹಿತಿ ಮತ್ತು ವರ್ಷಗಳ ಅನುಷ್ಠಾನದ ಅನುಭವದ ಆಧಾರದ ಮೇಲೆ ರೂಪಿಸಲಾಗಿದೆ.

ಅನುದಾನದಲ್ಲಿ ಏರಿಕೆ ಮತ್ತು ಸಮಾನತೆ

ಕಳೆದ ದಶಕದಲ್ಲಿ ಉದ್ಯೋಗ ಖಾತರಿಯನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸಲಾಗಿದೆ ಎಂಬ ಸಾಮಾನ್ಯ ಪ್ರತಿಪಾದನೆಯು ಸತ್ಯಕ್ಕೆ ದೂರವಾಗಿದೆ. ಬಜೆಟ್ ಹಂಚಿಕೆಯು 2013-14ರಲ್ಲಿ ರೂ. 33,000 ಕೋಟಿಯಿಂದ 2024-25ರಲ್ಲಿ 86,000 ಕೋಟಿ ರೂಪಾಯಿಗೆ ಏರಿದೆ. ಸೃಷ್ಟಿಯಾದ ಮಾನವ ದಿನಗಳು (Person day) 2013-14ರವರೆಗಿನ ಅವಧಿಯಲ್ಲಿ 1,660 ಕೋಟಿ ಇದ್ದದ್ದು, ನಂತರದ ಅವಧಿಯಲ್ಲಿ 3,210 ಕೋಟಿಗೆ ಏರಿದೆ. ಕೇಂದ್ರದಿಂದ ಬಿಡುಗಡೆಯಾದ ನಿಧಿ 2.13 ಲಕ್ಷ ಕೋಟಿ ರೂ.ಯಿಂದ 8.53 ಲಕ್ಷ ಕೋಟಿ ರೂಪಾಯಿಗೆ ಏರಿಕೆಯಾಗಿದೆ ಮತ್ತು ಪೂರ್ಣಗೊಂಡ ಕಾಮಗಾರಿಗಳು 153 ಲಕ್ಷದಿಂದ 862 ಲಕ್ಷಕ್ಕೆ ವಿಸ್ತರಿಸಿವೆ. ಮಹಿಳೆಯರ ಭಾಗವಹಿಸುವಿಕೆ ಶೇ. 48 ರಿಂದ ಶೇ. 56.73 ಕ್ಕೆ ಏರಿದೆ. ಶೇ. 99 ಕ್ಕೂ ಹೆಚ್ಚು ನಿಧಿ ವರ್ಗಾವಣೆಯ ಆದೇಶಗಳು ಈಗ ಸರಿಯಾದ ಸಮಯಕ್ಕೆ ವಿತರಣೆಯಾಗುತ್ತಿದೆ. ಮತ್ತು ಸುಮಾರು ಶೇ. 99 ರಷ್ಟು ಸಕ್ರಿಯ ಕಾರ್ಮಿಕರಿಗೆ ಆಧಾರ್ ಪಾವತಿ ವ್ಯವಸ್ಥೆಯೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ. ಇವೆಲ್ಲವೂ ಪಾವತಿಯನ್ನು ತಲುಪಿಸುವಲ್ಲಿ ಸುಧಾರಣೆಯನ್ನು ಸೂಚಿಸುತ್ತದೆಯೇ ಹೊರತು ನಿರ್ಲಕ್ಷ್ಯವನ್ನಲ್ಲ.

ಆದರೆ, ಅನುಷ್ಠಾನದ ಅನುಭವದಿಂದ ಹಳೆಯ ವ್ಯವಸ್ಥೆಯಲ್ಲಿದ್ದ ಕೆಲವು ರಚನಾತ್ಮಕ ದೋಷಗಳು ಕ್ರಮೇಣ ಕಾಣತೊಡಗಿದವು. ಉದ್ಯೋಗ ಸೃಷ್ಟಿಯಲ್ಲಿ ಸಮಸ್ಯೆ, ನಿರುದ್ಯೋಗ ಭತ್ಯೆ ಜಾರಿಯಲ್ಲಿನ ವೈಫಲ್ಯ, ಆಸ್ತಿ ನಿರ್ಮಾಣದಲ್ಲಿ ಅವ್ಯವಸ್ಥೆ, ಮತ್ತು ನಕಲಿ ದಾಖಲೆಗಳ (Ghost entrie) ಸಾಧ್ಯತೆಗಳು ಇತ್ಯಾದಿ ಸಮಸ್ಯೆಗಳು ಗಮನಕ್ಕೆ ಬರತೊಡಗಿತು. ಬರಗಾಲ, ವಲಸೆಯ ಏರಿಕೆ ಅಥವಾ ಕೋವಿಡ್-19 ಸಾಂಕ್ರಾಮಿಕದಂತಹ ಬಿಕ್ಕಟ್ಟಿನ ಸಮಯದಲ್ಲಿ ಈ ದೋಷಗಳು ಸ್ಪಷ್ಟವಾಗಿ ಗೋಚರಿಸುತ್ತಿದ್ದವು.

ಹೊಸ ಕಾಯ್ದೆಯಡಿ ನಡೆಯುತ್ತಿರುವ ವಿತ್ತೀಯ ಪುನರ್ರಚನೆಯನ್ನು ಜವಾಬ್ದಾರಿಯಿಂದ ನುಣುಚಿಕೊಳ್ಳುವ ತಂತ್ರ ಎಂದು ತಪ್ಪಾಗಿ ಚಿತ್ರಿಸಲಾಗುತ್ತಿದೆ. ವಾಸ್ತವವಾಗಿ ಕೇಂದ್ರ ಸರ್ಕಾರದ ಪಾಲು 86,000 ಕೋಟಿ ರೂಪಾಯಿಂದ ಸುಮಾರು 95,000 ಕೋಟಿಗೆ ಏರಿಕೆಯಾಗುತ್ತಿದೆ, ಇದು ಗ್ರಾಮೀಣ ಉದ್ಯೋಗಕ್ಕೆ ಕೇಂದ್ರದ ಬೆಂಬಲ ಮುಂದುವರಿದಿರುವುದನ್ನು ಸಾಬೀತುಪಡಿಸುತ್ತದೆ. 60:40 ಹಣಕಾಸು ಮಾದರಿಯು ಕೇಂದ್ರ ಪ್ರಾಯೋಜಿತ ಯೋಜನೆಗಳ ದೀರ್ಘಕಾಲದ ಸ್ಥಾಪಿತ ಪದ್ಧತಿಯಾಗಿದೆ. ಈಶಾನ್ಯ ರಾಜ್ಯಗಳು, ಹಿಮಾಲಯದ ರಾಜ್ಯಗಳು ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ 90:10 ಅನುಪಾತವನ್ನು ನೀಡಲಾಗಿದೆ. ಇದು ವಿತ್ತೀಯ ಹಿಂತೆಗೆತವಲ್ಲ, ಬದಲಾಗಿ ಜಂಟಿ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಬಲಪಡಿಸುವ ಕ್ರಮವಾಗಿದೆ.

ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ನಿಯಮ ಆಧಾರಿತ 'ಮಾನದಂಡಾತ್ಮಕ ಹಂಚಿಕೆ' (Normative allocation) ಮಾಡಲಾಗುತ್ತದೆ. ಇಲ್ಲಿ ರಾಜ್ಯಗಳ ಪಾಲುಗಳನ್ನು ನಿಯಮಗಳಲ್ಲಿ ಸೂಚಿಸಲಾದ ವಸ್ತುನಿಷ್ಠ ಮಾನದಂಡಗಳ ಮೂಲಕ ನಿರ್ಧರಿಸಲಾಗುತ್ತದೆ. ರಾಜ್ಯಗಳನ್ನು ಕೇವಲ ಅನುಷ್ಠಾನ ಸಂಸ್ಥೆಗಳಾಗಿ ನೋಡದೆ ಅಭಿವೃದ್ಧಿಯ ಪಾಲುದಾರರನ್ನಾಗಿ ಪರಿಗಣಿಸಲಾಗಿದ್ದು, ಈ ಶಾಸನಬದ್ಧ ಚೌಕಟ್ಟಿನೊಳಗೆ ತಮ್ಮದೇ ಆದ ಯೋಜನೆಗಳನ್ನು ಅಧಿಸೂಚಿಸುವ ಅಧಿಕಾರ ಅವರಿಗೆ ನೀಡಲಾಗಿದೆ. ಅಷ್ಟೇ ಅಲ್ಲದೆ, ನೈಸರ್ಗಿಕ ವಿಕೋಪಗಳು ಅಥವಾ ಇತರ ಅಸಾಧಾರಣ ಸಂದರ್ಭಗಳಲ್ಲಿ ವಿಶೇಷ ಸಡಿಲಿಕೆಯನ್ನು ಶಿಫಾರಸು ಮಾಡುವ ಅಧಿಕಾರ ರಾಜ್ಯಗಳಿಗಿದೆ.

ವರ್ಷದ ಕೃಷಿ ಸುಗ್ಗಿಯ ಸಮಯದಲ್ಲಿ ಒಟ್ಟು 60 ದಿನಗಳವರೆಗೆ ಕೆಲಸಗಳನ್ನು ಸ್ಥಗಿತಗೊಳಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಲಾಗಿದೆ. ಹವಾಮಾನ ಪರಿಸ್ಥಿತಿಗಳಿಗೆ ಅನುಗುಣವಾಗಿ ಜಿಲ್ಲೆ, ಬ್ಲಾಕ್ ಅಥವಾ ಗ್ರಾಮ ಪಂಚಾಯತ್ ಮಟ್ಟದಲ್ಲಿ ಈ ಅಧಿಸೂಚನೆಗಳನ್ನು ಹೊರಡಿಸಬಹುದು. ಇದು ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುತ್ತದೆ.

ಯುಪಿಎ ಸರ್ಕಾರದ ವೈಫಲ್ಯದ ಇತಿಹಾಸ

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ತನ್ನ ಮೊದಲ ಅವಧಿಯಿಂದಲೇ ಮನರೇಗಾದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿತ್ತು. ಕಾಂಗ್ರೆಸ್ ಪ್ರಣಾಳಿಕೆಯು "ಕನಿಷ್ಠ ರೂ100ಗಳ ನೈಜ ಕೂಲಿಯೊಂದಿಗೆ 100 ದಿನಗಳ ಕೆಲಸ" ನೀಡುತ್ತೇವೆ ಎಂದಿದ್ದರೂ, 2009 ರಲ್ಲೇ ಸರ್ಕಾರವು ಕೂಲಿಯನ್ನು 100ಕ್ಕೆ ಸೀಮಿತಗೊಳಿಸಿ ವರ್ಷಗಟ್ಟಲೆ ಫ್ರೀಜ್ ಮಾಡಿ ಗ್ರಾಮೀಣ ಸಂಕಷ್ಟವನ್ನು ನಿರ್ಲಕ್ಷಿಸಿತು. ಕೇಂದ್ರವೇ ಒಪ್ಪಿಕೊಂಡಂತೆ ರಾಜ್ಯಗಳು ಈ ಯೋಜನೆಯಡಿಯಲ್ಲಿ ಸ್ವಯಂಪ್ರೇರಿತವಾಗಿ ವರ್ತಿಸುತ್ತಿದ್ದವು, ಇದು ಗಂಭೀರ ಆಡಳಿತಾತ್ಮಕ ವೈಫಲ್ಯವನ್ನು ತೋರಿಸಿತ್ತು.

ಯುಪಿಎ ಎರಡನೇ ಅವಧಿಯಲ್ಲಿ ಯೋಜನೆಯ ಮೇಲಿನ ಬದ್ಧತೆ ಮತ್ತಷ್ಟು ಕುಸಿಯಿತು. ಬಜೆಟ್ ಹಂಚಿಕೆಯನ್ನು 2010-11ರಲ್ಲಿ ರೂ.40,100 ಕೋಟಿಯಿಂದ 2012-13ರ ಹೊತ್ತಿಗೆ ರೂ.33,000 ಕೋಟಿಗೆ ಕಡಿತಗೊಳಿಸಲಾಯಿತು. 2013 ರ ಸಂಸತ್ತಿನ ಉತ್ತರದಲ್ಲಿ ಅಂದಿನ ಸಚಿವರೇ ಉದ್ಯೋಗ ಪಡೆದವರ ಸಂಖ್ಯೆ ಗಣನೀಯವಾಗಿ ಇಳಿದಿದೆ ಎಂದು ಒಪ್ಪಿಕೊಂಡಿದ್ದರು. ಪಾವತಿಯಲ್ಲಿ ಪಾರದರ್ಶಕತೆ ಇಲ್ಲದ ಕಾರಣ ಕಾರ್ಮಿಕರು ಕೆಲಸ ಕೇಳಲು ನಿರುತ್ಸಾಹಗೊಂಡಿದ್ದರು.

2013 ರ ಸಿಎಜಿ (CAG) ವರದಿಯು ಯುಪಿಎ ಅವಧಿಯ ಮನರೇಗಾ ದುಸ್ಥಿತಿಯನ್ನು ಬಯಲು ಮಾಡಿತು. ವ್ಯಾಪಕ ಭ್ರಷ್ಟಾಚಾರ, 4.33 ಲಕ್ಷಕ್ಕೂ ಹೆಚ್ಚು ನಕಲಿ ಜಾಬ್ ಕಾರ್ಡ್‌ಗಳು, ಸಾವಿರಾರು ಕೋಟಿ ಹಣದ ದುರುಪಯೋಗ ಮತ್ತು 23 ರಾಜ್ಯಗಳಲ್ಲಿ ಕೂಲಿ ಪಾವತಿಯಲ್ಲಿ ವಿಳಂಬದಂತಹ ಗಂಭೀರ ಲೋಪಗಳನ್ನು ಅದು ಎತ್ತಿ ತೋರಿಸಿತ್ತು. ಬಡವರ ಸಂಖ್ಯೆ ಹೆಚ್ಚಿರುವ ಬಿಹಾರ, ಉತ್ತರಪ್ರದೇಶ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳು ಕೇವಲ ಶೇ. 20 ರಷ್ಟು ನಿಧಿಯನ್ನು ಮಾತ್ರ ಬಳಸಿಕೊಂಡಿದ್ದವು.

ಕಲ್ಯಾಣ ಮತ್ತು ಅಭಿವೃದ್ಧಿಯ ನಡುವೆ ಒಂದನ್ನು ಆರಿಸಿಕೊಳ್ಳಬೇಕು ಎನ್ನುವುದು ಒಂದು ಸುಳ್ಳು ದ್ವಂದ್ವ. ಜೀವನೋಪಾಯದ ಖಾತರಿಯು ಸುಸ್ಥಿರ ಆಸ್ತಿ ಸೃಷ್ಟಿಯೊಂದಿಗೆ ಕೈಜೋಡಿಸಿದಾಗ ಮಾತ್ರ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಹಳೆಯ ದೋಷಪೂರಿತ ವ್ಯವಸ್ಥೆಯನ್ನು ಹಾಗೆಯೇ ಉಳಿಸಿಕೊಳ್ಳಬೇಕೆ ಅಥವಾ ಅದನ್ನು ಆಧುನಿಕ ಮತ್ತು ಸಮಗ್ರ ಉದ್ಯೋಗ ಖಾತರಿ ವ್ಯವಸ್ಥೆಯಾಗಿ ಪರಿವರ್ತಿಸಬೇಕೆ ಎಂಬುದು ನಮ್ಮ ಮುಂದಿದ್ದ ನಿರ್ಧಾರವಾಗಿತ್ತು. ಹೊಸ ಕಾಯ್ದೆಯು ಕೆಲಸದ ಹಕ್ಕನ್ನು ರಕ್ಷಿಸುವುದರ ಜೊತೆಗೆ ರಚನಾತ್ಮಕ ದೋಷಗಳನ್ನು ಸರಿಪಡಿಸಿದೆ. ಇದು ವಿನಾಶವಲ್ಲ, ಬದಲಾಗಿ ಅನುಭವದ ಆಧಾರದ ಮೇಲೆ ನಡೆದ ನವೀಕರಣದ ಪ್ರಕ್ರಿಯೆ.

ಶಿವ್‌ರಾಜ್ ಸಿಂಗ್ ಚೌಹಾಣ್: ಕೇಂದ್ರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು.

ಹೊಸ ಉದ್ಯೋಗ ಕಾನೂನು: ಗ್ರಾಮೀಣ ಸಮಾನತೆಯ ಮೌಲ್ಯಗಳ ಹಿನ್ನಡೆ

ಲೇಖಕರು: ನಿಖಿಲ್ ಡೇ ಮತ್ತು ಅರುಣಾ ರಾಯ್ ದಿನಾಂಕ: ಡಿಸೆಂಬರ್ 24, 2025

ಕಳೆದ ಎರಡು ದಶಕಗಳಿಂದ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯು (MGNREGA) ಭಾರತದ ಗ್ರಾಮೀಣಾಭಿವೃದ್ಧಿಯ ಚೌಕಟ್ಟನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಆದರೆ, ಡಿಸೆಂಬರ್ 18 ರಂದು ಯಾವುದೇ ಸಾರ್ವಜನಿಕ ಸಮಾಲೋಚನೆ ಅಥವಾ ಸಂಸದೀಯ ಸಮಿತಿಗಳ ಪರಿಶೀಲನೆಯಿಲ್ಲದೆ, ಇದನ್ನು 'ವಿಬಿ–ಗ್ರಾಮ್ ಜಿ' (VB-G RAM G) ಕಾಯ್ದೆಯಾಗಿ ಬದಲಾಯಿಸಲಾಯಿತು. ಈ ಬಗ್ಗೆ ಗಂಭೀರ ಕಳವಳುಗಳು ವ್ಯಕ್ತವಾಗಿವೆ. ಆತಂಕ ಕೇವಲ ಈ ಹೊಸ ಶಾಸನವನ್ನು ಅಂಗೀಕರಿಸಿದ ರೀತಿ ಬಗ್ಗೆ ಮಾತ್ರವಲ್ಲ ಅದರ ಉದ್ದೇಶದ ಬಗ್ಗೆಯೂ ಅಷ್ಟೇ ಕಳವಳ ವ್ಯಕ್ತವಾಗಿದೆ.

ಮಸೂದೆಯು ಅಂಗೀಕಾರವಾಗುವ ಮೊದಲು ಸಂಸತ್ತಿನಲ್ಲಿ ಮಸೂದೆಯನ್ನು ಕುರಿತು ಯಾವುದೇ ಅರ್ಥಪೂರ್ಣ ಚರ್ಚೆಗೆ ಅವಕಾಶ ಇರಲಿಲ್ಲ. ಹಾಗಾಗಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾದ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಸ್ಪಷ್ಟೀಕರಣ ಮತ್ತು ಪ್ರತಿಕ್ರಿಯೆಗಳನ್ನು ('ಹೊಸ ಉದ್ಯೋಗ ಕಾನೂನು ಸಾಮಾಜಿಕ ರಕ್ಷಣೆಯಿಂದ ಹಿಂದೆ ಸರಿಯುವ ಕ್ರಮವಲ್ಲ; ಇದರ ಗುರಿ ಸುಧಾರಣೆ') ಗಂಭೀರವಾಗಿ ವಿಶ್ಲೇಷಿಸುವುದು ಅನಿವಾರ್ಯವಾಗಿದೆ. ಅವರು ಹೀಗೆ ಹೇಳುತ್ತಾರೆ: "ವಿಬಿ–ಗ್ರಾಮ್ ಜಿ ಕಾಯ್ದೆಯು ಗ್ರಾಮೀಣ ಉದ್ಯೋಗದ ಬೇಡಿಕೆ–ಆಧಾರಿತ ಸ್ವರೂಪವನ್ನು ಕುಂದಿಸುತ್ತದೆ ಎಂಬುದು ಸಾಮಾನ್ಯ ಟೀಕೆಯಾಗಿದೆ. ಆದರೆ ಮಸೂದೆಯ ಸ್ಪಷ್ಟ ಓದಿನಿಂದ ಈ ವಾದ ಸುಳ್ಳು ಎಂಬುದು ತಿಳಿಯುತ್ತದೆ. ಕ್ಲಾಸ್ 5(1) ರ ಪ್ರಕಾರ, ಸರ್ಕಾರಕ್ಕೆ ಅಕುಶಲ ದೈಹಿಕ ದುಡಿಮೆಗೆ ಸಿದ್ಧವಿರುವ ಯಾವುದೇ ಗ್ರಾಮೀಣ ಕುಟುಂಬಕ್ಕೆ ವರ್ಷಕ್ಕೆ ಕನಿಷ್ಠ 125 ದಿನಗಳ ಉದ್ಯೋಗ ನೀಡುವ ಶಾಸನಬದ್ಧ ಬಾಧ್ಯತೆಯಿದೆ."

ಈಗ ನಾವು ಸೆಕ್ಷನ್ 5(1) ಅನ್ನು ಸಂಪೂರ್ಣವಾಗಿ ಓದೋಣ. ಮತ್ತು ಸಚಿವರ ಹೇಳಿಕೆಯೊಂದಿಗೆ ಹೋಲಿಸಿ ನೋಡೋಣ. ಸೆಕ್ಷನ್ 5(1) ರ ಪ್ರಕಾರ : "ಬೇರೆ ನಿಬಂಧನೆಗಳಿಲ್ಲದಿದ್ದಲ್ಲಿ, ಕೇಂದ್ರ ಸರ್ಕಾರವು ಅಧಿಸೂಚಿಸುವ ರಾಜ್ಯದ ಅಂತಹ ಗ್ರಾಮೀಣ ಪ್ರದೇಶಗಳಲ್ಲಿ, ಅಕುಶಲ ಕೆಲಸ ಮಾಡಲು ಸಿದ್ಧವಿರುವ ವಯಸ್ಕ ಸದಸ್ಯರನ್ನು ಹೊಂದಿರುವ ಪ್ರತಿ ಕುಟುಂಬಕ್ಕೆ, ಈ ಕಾಯ್ದೆಯಡಿ ರೂಪಿಸಲಾದ ಯೋಜನೆಯ ಪ್ರಕಾರ ವರ್ಷಕ್ಕೆ ಕನಿಷ್ಠ 125 ದಿನಗಳ ಖಾತರಿ ಉದ್ಯೋಗವನ್ನು ರಾಜ್ಯ ಸರ್ಕಾರ ಒದಗಿಸತಕ್ಕದ್ದು." ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಇನ್ನು ಮುಂದೆ ಈ ಯೋಜನೆ ಎಲ್ಲಿ ಜಾರಿಯಾಗಬೇಕು ಎಂದು ನಿರ್ಧರಿಸುವ ಅಧಿಕಾರ ಕೇಂದ್ರ ಸರ್ಕಾರದ್ದು. ಇದರೊಂದಿಗೆ, ಮನರೇಗಾ ನೀಡಿದ್ದ 'ಸಾರ್ವತ್ರಿಕ ಹಕ್ಕು' (Universal Right) ಅಂತ್ಯಗೊಂಡಂತಾಗಿದೆ.

ಗ್ರಾಮೀಣ ಭಾರತದಲ್ಲಿ ಆತಂಕ ಮೂಡಿಸಲು ಈ ಒಂದು ಅಂಶವೇ ಸಾಕು. ಆದರೆ ಇದರ ಜೊತೆಗೆ ಮತ್ತಷ್ಟು ತೊಂದರೆ ಕೊಡುವ ಅಂಶಗಳಿವೆ. ಸಚಿವರು ಸೆಕ್ಷನ್ 4(5)ಅನ್ನು ಉಲ್ಲೇಖಿಸಲು ಮರೆತಿದ್ದಾರೆ. ಅದು ಮನರೇಗಾದ 'ಬೇಡಿಕೆ–ಆಧಾರಿತ' (Demand-driven) ಗುಣಲಕ್ಷಣವನ್ನೇ ಕೊನೆಗೊಳಿಸುತ್ತದೆ. ಬದಲಾಗಿ ಇದು ಯೋಜನೆಯನ್ನು 'ಪೂರೈಕೆ–ಸೀಮಿತ' (Supply-constrained) ವ್ಯವಸ್ಥೆಯನ್ನಾಗಿ ಮಾಡುತ್ತದೆ. ಯೋಜನೆಯು ಜಾರಿಯಾಗಬಹುದಾದ "ಅಧಿಸೂಚಿತ ಪ್ರದೇಶಗಳಲ್ಲಿ" ಕೂಡ ಕಾರ್ಮಿಕರ ಹಕ್ಕುಗಳನ್ನು ಇದು ಕುಂದಿಸುತ್ತದೆ. ರಾಜ್ಯಗಳಿಗೆ ನೀಡಲಾಗುವ ಅನುದಾನವನ್ನು ಕೆಲವು ಮಾನದಂಡಗಳನ್ನು ಆಧರಿಸಿ (Normative Allocation) ಹಂಚಲಾಗುತ್ತದೆ. ಸೆಕ್ಷನ್ 2(ಏ) ಪ್ರಕಾರ, "ಮಾನದಂಡಾತ್ಮಕ ಹಂಚಿಕೆ" ಎಂದರೆ ಕೇಂದ್ರ ಸರ್ಕಾರವೇ ನಿರ್ಧರಿಸಿದ ಮಾನದಂಡಗಳನ್ನು ಆಧರಿಸಿ ರಾಜ್ಯಗಳಿಗೆ ವಿತರಿಸುವ ಹಣ.

ಕೇಂದ್ರ–ರಾಜ್ಯಗಳ ನಡುವಿನ ಕಡ್ಡಾಯ ನಿಧಿ ಹಂಚಿಕೆಯ ಹೊಸ ವ್ಯವಸ್ಥೆಯನ್ನು ಕುರಿತು ಸಚಿವರು, "ಈ ಚೌಕಟ್ಟು ರಾಜ್ಯಗಳನ್ನು ಕೇವಲ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಸ್ಥೆಗಳನ್ನಾಗಿ ನೋಡುವುದಿಲ್ಲ. ಅವುಗಳನ್ನು ಅಭಿವೃದ್ಧಿಯ ಪಾಲುದಾರರನ್ನಾಗಿ ಪರಿಗಣಿಸುತ್ತದೆ." ಎನ್ನುತ್ತಾರೆ. ಆದರೆ ರಾಜ್ಯಗಳು ಇದರಿಂದ ಸಂಭ್ರಮಗೊಂಡಂತೆ ಕಾಣುತ್ತಿಲ್ಲ. ಅದರಲ್ಲೂ ವಿಶೇಷವಾಗಿ ಬಿಜೆಪಿ ಆಡಳಿತವಿಲ್ಲದ ರಾಜ್ಯಗಳಲ್ಲಿ ಸಂಭ್ರಮ ಕಾಣುತ್ತಿಲ್ಲ. ಬಿಜೆಪಿ ಆಡಳಿತವಿರುವ ರಾಜ್ಯಗಳೂ ಕೂಡ ಈ ಅಭೂತಪೂರ್ವ ವ್ಯವಸ್ಥೆಯಿಂದ ತಮ್ಮ ಸ್ವಂತ ಅಭಿವೃದ್ಧಿ ಪಥವನ್ನು ಹೇಗೆ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಲೆ ಕೆರೆದುಕೊಳ್ಳುತ್ತಿದ್ದಾರೆ. ಎಲ್ಲಾ ರಾಜ್ಯಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿವೆ. ಮನರೇಗಾ ರಾಜ್ಯಗಳಿಗೆ ಉದ್ಯೋಗ ಮತ್ತು ಅಭಿವೃದ್ಧಿ ಎರಡನ್ನೂ ಪೂರೈಸಲು ದೊಡ್ಡ ಸಂಪನ್ಮೂಲವಾಗಿತ್ತು.

ಮತ್ತೊಂದು ಪ್ರಮುಖ ಬದಲಾವಣೆಯೆಂದರೆ, ಕೃಷಿ ಚಟುವಟಿಕೆಗಳು ಉತ್ತುಂಗದಲ್ಲಿರುವ ಸಮಯದಲ್ಲಿ ಕೆಲಸದ ಮೇಲೆ ನಿಷೇಧ ಹೇರಿರುವುದು. ಸಚಿವರ ಪ್ರಕಾರ, "ಕೃಷಿ ಕಾರ್ಮಿಕರ ಕೊರತೆಯ ಬಗ್ಗೆ ಇರುವ ಕಳವಳಗಳನ್ನು ಇಲ್ಲಿ ಪರಿಹರಿಸಲಾಗಿದೆ. ಕ್ಲಾಸ್ 6ರ ಅನ್ವಯ, ಕೃಷಿ ಬಿತ್ತನೆ ಮತ್ತು ಸುಗ್ಗಿಯ ಅವಧಿಯಲ್ಲಿ ವರ್ಷಕ್ಕೆ ಒಟ್ಟು 60 ದಿನಗಳ ಕಾಲ ಈ ಯೋಜನೆಯಡಿ ಕೆಲಸವನ್ನು ಕೈಗೊಳ್ಳದಂತೆ ಅಧಿಸೂಚಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ." ವಾಸ್ತವದಲ್ಲಿ, ಕಾರ್ಮಿಕರಿಗೆ ನ್ಯಾಯಯುತ ಕೂಲಿಯ ಹಕ್ಕನ್ನು ನಿರಾಕರಿಸುವ ಮೂಲಕ ದೊಡ್ಡ ರೈತರ ಹಿತಾಸಕ್ತಿಯನ್ನು ಕಾಪಾಡಲು ಪ್ರಯತ್ನಿಸಲಾಗುತ್ತಿದೆ. ಈ ಕಾರ್ಮಿಕರಲ್ಲಿ ಸ್ವತಃ ಅನೇಕರು ಸಣ್ಣ ಮತ್ತು ಅತಿಸಣ್ಣ ರೈತರಾಗಿದ್ದಾರೆ ಎಂಬುದು ಗಮನಾರ್ಹ. ಮನರೇಗಾ ಕಾಯ್ದೆಯು ಗ್ರಾಮೀಣ ಭಾರತದಲ್ಲಿ ಮಾಲೀಕರು ಮತ್ತು ಕಾರ್ಮಿಕರ ನಡುವಿನ ಅಸಮತೋಲನವನ್ನು ಸರಿಪಡಿಸಲು ಪ್ರಾರಂಭಿಸಿತ್ತು. ಕನಿಷ್ಠ ವೇತನ ಕಾಯ್ದೆಯು ಸರಿಯಾಗಿ ಜಾರಿಯಾಗದ ನಮ್ಮ ದೇಶದಲ್ಲಿ, ಇದು ಕಾರ್ಮಿಕರಿಗೆ ಒಂದು ರೀತಿಯ 'ಕನಿಷ್ಠ ಬೆಂಬಲ ಕೂಲಿ'ಯಾಗಿ (Minimum Support Wage) ಕೆಲಸ ಮಾಡಿತ್ತು.

"ಹರ್ ಹಾತ್ ಕೊ ಕಾಮ್ ದೊ, ಕಾಮ್ ಕಾ ಪೂರಾ ದಾಮ್ ದೊ" (ಪ್ರತಿ ಕೈಗೂ ಕೆಲಸ ನೀಡಿ, ಮಾಡಿದ ಕೆಲಸಕ್ಕೆ ಪೂರ್ಣ ವೇತನ ನೀಡಿ) ಎಂಬ ಜನಪರ ಚಳವಳಿಯ ಫಲವಾಗಿ ಮನರೇಗಾ ಜನ್ಮತಾಳಿತ್ತು. ಆದರೆ ಈಗಿನ 'ವಿಬಿ–ಗ್ರಾಮ್ ಜಿ' ವಿಧೇಯಕವು ದೊಡ್ಡ ರೈತರಿಗೆ, ಗುತ್ತಿಗೆದಾರರಿಗೆ, ಕಾರ್ಪೊರೇಟ್ ವಲಯಕ್ಕೆ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಅಗ್ಗದ ಕಾರ್ಮಿಕರನ್ನು ಪೂರೈಸುವ ಯೋಜನೆಯಾಗಿ ಬದಲಾಗುವ ಅಪಾಯವಿದೆ. ಇದು ಭಾರತದಾದ್ಯಂತ ಅಸಮಾನತೆಯನ್ನು ಮತ್ತಷ್ಟು ಗಾಢವಾಗಿಸಬಹುದು. ಈ ಕಾಯ್ದೆಯನ್ನು ವಿನ್ಯಾಸ ಮಾಡಿದವರೇ ಇದರ ರಾಜಕೀಯ ಹೊಣೆಗಾರರೂ ಆಗಿರುತ್ತಾರೆ.

ಲೇಖಕರ ಬಗ್ಗೆ: ಇವರು ಸಾಮಾಜಿಕ ಕಾರ್ಯಕರ್ತರು ಮತ್ತು 'ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ'ಯ (MKSS) ಸ್ಥಾಪಕ ಸದಸ್ಯರು.
ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್

https://indianexpress.com/article/opinion/columns/vb-g-ram-g-bill-annihilates-mgnrega-right-to-work-10421788/



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸಂವಿಧಾನದ ಮೇಲಿನ ದಾಳಿ

ಪ್ರಭಾತ್ ಪಟ್ನಾಯಕ್

ಈ ಮೊದಲು ದೇಶದ ವಿವಿಧ ರಾಜ್ಯಗಳಲ್ಲಿ ಹಲವಾರು ಉದ್ಯೋಗ ಯೋಜನೆಗಳು ಅಸ್ತಿತ್ವದಲ್ಲಿದ್ದವು. ಆದರೆ ಅವುಗಳ ವ್ಯಾಪ್ತಿ ಸೀಮಿತವಾಗಿತ್ತು. ಮತ್ತು ಅವುಗಳಿಗೆ ಹಣಕಾಸಿನ ಸಂಪನ್ಮೂಲದ ಕೊರತೆಯಿತ್ತು. 2005ರಲ್ಲಿ ಜಾರಿಗೆ ಬಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ದೇಶಾದ್ಯಂತ ಏಕರೂಪದ, ಕೇಂದ್ರ ಸರ್ಕಾರದಿಂದ ಧನಸಹಾಯ ಪಡೆಯುವ ಮತ್ತು ಮುಖ್ಯವಾಗಿ 'ಬೇಡಿಕೆ ಆಧಾರಿತ' (Demand-driven) ಯೋಜನೆಯನ್ನು ಜಾರಿಗೆ ತಂದಿತು. ಇದರ ಅಡಿಯಲ್ಲಿ ಪ್ರತಿ ಗ್ರಾಮೀಣ ಕುಟುಂಬದ ಒಬ್ಬ ವ್ಯಕ್ತಿಗೆ ಬೇಡಿಕೆಯ ಮೇರೆಗೆ ವರ್ಷಕ್ಕೆ 100 ದಿನಗಳವರೆಗೆ ಉದ್ಯೋಗ ಪಡೆಯುವ ಹಕ್ಕಿತ್ತು; ಒಂದು ವೇಳೆ ಕೆಲಸ ನೀಡಲು ಸರ್ಕಾರ ವಿಫಲವಾದರೆ, ಕೆಲಸ ಕೇಳಿದ ವ್ಯಕ್ತಿಗೆ ಪರಿಹಾರ ನೀಡಬೇಕಾಗಿತ್ತು.

ಬೇಡಿಕೆ ಆಧಾರಿತ ಯೋಜನೆಯು ಜನರಿಗೆ ಒಂದು ಹಕ್ಕನ್ನು ನೀಡುತ್ತದೆ; ಆದ್ದರಿಂದ, ಮನರೇಗಾ ಜನರಿಗೆ ಒಂದು 'ಹಕ್ಕನ್ನು' ನೀಡಿತು. ಭಾರತೀಯ ಸಂವಿಧಾನವು ಕೆಲಸದ ಹಕ್ಕು ಸೇರಿದಂತೆ ಆರ್ಥಿಕ ಹಕ್ಕುಗಳನ್ನು 'ಮೂಲಭೂತ ಹಕ್ಕುಗಳ' ಪಟ್ಟಿಯಲ್ಲಿ ಸೇರಿಸಿಲ್ಲ. ಅದು 'ರಾಜ್ಯ ನಿರ್ದೇಶಕ ತತ್ವಗಳ' ಅಡಿಯಲ್ಲಿ ಬರುತ್ತದೆ. ಮನರೇಗಾ ಈ ನ್ಯೂನತೆಯನ್ನು ಸರಿಪಡಿಸಲು ಮತ್ತು ಸಂವಿಧಾನದ ಆಶಯವನ್ನು ಭಾಗಶಃ ಸಾಕಾರಗೊಳಿಸಲು ಪ್ರಯತ್ನಿಸಿತ್ತು.

ಈ ಕಾಯಿದೆಯನ್ನು ಕುರಿತು ಸಾರ್ವಜನಿಕ ವೇದಿಕೆಗಳಲ್ಲಿ ತಿಂಗಳುಗಟ್ಟಲೆ ಚರ್ಚೆ ನಡೆದಿತ್ತು; ಸಂಸದೀಯ ಸಮಿತಿಯು ಅನೇಕ ಜನರ ಸಾಕ್ಷ್ಯಗಳನ್ನು ಸಂಗ್ರಹಿಸಿ ಸುದೀರ್ಘವಾಗಿ ಚರ್ಚಿಸಿತ್ತು. ಅಂತಿಮವಾಗಿ, ಯೋಜನೆಯ ವಿವಿಧ ನಿಬಂಧನೆಗಳ ಬಗ್ಗೆ ಒಮ್ಮತ ಮೂಡಿದ ನಂತರ, ಸಂಸತ್ತಿನಲ್ಲಿ ಇದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಇದು ರಾಷ್ಟ್ರದ ಇಚ್ಛೆಯ ಸಂಕೇತವಾಗಿತ್ತು. ಈ ಹಕ್ಕನ್ನು ರದ್ದುಗೊಳಿಸುವುದು ಸಂವಿಧಾನದ ಆಶಯಕ್ಕೆ ವಿರುದ್ಧ.

ಆದರೆ, ಈಗಿನ ರಾಷ್ಟ್ರೀಯ ಪ್ರಜಾಪ್ರಭುತ್ವ ಒಕ್ಕೂಟ (NDA) ಸರ್ಕಾರವು ಆ ಕೆಲಸ ಮಾಡಿದೆ. ರಾಷ್ಟ್ರದ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡಿದೆ. ಸಂಸತ್ತಿನಲ್ಲಿ ಕೇವಲ ಧ್ವನಿ ಮತದ (Voice vote) ಮೂಲಕ ನಿರ್ಣಯ ಅಂಗೀಕರಿಸಿ ಜನರ ಹಕ್ಕನ್ನು ಕಿತ್ತುಕೊಂಡಿದೆ. ಇಡೀ ರಾಷ್ಟ್ರವು ಜನರಿಗೆ ನೀಡಿದ್ದ ಸಾಂವಿಧಾನಿಕ ಹಕ್ಕನ್ನು ಕೇವಲ ಧ್ವನಿ ಮತದ ಮೂಲಕ ರದ್ದುಗೊಳಿಸಿದೆ. ಇದು ಆಘಾತಕಾರಿ ಸಂಗತಿ. ತಾನು ಮಾಡುತ್ತಿರುವುದು ತಪ್ಪು ಎಂದು ಸರ್ಕಾರಕ್ಕೆ ತಿಳಿದಿದ್ದರಿಂದಲೋ ಏನೋ, ಇದನ್ನು ಅತ್ಯಂತ ರಹಸ್ಯವಾಗಿ ಮಾಡಿದೆ.

ಮನರೇಗಾ ಬದಲಿಗೆ ತರಲಾದ ಹೊಸ ವಿಧೇಯಕವನ್ನು ಡಿಸೆಂಬರ್ 15 ರಂದು ಮಂಡಿಸಿ, 17ರ ರಾತ್ರಿ ಚರ್ಚಿಸಿ, 18ರಂದು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು. ಗ್ರಾಮೀಣಾಭಿವೃದ್ಧಿ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಲಿಖಿತ ವಿನಂತಿ ಮಾಡಿದ್ದರೂ ಅದನ್ನು ಸಮಿತಿಗೆ ಕಳುಹಿಸಲಿಲ್ಲ. ಮತ್ತು ಯಾವುದೇ ತಿದ್ದುಪಡಿಗಳನ್ನು ತರಲು ಅವಕಾಶ ನೀಡಲಿಲ್ಲ. ಇದೊಂದು ಆಶ್ಚರ್ಯಕರವಾದ ಹಾಗೂ ಅತ್ಯಂತ ಅಪ್ರಜಾಪ್ರಭುತ್ವದ ಮಾದರಿಯಾಗಿದೆ: ರಾಷ್ಟ್ರದ ಇಚ್ಛೆ ಮತ್ತು ಸಂವಿಧಾನದ ನಿಬಂಧನೆಗಳ ಪ್ರಕಾರ ನೀಡಲಾದ ಜನರ ಯಾವುದೇ ಹಕ್ಕನ್ನು ಸಂಸತ್ತಿನಲ್ಲಿ ಕೇವಲ ಧ್ವನಿ ಮತದ ಮೂಲಕ ಯಾವುದೇ ಕ್ಷಣದಲ್ಲಿ ಬೇಕಾದರೂ ಕಿತ್ತುಕೊಳ್ಳಬಹುದು ಎಂಬ ಸಂದೇಶವನ್ನು ಇದು ನೀಡುತ್ತದೆ.

ಸರ್ಕಾರವು ತನ್ನ ಮಾಮೂಲಿ ಶೈಲಿಯಲ್ಲಿ ಹೊಸ ವಿಧೇಯಕದ ಕುರಿತು ಗೊಂದಲ ಹರಡಲು ಪ್ರಯತ್ನಿಸುತ್ತಿದೆ. ಮನರೇಗದಲ್ಲಿದ್ದ 100 ದಿನಗಳ

ಬದಲು ಈಗ 125 ದಿನಗಳ ಉದ್ಯೋಗ ನೀಡಲಾಗಿದೆ. ಹಾಗಾಗಿ ಹೊಸ ಮಸೂದೆ ಹಳೆಯದಕ್ಕಿಂತ ಉತ್ತಮ ಎಂದು ಹೇಳಲಾಗುತ್ತಿದೆ. ಆದರೆ ಹೊಸ ಕಾಯಿದೆಯು ಮನರೇಗಾದಲ್ಲಿದ್ದ ಉದ್ಯೋಗದ ಅವಧಿಯನ್ನು 25 ದಿನಗಳಷ್ಟು ಹೆಚ್ಚಿಸುತ್ತಿಲ್ಲ. ಬದಲಾಗಿ ಅದು ಇಡೀ ಮನರೇಗಾವನ್ನೇ ತೆಗೆದುಹಾಕುತ್ತದೆ. ಹಾಗಾಗಿ 'ಬೇಡಿಕೆಯನ್ನು ಆಧರಿಸಿ ಉದ್ಯೋಗ' ನೀಡುವ ಸಂದರ್ಭವೇ ಬರುವುದಿಲ್ಲ.

ಬೇಡಿಕೆ ಆಧಾರಿತ (ಹಕ್ಕು ಆಧಾರಿತ) ಯೋಜನೆಯ ಬದಲಿಗೆ, ಈಗ ಉದ್ಯೋಗ ನೀಡುವುದು ಕೇಂದ್ರ ಸರ್ಕಾರದ ಇಚ್ಛೆಗೆ ಬಿಟ್ಟಿದ್ದು. ಇದು ಹಲವು ರೀತಿಯಲ್ಲಿ ನಡೆಯುತ್ತದೆ.

ಮೊದಲಿಗೆ ಇನ್ನು ಮುಂದೆ ಇಡೀ ಗ್ರಾಮೀಣ ಭಾರತದ ಬದಲಿಗೆ ಕೇಂದ್ರ ಸರ್ಕಾರ ನಿಗದಿಪಡಿಸಿದ ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಉದ್ಯೋಗ ನೀಡಲಾಗುತ್ತದೆ. ಆದ್ದರಿಂದ, ಪ್ರತಿ ಗ್ರಾಮೀಣ ಕುಟುಂಬಕ್ಕೂ 125 ದಿನಗಳಿರಲಿ, 100 ದಿನಗಳ ಕೆಲಸ ಸಿಗುವುದೂ ಖಾತ್ರಿಯಿಲ್ಲ.

ಎರಡನೆಯದಾಗಿ ರಾಜ್ಯಗಳಿಗೆ ನೀಡುವ ಹಣದ ಪ್ರಮಾಣವನ್ನು ಕೇಂದ್ರವೇ ನಿರ್ಧರಿಸುತ್ತದೆ. ಆ ರಾಜ್ಯದಲ್ಲಿ ಉದ್ಯೋಗದ ಬೇಡಿಕೆ ಎಷ್ಟು ಇದೆ ಎಂಬುದಕ್ಕೂ ಇದಕ್ಕೂ ಸಂಬಂಧವಿರುವುದಿಲ್ಲ.

ಮೂರನೆಯದಾಗಿ ಮನರೇಗಾ ಅಡಿಯಲ್ಲಿ ಕೇಂದ್ರವು ಶೇ. 90ರಷ್ಟು ಹಣವನ್ನು ನೀಡುತ್ತಿತ್ತು. ಆದರೆ ಈಗ ಕೇಂದ್ರ ಶೇಕಡ 60ರಷ್ಟು ಹಣವನ್ನು ನೀಡುತ್ತದೆ. ರಾಜ್ಯಗಳು ಶೇ. 40ರಷ್ಟು ಖರ್ಚನ್ನು ಭರಿಸಬೇಕು. ಮೊದಲು ಉದ್ಯೋಗಕ್ಕೆ ಇರುವ ಬೇಡಿಕೆಯನ್ನು ಆಧರಿಸಿ ಅನುದಾನವು ಬಿಡುಗಡೆಯಾಗುತ್ತಿತ್ತು. ಈಗ ಅದನ್ನು ಕೇಂದ್ರ ನಿರ್ಧರಿಸುತ್ತದೆ. ಈಗ ಕೇಂದ್ರದಿಂದ ರಾಜ್ಯಗಳು 60ರೂಪಾಯಿ ಪಡೆಯಬೇಕೆಂದು ಬಯಸಿದರೆ ಅವುಗಳಿಗೆ 40 ರೂಪಾಯಿಯನ್ನು ಹೂಡುವುದಕ್ಕೆ ಸಾಧ್ಯವಾಗಬೇಕು. ಆದರೆ ಈಗ ಬಹುತೇಕ ರಾಜ್ಯಗಳು ಆರ್ಥಿಕ ಸಂಕಷ್ಟದಲ್ಲಿವೆ. ಉದಾಹರಣೆಗೆ ಅವುಗಳಿಗೆ ಕೇವಲ 20 ರೂಪಾಯಿಯಷ್ಟನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಿದ್ದರೆ, ಯೋಜನೆಯ ಗಾತ್ರ 100 ರೂಪಾಯಿ ಬದಲಿಗೆ 50 ರೂಪಾಯಿ ಆಗುತ್ತದೆ. ಅದರಷ್ಟಕ್ಕೆ ಯೋಜನೆಯ ಗಾತ್ರ ಕುಗ್ಗುತ್ತದೆ.

ಇದರಿಂದ ಯೋಜನೆಗಳು ದುರ್ಬಲಗೊಳ್ಳುತ್ತವೆ. ಅಷ್ಟೇ ಅಲ್ಲ ಕೇಂದ್ರಕ್ಕೆ ಉದ್ಯೋಗ ಒದಗಿಸುವುದಕ್ಕೆ ಸಾಧ್ಯವಾಗದೆ ಹೋದರೆ ತಪ್ಪನ್ನು ರಾಜ್ಯಗಳ ಮೇಲೆ ಹೊರಿಸಬಹುದು. ಜನರಿಗೆ ಉದ್ಯೋಗ ಸಿಗದಿದ್ದರೆ, ಅದಕ್ಕೆ ರಾಜ್ಯಗಳೇ ಕಾರಣ ಎಂದು ಕೇಂದ್ರವು ವಾದಿಸಬಹುದು. ಆದ್ದರಿಂದ, ಕೆಲಸದ ದಿನಗಳನ್ನು 125 ಕ್ಕೆ ಏರಿಸಿರುವುದರಲ್ಲಿ ಯಾವ ಅರ್ಥವೂ ಇಲ್ಲ. ಹೊಸ ಯೋಜನೆಯು 'ಪೂರೈಕೆ ಆಧಾರಿತ'ವಾಗಿದೆಯೇ ಹೊರತು 'ಬೇಡಿಕೆ ಆಧಾರಿತ'ವಲ್ಲ. ಇದು ಮನರೇಗಾ ಜನರಿಗೆ ನೀಡಿದ್ದ ಒಂದು ಹಕ್ಕನ್ನು ಕಸಿದುಕೊಂಡಿದೆ.

ಎನ್‌ಡಿಎ ಸರ್ಕಾರ ಈ ಕ್ರಮದಿಂದ ಜನರ ಒಂದು ಹಕ್ಕನ್ನು ಕಸಿದುಕೊಂಡಿರುವುದಷ್ಟೇ ಅಲ್ಲ ಈ ಮೂಲಕ ಒಕ್ಕೂಟ ವ್ಯವಸ್ಥೆಯ ಮೇಲೂ ದಾಳಿ ನಡೆಸಿದೆ. ರಾಜ್ಯಗಳೊಂದಿಗೆ ಸಮಾಲೋಚಿಸದೆ, ರಾಜ್ಯಗಳಿಗಿರುವ ಹಣಕಾಸಿನ ಮಿತಿಯ ಬಗ್ಗೆ ಅರಿವಿದ್ದರೂ ರಾಜ್ಯಗಳ ಪಾಲನ್ನು ಶೇ. 10 ರಿಂದ ಶೇ. 40ಕ್ಕೆ ಏಕಪಕ್ಷೀಯವಾಗಿ ಏರಿಸಲಾಗಿದೆ. ಅಷ್ಟೇ ಅಲ್ಲದೆ, ಹಣ ಎಲ್ಲಿ ಖರ್ಚು ಮಾಡಬೇಕು, ಯಾವ ಯೋಜನೆಗಳಿಗೆ ಖರ್ಚು ಮಾಡಬೇಕು ಎಂಬೆಲ್ಲಾ ನಿರ್ಧಾರಗಳನ್ನು ಕೇಂದ್ರವೇ ತೆಗೆದುಕೊಳ್ಳುತ್ತದೆ. ಯಾವುದಾದರೂ ರಾಜ್ಯ ಸರ್ಕಾರ ಕೇಂದ್ರ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಹಣ ಖರ್ಚು ಮಾಡಬೇಕೆಂದು ಬಯಸಿದರೆ ಕೇಂದ್ರ ನಿರ್ಧರಿಸಿದ ನಿಯಮಗಳಿಗೆ ಅನುಗುಣವಾಗಿ ಖರ್ಚು ಮಾಡಬೇಕು. ಇದು ರಾಜ್ಯ ಸರ್ಕಾರಗಳನ್ನು ಕೇಂದ್ರದ ಅಧೀನದಂತೆ (Vassal) ನಡೆಸಿಕೊಂಡಂತಾಗುತ್ತದೆ. ಇದು ಕೇವಲ ಕೇಂದ್ರ ರಾಜ್ಯಗಳ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯಲ್ಲ. ಅದರ ನಡೆ ಸಂವಿಧಾನದಲ್ಲಿ ನೀಡಿರುವ ಒಕ್ಕೂಟ ತತ್ತ್ವಕ್ಕೇ ವಿರುದ್ಧವಾಗಿದೆ.

ಸ್ಥಳೀಯ ಸಂಸ್ಥೆಗಳ (ಪಂಚಾಯತ್‌ಗಳ) ಪಾತ್ರವನ್ನು ಕುಂಠಿತಗೊಳಿಸಲಾಗಿದೆ. ಈ ಹಿಂದೆ ಸ್ಥಳೀಯವಾಗಿ ಯೋಜಿಸಲಾಗುತ್ತಿದ್ದ ಮನರೇಗಾದ ಉದ್ಯೋಗ ಯೋಜನೆಗಳನ್ನು ಈಗ ಕೇಂದ್ರವೇ ನಿರ್ಧರಿಸುತ್ತದೆ. ಇದು 73ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ ತರಲಾದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಆಶಯದ ಮೇಲಿನ ದಾಳಿಯಾಗಿದೆ.

ಹೊಸ ಮಸೂದೆ– ವಿಬಿ ಜಿ ರಾಮ್ ಜಿ ಕೇವಲ ಗ್ರಾಮೀಣ ಬಡವರ ಮೇಲಿನ ದಾಳಿಯಲ್ಲ, ಇದು ಭಾರತೀಯ ಸಂವಿಧಾನದ ಮೇಲಿನ ಬಹುಮುಖಿ ದಾಳಿಯಾಗಿದೆ. ಬಡವರ ಮೇಲಿನ ದಾಳಿ ಸ್ಪಷ್ಟವಾಗಿ ಕಾಣುತ್ತದೆ. ಮನರೇಗಾ ಲಕ್ಷಾಂತರ ಗ್ರಾಮೀಣ ಕಡುಬಡವರ ಬದುಕಿಗೆ ಆಸರೆಯಾಗಿತ್ತು. ಕೊರೊನ ಸಮಯದಲ್ಲಿ ಇದು ಸ್ಪಷ್ಟವಾಗಿತ್ತು. ಪಿಡುಗಿನ ಸಮಯದಲ್ಲಿ ಲಕ್ಷಾಂತರ ಕಾರ್ಮಿಕರು ತಮ್ಮ ಹಳ್ಳಿಗಳಿಗೆ ಮರಳಿದಾಗ ಅಲ್ಲಿ ಅವರಿಗೆ ಆಸರೆಯಾಗಿ ನಿಂತಿದ್ದು ಇದೇ ಮನರೇಗಾ. ಅದು ಅವರಿಗೆ ಉದ್ಯೋಗ ಕೊಟ್ಟಿತ್ತು. ಈಗ ಆ ಮನರೇಗಾವನ್ನು ನಾಶ ಮಾಡುವ ಮೂಲಕ ಬಡವರ ಜೀವನದ ಮೇಲೆ ದಾಳಿ ಮಾಡಲಾಗಿದೆ. ಇದು ಏಕಕಾಲಕ್ಕೆ ಬಡವರ ಹಕ್ಕಿನ ಮೇಲೆ ಮತ್ತು ಸಂವಿಧಾನದ ಮೇಲಿನ ದಾಳಿಯೂ ಆಗಿದೆ.

ಹಕ್ಕುಗಳನ್ನು ರದ್ದುಗೊಳಿಸುವ ಮೂಲಕ ಸ್ವತಂತ್ರ ದೇಶದ ಹೆಮ್ಮೆಯ ನಾಗರಿಕರಾಗಿದ್ದ ಗ್ರಾಮೀಣ ಬಡವರನ್ನು ಭಿಕ್ಷುಕರನ್ನಾಗಿಸಲಾಗಿದೆ. ಅವರ ಜೀವನ ಪರಿಸ್ಥಿತಿ ಹದಗೆಟ್ಟಾಗ, ಕೇಂದ್ರ ಸರ್ಕಾರವು ಪ್ರಧಾನಿ ನರೇಂದ್ರ ಮೋದಿಯವರ ಭಾವಚಿತ್ರವಿರುವ ಕೆಲವು ಸವಲತ್ತುಗಳನ್ನು ನೀಡಲು ಮುಂದೆ ಬರಬಹುದು. ಇದರಿಂದ ಅವರ ಸ್ಥಿತಿಯಲ್ಲಿ ಯಾವುದೇ ಸುಧಾರಣೆಯಾಗುವುದಿಲ್ಲ, ಆರ್ಥಿಕವಾಗಿ ಅವರ ಸ್ಥಿತಿ ಇನ್ನೂ ಹದಗೆಡುತ್ತದೆ. ಆದರೂ ಸಿಕ್ಕ ಅಲ್ಪ ಸಹಾಯಕ್ಕಾಗಿ ಮೋದಿಯವರಿಗೆ ಚಿರಋಣಿಯಾಗಿರುವಂತೆ ಮಾಡಲಾಗುತ್ತದೆ. ದುಡಿಯುವ ಬಡವರನ್ನು ನಾಗರಿಕ ಸ್ಥಾನಮಾನದಿಂದ ಭಿಕ್ಷುಕರ ಸ್ಥಿತಿಗೆ ಇಳಿಸುವುದು ಫ್ಯಾಸಿಸ್ಟ್ ಶಕ್ತಿಗಳ ಅಂತಿಮ ಗುರಿಯಾಗಿದೆ. ಅದು 'ನಾಯಕ'ನ ಸಂಸ್ಕೃತಿಯನ್ನು ಬೆಳೆಸುತ್ತದೆ. ಸಂವಿಧಾನದ ಮೇಲಿನ ದಾಳಿಯೂ ಈ ಪ್ರಕ್ರಿಯೆಯ ಅವಿಭಾಜ್ಯ ಭಾಗವೇ ಆಗಿದೆ.

ವಸಾಹತುಶಾಹಿ ವಿರೋಧಿ ಹೋರಾಟದಿಂದ ರೂಪುಗೊಂಡ ಭಾರತೀಯ ಸಂವಿಧಾನವು "ಜನರನ್ನು" ಒಳಗೊಂಡ "ರಾಷ್ಟ್ರ"ವನ್ನು ತನ್ನ ಮೂಲಬಿಂದುವಾಗಿ ಪರಿಗಣಿಸಿದೆ. ಸಂವಿಧಾನದ ಕೆಳಗೆ ಸರ್ಕಾರವೂ ಈ 'ದೇಶ'ದ ಸೇವೆ ಮಾಡಬೇಕು. ಆದರೆ ಫ್ಯಾಸಿಸ್ಟ್ ಶಕ್ತಿಗಳು ಈ ಸಂಬಂಧವನ್ನೇ ಉಲ್ಟಾ ಮಾಡುತ್ತವೆ: ಇಲ್ಲಿ "ರಾಷ್ಟ್ರ" ಎಂದರೆ "ನಾಯಕ" ಎಂದರ್ಥ ಮತ್ತು ಜನರು ಆ ನಾಯಕನಿಗೆ ಆಭಾರಿಯಾಗಿರಬೇಕು. ಸಾಧ್ಯವಾದ ಎಲ್ಲಾ ರೀತಿಯಲ್ಲೂ ಅವನಿಗೆ ಸೇವೆ ಸಲ್ಲಿಸಬೇಕು. ಮತ್ತೆ ಮತ್ತೆ ಅವನನ್ನು ಚುನಾಯಿಸುತ್ತಿರಬೇಕು ಎಂದು ನಿರೀಕ್ಷಿಸಲಾಗುತ್ತದೆ.

ಪ್ರಜಾಪ್ರಭುತ್ವದಿಂದ ಫ್ಯಾಸಿಸ್ಟ್ ಸರ್ವಾಧಿಕಾರದತ್ತ ಸಾಗಲು ಜನರ ಹಕ್ಕುಗಳನ್ನು ರದ್ದುಗೊಳಿಸುವುದು, ಜನರನ್ನು ಅವರಿಗೆ ಸಿಗುವ ಒಂದಿಷ್ಟು ಭಿಕ್ಷೆಗಾಗಿ ನಾಯಕರಿಗೆ ಸದಾ ವಿಧೇಯರಾಗಿರುವ ಭಿಕ್ಷುಕರನ್ನಾಗಿಸುವುದು, ಸಂವಿಧಾನವನ್ನು ಹಾಳುಮಾಡುವುದು ಈ ಪ್ರಕ್ರಿಯೆಯ ಒಂದು ಭಾಗವಾಗಿದೆ.

ಇಡೀ ವಿಶ್ವದ ಅತಿದೊಡ್ಡ ಉದ್ಯೋಗ ಯೋಜನೆಯಾಗಿದ್ದ ಮನರೇಗಾವನ್ನು ನಾಶಮಾಡುವುದು ಈ ಸರ್ವಾಧಿಕಾರದತ್ತ ಇಟ್ಟ ದೊಡ್ಡ ಹೆಜ್ಜೆಯಾಗಿದೆ.

ಪ್ರಭಾತ್ ಪಟ್ನಾಯಕ್ (ಜೆಎನ್‌ಯುನ ಆರ್ಥಿಕ ಅಧ್ಯಯನ ಮತ್ತು ಯೋಜನೆ ಕೇಂದ್ರದ ಪ್ರೊಫೆಸರ್ ಎಮೆರಿಟಸ್).

ಹಕ್ಕಿನ ಮನೆಯಿಂದ ಹಂಗಿನರಮನೆ ಕಡೆಗೆ ?

ಟಿ. ಆರ್. ಚಂದ್ರಶೇಖರ.



ನಮ್ಮ ದೇಶದಲ್ಲಿ ೨೦೦೫–೦೬ರಲ್ಲಿ ಆರಂಭವಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿಸೂಚನೆ(ಮನ್‌ರೇಗಾ) ಮೂಲಕ ಗ್ರಾಮೀಣ ಕೂಲಿಕಾರರಿಗೆ ‘ಉದ್ಯೋಗದ ಹಕ್ಕ’ನ್ನು ನೀಡಲಾಗಿತ್ತು. ಆರಂಭದಲ್ಲಿ ಆಯ್ದ ಅತ್ಯಂತ ಹಿಂದುಳಿದ ೨೦೦ ಜಿಲ್ಲೆಗಳಲ್ಲಿ ಜಾರಿಯಾದ ಯೋಜನೆಯು ೨೦೦೮–೦೯ರಲ್ಲಿ ಇದನ್ನು ದೇಶದಾದ್ಯಂತ ಗ್ರಾಮೀಣ ಭಾಗಕ್ಕೆ ಅನ್ವಯಿಸಿ ವಿಸ್ತರಿಸಲಾಯಿತು. ಅದು ಬೇಡಿಕೆ ಪ್ರಣೀತ ಹಕ್ಕಿನ ಪರಿಭಾಷೆಯ ಕಾರ್ಯಕ್ರಮವಾಗಿತ್ತು. ಗ್ರಾಮೀಣ ಕೂಲಿಕಾರರು ಉದ್ಯೋಗವನ್ನು ಕೇಳಿದಾಗ ಸ್ಥಳೀಯ ಸರ್ಕಾರಗಳು ಮನರೇಗಾದಡಿಯಲ್ಲಿ ಉದ್ಯೋಗವನ್ನು ನೀಡಬೇಕಾಗಿತ್ತು. ಇಲ್ಲದಿದ್ದರೆ ನಿರುದ್ಯೋಗ ಭತ್ಯೆಯನ್ನು ನೀಡಬೇಕಾಗಿತ್ತು. ಇದೀಗ ಮನರೇಗಾಕ್ಕೆ ಬದಲಾಗಿ ಕೇಂದ್ರ ಸರ್ಕಾರವು “ವಿಕಸಿತ ಭಾರತ– ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಕ ಮಿಷನ್(ಗ್ರಾಮೀಣ)” ಎಂಬ ಕಾರ್ಯಕ್ರಮವನ್ನು ರೂಪಿಸಿದೆ.

ಹಕ್ಕು ಅಥವಾ ಸೇವೆ!

ಹಕ್ಕುಗಳು ನಮ್ಮ ಭಾರತೀಯ ಪರಂಪರೆಯ ಭಾಗವಲ್ಲ ಎನ್ನುವ ಕೇಂದ್ರ ಸರ್ಕಾರವು ಹಕ್ಕಿನ ಮನ್‌ರೇಗಾವನ್ನು ರದ್ದುಪಡಿಸಿ ಪೂರೈಕೆ ಪ್ರಣೀತ ಸೇವಾ ಪ್ರಧಾನ ‘ವಿಬಿ–ಜಿ ರಾಮ್ ಜಿ’ ಕಾರ್ಯಕ್ರಮವನ್ನು ರೂಪಿಸಿದೆ. ಪ್ರಧಾನ ಮಂತ್ರಿ ಅವರು ೨೦೨೨ರಲ್ಲಿ ‘ಆಜಾದೀ ಕೇ ಅಮೃತ ಮಹೋತ್ಸವ್’ ಎಂಬ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಹಕ್ಕುಗಳ ಬಗ್ಗೆ ಹೋರಾಡುವುದು ‘ಸಮಯದ ಪೋಲು’ ಮತ್ತು ಸ್ವಾತಂತ್ರ್ಯಾನಂತರ ೭೫ ವರ್ಷಗಳ ಕಾಲ ಸೇವೆಯನ್ನು ನಿರ್ಲಕ್ಷಿಸಿ ನಾವು ಹಕ್ಕುಗಳ ಬಗ್ಗೆ ಗಮನ ನೀಡುತ್ತಾ ಬಂದಿದ್ದರಿಂದ ನಮ್ಮ ಸಮಾಜವು ದುರ್ಬಲವಾಗುಳಿದಿದೆ ಎಂದಿದ್ದರು. ನಮ್ಮ ಸಮಾಜದ ಪ್ರಾಚೀನ ತತ್ವಜ್ಞಾನಿಗಳು ಕರ್ತವ್ಯ ಪ್ರಣೀತ ಸಮಾಜವನ್ನು ಕಟ್ಟುವ ತತ್ವವನ್ನು ಪ್ರತಿಪಾದಿಸಿದ್ದರೇ ವಿನಾ ಹಕ್ಕು ಪ್ರಣೀತ ಸಮಾಜವನ್ನು ಕಟ್ಟುವ ಸಿದ್ಧಾಂತವನ್ನು ಅವರು ಪ್ರತಿಪಾದಿಸಿರಲಿಲ್ಲ. ಈ ಟೀಕೆಯು ನೇರವಾಗಿ ಹಕ್ಕುಗಳ ಪ್ರಣಾಳಿಕೆಯಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಪ್ರಣೀತ ಸಂವಿಧಾನವನ್ನು ಗುರಿಯಾಗಿಸಿಕೊಂಡಿದೆ. ಹಕ್ಕುಗಳಿಗಿಂತ ಇಂದಿನ ಕೇಂದ್ರ ಸರ್ಕಾರಕ್ಕೆ ಸೇವೆ/ಕರ್ತವ್ಯದ ಬಗ್ಗೆ ಹೆಚ್ಚಿನ ವಿಶ್ವಾಸವಿದೆ. ಈ ಸಿದ್ಧಾಂತದ ದೂರಗಾಮಿ ಪರಿಣಾಮವು ಅತ್ಯಂತ ಅಪಾಯಕಾರಿಯಾದುದಾಗಿದೆ. ಹಕ್ಕುಗಳಿಗಿಂತ ಸೇವೆ/ಕರ್ತವ್ಯ ಮುಖ್ಯ ಎನ್ನುವ ಚಿಂತನೆಯು ನಮ್ಮ ಪ್ರಾಚೀನ ಸಮಾಜದಲ್ಲಿ ಸೇವೆಯನ್ನು ಒಂದು ವರ್ಗಕ್ಕೆ ವಿಧಿಸಲಾಗಿದ್ದ ವ್ಯವಸ್ಥೆಯ ಪುನರುತ್ಥಾನದ ಕ್ರಿಯಾಯೋಜನೆಯಂತೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಮನ್‌ರೇಗಾ ಸ್ಥಳದಲ್ಲಿ ಕೇಂದ್ರ ಸರ್ಕಾರವು ಜಾರಿಗೊಳಿಸಲು ರೂಪಿಸಿರುವ ಜಿ–ರಾಮ್–ಜಿ ಕಾರ್ಯಯೋಜನೆಯ ಸೈದ್ಧಾಂತಿಕ ಆಯಾಮವನ್ನು ನೋಡಬೇಕಾಗಿದೆ.

ಒಕ್ಕೂಟ ವ್ಯವಸ್ಥೆ ಮೇಲಿನ ದಾಳಿ

ಮನ್‌ರೇಗಾ ಸ್ಥಳದಲ್ಲಿ ಜಾರಿಗೊಳಿಸಲು ರೂಪಿಸಿರುವ ಜಿ ರಾಮ್ ಜಿ ಯೋಜನೆಯು ಮನ್‌ರೇಗಾ ಯೋಜನೆಗೆ ಭಿನ್ನವಾಗಿ ಇದು ಇನ್‌ಫ್ರಾಸ್ಟ್ರಕ್ಚರ್ ನಿರ್ಮಾಣಕ್ಕೆ ಆದ್ಯತೆ ನೀಡುವ ಕಾರ್ಯಯೋಜನೆ ಇದಾಗಿದೆ. ಪ್ರಧಾನಮಂತ್ರಿಗಳ ಮಹತ್ವಾಕಾಂಕ್ಷೆಯ “ಪ್ರಧಾನಮಂತ್ರಿ ಗತಿಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ರಲಾನ್” ಎಂಬ ಬೃಹತ್ ಇನ್‌ಫ್ರಾಸ್ಟ್ರಕ್ಚರ್ ಯೋಜನೆಯ ಭಾಗವಾಗವನ್ನಾಗಿ ಇದನ್ನು ಮಾಡಲಾಗುತ್ತದೆ ಮತ್ತು ‘ವಿಕಸಿತ ಭಾರತ ರಾಷ್ಟ್ರೀಯ ಗ್ರಾಮೀಣ ಇನ್‌ಫ್ರಾಸ್ಟ್ರಕ್ಚರ್ ಕಾರ್ಯಕ್ರಮಗಳ ರಾಶಿ’ಯ ಭಾಗವಾಗಿರುತ್ತದೆ. ಈ ಯೋಜನೆಯ ನಿರ್ವಹಣೆಗೆ ರಾಷ್ಟ್ರೀಯ ನಿರ್ವಹಣಾ ಸಮಿತಿಯನ್ನು ಅಧಿಸೂಚನೆಯ ಸೆಕ್ಷನ್ ೧೪ ರ ಪ್ರಕಾರ ಕೇಂದ್ರ ಸರ್ಕಾರವು ರಚಿಸುತ್ತದೆ. ಇದು ಮನ್‌ರೇಗಾಕ್ಕಿಂತ ಭಿನ್ನವಾಗಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡುತ್ತದೆ. ಹೀಗೆ ಇದು ಮೇಲಿನಿಂದ ಹೇರಲ್ಪಡುವ ಕಾರ್ಯಕ್ರಮವಾಗುತ್ತದೆ ವಿನಾ ಕೆಳಗಿನಿಂದ ರೂಪುಗೊಳ್ಳುವ ಕಾರ್ಯಕ್ರಮವಲ್ಲ. ಮನ್‌ರೇಗಾದಲ್ಲಿದ್ದಂತೆ ಇಲ್ಲಿ ‘ಸ್ಥಳೀಯತೆ’ಗೆ ಹೆಚ್ಚಿನ ಅವಕಾಶವಿಲ್ಲ. ಈ ಕಾರ್ಯಯೋಜನೆಯ ಪ್ರಧಾನ ನಾಲ್ಕು ಆದ್ಯತೆಯ ಉದ್ದೇಶಗಳಲ್ಲಿ ಎರಡು ಇನ್‌ಫ್ರಾಸ್ಟ್ರಕ್ಚ್‌ಗೆ ಸೇರಿವೆ. ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ ರಾಜ್ಯವಾರು ವಾರ್ಷಿಕ ಅನುದಾನವನ್ನು ಕೇಂದ್ರವೇ ತನ್ನ ಬಜೆಟ್ಟಿನಲ್ಲಿ ನಿರ್ಧರಿಸುತ್ತದೆ. ಮನ್‌ರೇಗಾದಲ್ಲಿ ಪ್ರತಿ ಗ್ರಾಮೀಣ ಕುಟುಂಬಕ್ಕೆ ೧೦೦ ದಿನಗಳ ಉದ್ಯೋಗ ನೀಡಲಾಗುತ್ತಿತ್ತು. ಈಗ ಇದನ್ನು ೧೨೫ ದಿನಗಳಿಗೆ ಹೆಚ್ಚಿಸಲಾಗಿದೆ. ಇದೇನೋ ಸ್ವಾಗತಾರ್ಹ.

ಆದರೆ ಕೃಷಿ ಹಂಗಾಮಿನಲ್ಲಿ ೬೦ ದಿನಗಳು ಯೋಜನೆಯನ್ನು ಸ್ಥಗಿತಗೊಳಿಸಲಾಗುತ್ತದೆ. ಇಲ್ಲಿನ ಪ್ರಶ್ನೆ ಎಂದರೆ ಗ್ರಾಮೀಣ ಭೂರಹಿತ ಕೂಲಿಕಾರರಿಗೆ ‘ಕೃಷಿ ಹಂಗಾಮು’ ಎನ್ನುವುದು ಎಲ್ಲಿರುತ್ತದೆ? ಅವರು ವರ್ಷದ ೩೬೫ ದಿನವೂ ಕೂಲಿಗೆ ದುಡಿಯಬೇಕಾಗಿರುತ್ತದೆ. ಮನ್‌ರೇಗಾ ಕಾರ್ಯಕ್ರಮದಲ್ಲಿ ವೆಚ್ಚವನ್ನು ಪೂರ್ಣವಾಗಿ ಕೇಂದ್ರ



ಭರಿಸುತ್ತಿತ್ತು. ಈಗ ಜಿ-ರಾಮ್-ಜಿ ಕಾರ್ಯಕ್ರಮದ ವೆಚ್ಚದಲ್ಲಿ ಕೇಂದ್ರದ ಪಾಲು ಶೇ. ೬೦ ಕ್ಕಿಳಿದರೆ ರಾಜ್ಯದ ಹೊರೆ ಶೇ. ೪೦ ರಷ್ಟು ಹೆಚ್ಚಾಗುತ್ತದೆ. ಜಿ-ರಾಮ್-ಜಿ ಕಾರ್ಯಕ್ರಮವು 'ಬಜೆಟ್-ಕ್ಯಾಪ್' ಕಾರ್ಯಕ್ರಮವಾಗಿರುವುದರಿಂದ ಉದ್ಯೋಗಕ್ಕೆ ಹೆಚ್ಚಿನ ಬೇಡಿಕೆ ಬಂದರೆ ಅದರ ವೆಚ್ಚವನ್ನು ರಾಜ್ಯಗಳೇ ಭರಿಸಬೇಕು. ಹೀಗೆ ಬದಲಾದ ಉದ್ಯೋಗ ಖಾತ್ರಿ ಯೋಜನೆಯು ನಿರ್ವಹಣೆಯ ಸೂತ್ರ ಕೇಂದ್ರ ಸರ್ಕಾರಕ್ಕಿದ್ದರೆ ಅದರ ಬಾಬ್ತು ಹೆಚ್ಚಿನ ವೆಚ್ಚದ ಭಾರವನ್ನು ರಾಜ್ಯಗಳು ಹೊರಬೇಕಾಗುತ್ತದೆ. ಮನ್‌ರೇಗಾದಂತೆ ಇದು 'ಬಜೆಟ್-ಮುಕ್ತ' ಕಾರ್ಯಯೋಜನೆಯಲ್ಲ. ಹೀಗೆ ಯೋಜನೆಯು ಅಡಳಿತಾತ್ಮಕವಾಗಿ ಕೇಂದ್ರೀಕೃತವಾದರೆ ವೆಚ್ಚದ ಹೊರೆ ರಾಜ್ಯಗಳ ಮೇಲಿರುತ್ತದೆ. ಹೀಗೆ ರಾಜ್ಯಗಳು ಹಕ್ಕುಗಳಿಲ್ಲದೆ ಕೇವಲ ಕೇಂದ್ರದ ಸೇವೆಯನ್ನು ಮಾಡುವ ಘಟಕಗಳಾಗಿ ಬಿಡುತ್ತವೆ.

ಹಕ್ಕಿನಿಂದ ಹಂಗಿನ ಕಡೆಗೆ

ಮನೆರೇಗಾಕ್ಕೆ ಬದಲಾಗಿ ರೂಪಿಸಿರುವ ಜಿ-ರಾಮ್-ಜಿ ಕಾರ್ಯಯೋಜನೆಯು ಸಂಪೂರ್ಣವಾಗಿ ಕೇಂದ್ರ ನಿಯಂತ್ರಿತ ಕಾರ್ಯಕ್ರಮವಾಗಿದೆ. ಇದನ್ನು ಅತಿಯಾದ ತಂತ್ರಜ್ಞಾನ ಅವಲಂಬಿತ ಯೋಜನೆಯನ್ನಾಗಿ ಮಾಡಲಾಗಿದೆ, ಆಧಾರ್ ಮತ್ತು ಜಾಬ್ ಕಾರ್ಡ್‌ಗಳ ನಡುವಿನ ವ್ಯತ್ಯಯಗಳು ಅನೇಕ ಸಂದರ್ಭದಲ್ಲಿ ದುಡಿಮೆಗಾರರನ್ನು ಹೊರದೂಡುವ ಸ್ಥಿತಿಗೆ ಅವಕಾಶ ಉಂಟಾಗುತ್ತದೆ. ಇದು ಕೇಂದ್ರ ಸರ್ಕಾರದ 'ಡಿಜಿಟಲೈಸೇಷನ್ ವ್ಯಸನ'ದ ಕಾರ್ಯಯೋಜನೆಯಾಗಲಿದೆ ಯಾವುದನ್ನು ಗ್ರಾಮೀಣ ಭಾರತಕ್ಕೆ ಸಂಬಂಧಿಸಿದಂತೆ 'ಡಿಜಿಟಲ್ ಡಿವೈಡ್' ಎನ್ನುತ್ತೇವೆಯೋ ಅದನ್ನು ಇದು ಉಲ್ಬಣಗೊಳಿಸುತ್ತದೆ. ಈಗಾಗಲೆ ಇಂತಹ ಪ್ರಕ್ರಿಯೆ ಆರಂಭವಾಗಿದೆ. ಒಂದು ರೀತಿಯಲ್ಲಿ ಇದು ದುಡಿಮೆಗಾರರನ್ನು ಹಂಗಿನ ನೆಲೆಗೆ ದೂಡುವ ಕಾರ್ಯಕ್ರಮವಾಗಿದೆ, ಏಕೆಂದರೆ ಗ್ರಾಮೀಣ ದುಡಿಮೆಗಾರರು ಉದ್ಯೋಗದ ಬೇಡಿಕೆಯನ್ನಿಟ್ಟು ಅದನ್ನು ಪಡೆದುಕೊಳ್ಳುವ ಕಾರ್ಯಕ್ರಮ ಇದಲ್ಲ. ಸರ್ಕಾರವು ಕೃಪೆ ಮಾಡಿದ ಉದ್ಯೋಗವನ್ನು ಸ್ವೀಕರಿಸಬೇಕಾದ ಒಂದು ಸ್ಥಿತಿಯನ್ನು ಇದು ಒಳಗೊಂಡಿದೆ. ಇದರ ಅನದಾನವು ಬಜೆಟ್-ಮಿತಿಗೆ ಒಳಪಟ್ಟಿದೆ.

ಮನೆರೇಗಾಕ್ಕೆ ಕೇಂದ್ರದ ವಿರೋಧದ ಕಥೆ

ಆರಂಭದಿಂದಲೂ ಪ್ರಧಾನಿ ನರೇಂದ್ರ ಮೋದಿಯವರು ಮನೆರೇಗಾವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಇದನ್ನು ಯುಪಿಎ ಸರ್ಕಾರದ 'ವೈಫಲ್ಯದ ಜೀವಂತ ಸ್ಮಾರಕ' ಎಂದು ೨೦೧೫ರಲ್ಲಿ ಸಂಸತ್ತಿನಲ್ಲಿ ಅವರು ಟೀಕಿಸಿದ್ದರು. ಈ ಕಾರ್ಯಕ್ರಮಕ್ಕೆ ೨೦೧೪-೧೫ರ ನಂತರ ಕೇಂದ್ರ ಸರ್ಕಾರವು ಅನುದಾನವನ್ನು ವರ್ಷದಿಂದ ವರ್ಷಕ್ಕೆ ಕಡಿತ ಮಾಡುತ್ತಲೇ ಬಂದಿದೆ. ಕೇಂದ್ರ ಸರ್ಕಾರವು ೨೦೧೫-೧೬ರಲ್ಲಿ ಮನ್‌ರೇಗಾಕ್ಕೆ ನೀಡಿದ್ದ ಬಜೆಟ್ ಅನುದಾನವು (ರೂ.೩೪೬೯೯ ಕೋಟಿ) ಆ ಸಾಲಿನ ಒಟ್ಟು ಬಜೆಟ್ ವೆಚ್ಚದ (ರೂ.೧೭.೭೭ ಲಕ್ಷ ಕೋಟಿ) ಶೇ. ೧.೯೬ರಷ್ಟಿತ್ತು. ಕಳೆದ ೨೦೨೪-೨೫ನೆಯ ಸಾಲಿನಲ್ಲಿ ಮನ್‌ರೇಗಾದ ಅನುದಾನವು (ರೂ.೮೬೦೦೦ ಕೋಟಿ) ಒಟ್ಟು ಬಜೆಟ್ ವೆಚ್ಚದ(ರೂ೪೮.೨೧ ಲಕ್ಷ ಕೋಟಿ) ಶೇ.೧.೭೮ರಷ್ಟಾಗಿತ್ತು. ಬಜೆಟ್ ಅನುದಾನವು ಒಟ್ಟು ಮೊತ್ತದಲ್ಲಿ ಏರಿಕೆಯಾಗುತ್ತಿದೆ. ಆದರೆ ಸಾಪೇಕ್ಷವಾಗಿ ಅನುದಾನವು ಕಡಿಮೆಯಾಗುತ್ತಾ ನಡೆದಿದೆ. ಈ ಯೋಜನೆಯ ಹೆಸರಿನಲ್ಲಿದ್ದ ಮಹಾತ್ಮ ಗಾಂಧೀಜಿ ಬಗ್ಗೆ ಪ್ರಸ್ತುತ ಸರ್ಕಾರಕ್ಕೆ ಭಿನ್ನಮತವಿದೆ. ಏಕೆಂದರೆ ಗಾಂಧೀಜಿಯ ರಾಮರಾಜ್ಯಕ್ಕೂ(ಹೇ ರಾಮ್) ಮತ್ತು ಇಂದಿನ ಸರ್ಕಾರದ ರಾಮರಾಜ್ಯಕ್ಕೂ(ಜೈ ಶ್ರೀರಾಮ್) ಬಹಳ ವ್ಯತ್ಯಾಸವಿದೆ. ಗ್ರಾಮೀಣ ಬಡ ಕೂಲಿಕಾರರಿಗೆ ಒಂದು ಮುಕ್ತವಾದ ಬೇಡಿಕೆ ಆಧಾರದ ಹಕ್ಕು ಪರಿಭಾಷೆಯ ಮನ್‌ರೇಗಾ ಕಾರ್ಯಯೋಜನೆಯನ್ನು ಕೊಲ್ಲಲಾಗಿದೆ. ಕೇಂದ್ರದ ಕೃಪಾಶೀರ್ವಾದದ ಬಜೆಟ್-ಮಿತಿಯ ಸೇವಾ ಪ್ರಧಾನ ಕಾರ್ಯಕ್ರಮ ಇದಾಗಲಿದೆ. ಒಕ್ಕೂಟ ವ್ಯವಸ್ಥೆಯ ಕತ್ತು ಹಿಸುಕಲಾಗಿದೆ. ಸರಳವಾದ ಗ್ರಾಮೀಣ ಜನಮುಖಿಯಾಗಿದ್ದ ಹಕ್ಕು ಪ್ರಣೀತ ಕಾರ್ಯಕ್ರಮವೊಂದನ್ನು ಪ್ರೌಢ ತಂತ್ರಜ್ಞಾನದ ಬಲೆಯನ್ನು ಸೃಷ್ಟಿಸಿ ಅದನ್ನು ಕೂಲಿಕಾರರಿಗೆ ಕೈಗೆ ಎಟುಕದಂತೆ ಹಂಗಿನ ಕಾರ್ಯಕ್ರಮವನ್ನಾಗಿ ಮಾಡಲಾಗಿದೆ.

ನಂ. ೯-೯/೧. ೨ ನೆಯ ಮುಖ್ಯ ರಸ್ತೆ. ೪ ನೆಯ ಅಡ್ಡ ರಸ್ತೆ.
ಬೇಗೂರು ಮುಖ್ಯ ರಸ್ತೆ. ಹೊಂಗಸಂದ್ರ ೫೬೦ ೦೬೮. ಬೆಂಗಳೂರು



ಮನರೇಗಾ ಈಗ ರಿಮೋಟ್ ಕಂಟ್ರೋಲ್ ನಿಯಂತ್ರಿತ ಪ್ಯಾರಾಚ್ಯೂಟ್

ಗ್ರಾಮೀಣ ಉದ್ಯೋಗ ಖಾತರಿಯ ಕಲ್ಪನೆಯು ಭಾರತದ ಸಂವಿಧಾನದ ಆಶಯವಾಗಿತ್ತು. ಉದ್ಯೋಗ ಖಾತ್ರಿ ಯೋಜನೆ ಭಾರತದ ಕಾರ್ಮಿಕ ಚಳುವಳಿಯ ಬಹಳ ಕಾಲದ ಬೇಡಿಕೆ. ಲಾಗಾಯ್ತಿನಿಂದ ಉದ್ಯೋಗದ ಹಕ್ಕಿಗಾಗಿ ಲಕ್ಷಾಂತರ ಮಹಿಳೆಯರು, ದಲಿತರು, ಆದಿವಾಸಿಗಳು, ಭೂಹೀನ ಕಾರ್ಮಿಕರು ಹೋರಾಟ ನಡೆಸುತ್ತಲೇ ಇದ್ದರು. "ಪ್ರತಿ ಕೈಗೆ ಕೆಲಸ, ಕೆಲಸಕ್ಕೆ ಸರಿಯಾದ ವೇತನ" ಅನ್ನುವುದು ಜನಾಂದೋಲನದ ಮುಖ್ಯ ಘೋಷಣೆಯಾಗಿತ್ತು. ಈ ಹೋರಾಟಗಳು ಕೆಲಸ, ಕೂಲಿ ಹಾಗೂ ಘನತೆಯನ್ನು ಬಯಸುತ್ತಿದ್ದ ಜನರ ಧ್ವನಿಯಾಗಿತ್ತು.

ಮಹಾರಾಷ್ಟ್ರ 1970ರಲ್ಲೇ ಇಂತಹ ಒಂದು ಉದ್ಯೋಗ ಖಾತರಿ ಯೋಜನೆಯನ್ನು ಹಮ್ಮಿಕೊಂಡು ರಾಷ್ಟ್ರಕ್ಕೆ ಒಂದು ದಾರಿಯನ್ನು ತೋರಿಸಿತ್ತು. ಬರಗಾಲದ ಸಮಯದಲ್ಲಿ ಜನರ ಸಂಕಷ್ಟಕ್ಕೆ ಪರಿಹಾರವಾಗಿ 'ಮಹಾರಾಷ್ಟ್ರ ಉದ್ಯೋಗ ಖಾತರಿ ಯೋಜನೆ'ಯನ್ನು ಜಾರಿಗೆ ತಂದಿತ್ತು. ಇದು ಸಂವಿಧಾನದ ಆಶಯಕ್ಕೆ, ಜನರ ಹೋರಾಟಕ್ಕೆ ಒಂದು ಭರವಸೆಯನ್ನು ಮೂಡಿಸಿತ್ತು. ಅಕುಶಲ ಕೆಲಸ ಮಾಡಲು ಬಯಸುವ ಎಲ್ಲರಿಗೂ ಕನಿಷ್ಠ ವೇತನದ ಉದ್ಯೋಗದ ಖಾತರಿ ನೀಡುವುದು ಇದರ ಉದ್ದೇಶವಾಗಿತ್ತು. ಬಡತನ ನಿವಾರಣೆಗೆ ಇದನ್ನು ಪರಿಣಾಮಕಾರಿ ವ್ಯವಸ್ಥೆಯನ್ನಾಗಿ ಯೋಜಿಸಲಾಗಿತ್ತು.

2001ರಲ್ಲಿ ರಾಜಸ್ಥಾನದಲ್ಲಿ ಕ್ಷಾಮ ತೀವ್ರವಾಗಿದ್ದಾಗ ಮತ್ತೆ ಈ ಬಗ್ಗೆ ಚರ್ಚೆ ಕಾವು ಪಡೆದುಕೊಂಡಿತು. ಉದ್ಯೋಗದ ಖಾತ್ರಿಗಾಗಿ ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ, ಆಹಾರದ ಹಕ್ಕಿಗಾಗಿ ಆಂದೋಲನ ಇತ್ಯಾದಿ ಸಂಘಟನೆಗಳೂ ಇದಕ್ಕಾಗಿ ಒತ್ತಾಯಿಸುತ್ತಿದ್ದವು. ಕಾಂಗ್ರೆಸ್ 2004ರ ಲೋಕಸಭೆ ಚುನಾವಣೆಯಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿಯನ್ನು ತಮ್ಮ ಪ್ರಣಾಳಿಕೆಯಲ್ಲಿ ಸೇರಿಸಿತ್ತು. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಿತು. ಎಡಪಕ್ಷಗಳು ಹೊರಗಿನಿಂದ ಬೆಂಬಲ ನೀಡಿದ್ದವು. ಕಾಂಗ್ರೆಸ್ ಅಧ್ಯಕ್ಷರಾದ ಸೋನಿಯಾ ಗಾಂಧಿಯವರು ಉದ್ಯೋಗ ಖಾತರಿ ಯೋಜನೆಯ ಪರವಾಗಿದ್ದರು. ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಉದ್ಯೋಗ ಖಾತರಿ ಕಾಯ್ದೆಗೆ ಆದ್ಯತೆ ನೀಡಬೇಕೆಂಬುದು ಎಡಪಕ್ಷಗಳೂ ತೀವ್ರವಾಗಿ ಒತ್ತಾಯಿಸಿದ್ದವು.

ಯುಪಿಎ ಸರ್ಕಾರ 2004ರಲ್ಲಿ ರಾಷ್ಟ್ರೀಯ ಸಲಹಾ ಸಮಿತಿಯನ್ನು ರಚಿಸಿತ್ತು. ಕೆಲವು ಬುದ್ಧಿಜೀವಿಗಳು, ನಿವೃತ್ತ ಅಧಿಕಾರಿಗಳು ಅದರ ಸದಸ್ಯರಾಗಿದ್ದರು. ಆಗ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೋನಿಯಾ ಗಾಂಧಿ ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿಯ ಮೊದಲ ಸಭೆ ನಡೆದದ್ದು ಆಗಸ್ಟ್ 19, 2004ರಲ್ಲಿ. ಅರ್ಥಶಾಸ್ತ್ರಜ್ಞ ಜೀನ್ ಡ್ರೀಜ್ ಗ್ರಾಮೀಣ ಬಡವರಿಗೆ ಉದ್ಯೋಗ ಖಾತ್ರಿ ಯೋಜನೆ ಕುರಿತಂತೆ ವಿವರವಾದ ಯೋಜನೆಯನ್ನು ತಯಾರಿಸಿದ್ದರು.

ವ್ಯಾಪಕ ಚರ್ಚೆಯ ನಂತರ ಕರಡು ಯೋಜನೆ ಸಿದ್ಧವಾಯಿತು. ಅದನ್ನು ಅನುಮೋದನೆಗಾಗಿ ಪಾರ್ಲಿಮೆಂಟಿನ ಸ್ಥಾಯಿ ಸಮಿತಿಗೆ ಕಳುಹಿಸಬೇಕಿತ್ತು. ಹಾಗೆ ಕಳುಹಿಸುವಾಗ ಸರ್ಕಾರ ಯೋಜನೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿತ್ತು. ಮೂಲ ಯೋಜನೆಯಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ದೇಶಾದ್ಯಂತ ಮೂರು ವರ್ಷಗಳಲ್ಲಿ ಜಾರಿಗೆ ತರಬೇಕೆನ್ನುವ ಸಲಹೆ ಇತ್ತು. ಪರಿಷ್ಕರಿಸುವಾಗ ಅದನ್ನು ತೆಗೆಯಲಾಗಿತ್ತು. ಸರ್ಕಾರ ಯೋಜನೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಮೂಲ ಯೋಜನೆಯಲ್ಲಿ ಸೂಚಿಸಲಾಗಿತ್ತು. ತಿದ್ದುಪಡಿಯಲ್ಲಿ ಸರ್ಕಾರಕ್ಕೆ ಕಾಯ್ದೆಯಿಂದ ಹೊರಗುಳಿಯುವ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಹಾಗೆಯೇ ಸಾರ್ವತ್ರಿಕವಾಗಿ ಅದನ್ನು ಜಾರಿಗೊಳಿಸಬೇಕೆಂಬುದು ಮೂಲ ಸಲಹೆಯಾಗಿತ್ತು. ಕೇವಲ ದಾರಿದ್ರ್ಯ ರೇಖೆಯಿಂದ ಕೆಳಗೆ ಇರುವವರಿಗೆ ಅನ್ವಯಿಸುವಂತೆ ಮಸೂದೆಯಲ್ಲಿ ತಿದ್ದುಪಡಿ ಮಾಡಲಾಗಿತ್ತು. ಇದರಿಂದ ಉದ್ಯೋಗ ಖಾತರಿ ಯೋಜನೆಯ ಮೂಲ ಉದ್ದೇಶಕ್ಕೆ ಧಕ್ಕೆಯಾಗುತ್ತಿತ್ತು. ಯೋಜನೆಯಿಂದ ಹೊರಗುಳಿಯುವ ಸ್ವಾತಂತ್ರವನ್ನು ಸರ್ಕಾರಕ್ಕೆ ನೀಡಿದರೆ ಉದ್ಯೋಗ ಖಾತರಿಯಾಗಿ ಉಳಿಯುವುದಿಲ್ಲ. ದೇಶಾದ್ಯಂತ ಇದನ್ನು ಜಾರಿಗೊಳಿಸುವುದು ಕಡ್ಡಾಯವಾಗಬೇಕು. ಹಾಗೆಯೇ ಕೆಲವು ಆರ್ಥಿಕ ಅಥವಾ ಸಾಮಾಜಿಕ ಸಮುದಾಯಗಳಿಗೆ





ಇದನ್ನು ಸೀಮಿತಗೊಳಿಸದೆ ಕೆಲಸ ಮಾಡಲು ಇಚ್ಛಿಸುವವರಿಗೆಲ್ಲಾ ಇದರಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವಿರಬೇಕು. ಎಂದು ಹಲವು ಸಂಘಟನೆಗಳು ಒತ್ತಾಯಿಸತೊಡಗಿದವು. ಬದಲಾವಣೆಗಳನ್ನು ಕೈಬಿಟ್ಟು ಮೂಲ ರೂಪದಲ್ಲೇ ಯೋಜನೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದವು. ಇದಕ್ಕಾಗಿ ದೇಶಾದ್ಯಂತ ಎಲ್ಲೆಡೆ ಆಂದೋಲನ ನಡೆಯಿತು. ಪಾರ್ಲಿಮೆಂಟ್ ರಸ್ತೆಯಲ್ಲೂ ಲಕ್ಷಾಂತರ ಜನ ಮೆರವಣಿಗೆ ನಡೆಸಿದ್ದರು. ಅಂತಿಮವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ(ನರೇಗಾ) 2005ರಲ್ಲಿ ಮೂಲರೂಪದಲ್ಲೇ ಜಾರಿಗೆ ಬಂದಿತು 2009 ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಎಂದು ಮರುನಾಮಕರಣಗೊಂಡಿತು.

ಜೀನ್ ಡ್ರೀಜ್ ಹೇಳುವಂತೆ "2005ರಲ್ಲಿ ಜಾರಿಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಒಂದು ದಶಕಕ್ಕೂ ಹೆಚ್ಚಿನ ಹೋರಾಟದ ಫಲ. ಪ್ರತಿ ಕುಟುಂಬಕ್ಕೆ ಕನಿಷ್ಟ ನೂರು ದಿನಗಳ ಕೆಲಸ ಕೊಡುವುದರ ಜೊತೆಗೆ ರಸ್ತೆ, ನೀರುಪೂರೈಕೆ ಇತ್ಯಾದಿ ಸಾರ್ವಜನಿಕ ಸ್ವತ್ತಿನ ನಿರ್ಮಾಣ ಅದರ ಉದ್ದೇಶವಾಗಿತ್ತು. ಆರ್ಥಿಕ ಘನತೆ ಅನ್ನುವುದು ಜನರ ಮೂಲಭೂತ ಹಕ್ಕು ಎಂದು ಮನರೇಗಾ ಒಪ್ಪಿಕೊಂಡಿತ್ತು. ಹಾಗೆಯೇ ಜನತೆಗೆ ಗೌರವದ ಬದುಕನ್ನು ಕಲ್ಪಿಸುವುದು ಸರ್ಕಾರದ ಜವಾಬ್ದಾರಿ ಎನ್ನುವುದನ್ನು ಅದು ಮಾನ್ಯಮಾಡಿತ್ತು. ಮನರೇಗಾದಿಂದ ಗ್ರಾಮೀಣ ಕೆಲಸಗಾರರಿಗೆ ಚೌಕಾಸಿ ಮಾಡುವ ಶಕ್ತಿ ಸ್ವಲ್ಪಮಟ್ಟಿಗಾದರೂ ಸಾಧ್ಯವಾಯಿತು. "(ಜೀನ್ ಡ್ರೀಜ್ ಇತ್ತಿಚೆಗೆ ಕಾರವಾನ್ ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ)

ಮನರೇಗಾ ಹೇಗೆ ಭಿನ್ನ?

ಆರ್ಥಿಕ ಹಕ್ಕುಗಳು ಭಾರತೀಯ ಸಂವಿಧಾನದ 'ಮೂಲಭೂತ ಹಕ್ಕುಗಳ' ಪಟ್ಟಿಯಲ್ಲಿ ಸೇರಿಲ್ಲ. ಅದು 'ರಾಜ್ಯ ನಿರ್ದೇಶಕ ತತ್ವಗಳ' ಅಡಿಯಲ್ಲಿ ಬರುತ್ತದೆ. ಪ್ರಭಾತ್ ಪಟ್ನಾಯಕ್ ಹೇಳುವಂತೆ "ಮನರೇಗಾ ಉದ್ಯೋಗದ ಹಕ್ಕನ್ನು ಮಾನ್ಯಮಾಡುವ ಮೂಲಕ ಈ ನ್ಯೂನತೆಯನ್ನು ಸರಿಪಡಿಸಲು ಮತ್ತು ಸಂವಿಧಾನದ ಆಶಯವನ್ನು ಭಾಗಶಃ ಸಾಕಾರಗೊಳಿಸಲು ಪ್ರಯತ್ನಿಸಿತ್ತು." ಮನರೇಗಾದಲ್ಲಿ ಉದ್ಯೋಗ ಒಂದು ಹಕ್ಕಾಗಿತ್ತು. ಎಲ್ಲಾ ಗ್ರಾಮೀಣ ಕುಟಂಬಗಳು ವರ್ಷಕ್ಕೆ 100 ದಿನಗಳ ಅಕುಶಲ ದೈಹಿಕ ಶ್ರಮದ ಉದ್ಯೋಗಕ್ಕಾಗಿ ಒತ್ತಾಯಿಸಬಹುದಿತ್ತು. ಇದೊಂದು ಬೇಡಿಕೆ ಆಧಾರಿತ ಯೋಜನೆಯಾಗಿತ್ತು. ಕೆಲಸಕ್ಕೆ ಬೇಡಿಕೆ ಸಲ್ಲಿಸಿದವರಿಗೆ ಉದ್ಯೋಗ ಕೊಡಬೇಕಿತ್ತು. ಕೆಲಸಕ್ಕೆ ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಉದ್ಯೋಗ ಒದಗಿಸದಿದ್ದರೆ, ಅರ್ಜಿದಾರರಿಗೆ ಸರ್ಕಾರ ನಿರುದ್ಯೋಗ ಭತ್ಯೆ ನೀಡಬೇಕಿತ್ತು. ಇದು ಉದ್ಯೋಗ ಬಯಸುವ ಎಲ್ಲಿರಗೂ ಅನ್ವಯವಾಗುತ್ತಿತ್ತು. ಯಾವುದೇ ಸಾಮಾಜಿಕ ಹಾಗೂ ಆರ್ಥಿಕ ಸಮುದಾಯಕ್ಕೆ ಇದು ಸೀಮಿತವಾಗಿರಲಿಲ್ಲ. ಒಂದು ಅಂದಾಜಿನ ಪ್ರಕಾರ ಈ ಯೋಜನೆಯನ್ನು 12.61 ಕೋಟಿ ಜನ ನೆಚ್ಚಿಕೊಂಡಿದ್ದರು.

ಮನರೇಗಾದಲ್ಲಿ ದುಡಿಯುತ್ತಿರುವವರಲ್ಲಿ ಶೇಕಡ 58ರಷ್ಟು ಮಹಿಳೆಯರು. ಮನರೇಗಾ ಯೋಜನೆ ಇಲ್ಲದಿದ್ದರೆ ಇದರಲ್ಲಿ ಅರ್ಧದಷ್ಟು ಮಹಿಳೆಯರು ದುಡಿಯುವುದಕ್ಕೆ ಬರುತ್ತಲೇ ಇರಲಿಲ್ಲ. ಮಹಿಳೆಯರು ಮನರೇಗಾ ಕೆಲಸಕ್ಕೆ ಬರುವುದಕ್ಕೆ ಜೀನ್ ಡ್ರೀಜ್ ಹಲವು ಕಾರಣಗಳನ್ನು ಗುರುತಿಸುತ್ತಾರೆ. ಮಹಿಳೆಯರಿಗೆ ಸ್ವಂತದ ವರಮಾನವನ್ನು ಸಂಪಾದಿಸುವುದಕ್ಕೆ ಮನರೇಗಾ ಒಂದು ಅಪರೂಪದ ಅವಕಾಶವಾಗಿತ್ತು. ಮನೆಯ ಸಮೀಪದಲ್ಲೇ ಕೆಲಸ ಸಿಗುತ್ತಿದ್ದರಿಂದ ಅವರಿಗೆ ಹೆಚ್ಚು ಅನುಕೂಲವಾಗಿತ್ತು. ಕೆಲಸದ ವಾತಾವರಣ ಹೆಚ್ಚು ಸುರಕ್ಷಿತವಾಗಿತ್ತು. ಪುರುಷರಷ್ಟೆ ವೇತನ ಇವರಿಗೂ ಸಿಗುತ್ತಿತ್ತು. ಜೊತೆಗೆ ಸರ್ಕಾರಿ ಕೆಲಸ ಹೆಚ್ಚು ಗೌರವದ ಕೆಲಸ ಅನ್ನುವ ಭಾವನೆಯೂ ಅವರನ್ನು ಕೆಲಸಕ್ಕೆ ಬರುವುದಕ್ಕೆ ಉತ್ತೇಜಿಸಿರಬಹುದು. "ಉದ್ಯೋಗ ನೀಡುವಾಗ ಮಹಿಳೆಯರಿಗೆ ಆದ್ಯತೆ ಕೊಡಬೇಕು, ಕನಿಷ್ಠ ಮೂರನೇ ಒಂದರಷ್ಟು ಮಹಿಳೆಯರಿಗೆ ಕೆಲಸ ಲಭಿಸುವಂತೆ ನೋಡಿಕೊಳ್ಳಬೇಕು" ಎಂದು ಕಾಯ್ದೆಯಲ್ಲೂ ಸೂಚಿಸಲಾಗಿದೆ. ಮಹಿಳೆಯರನ್ನು ಪ್ರೋತ್ಸಾಹಿಸುವುದಕ್ಕೆ ಯಾವುದೇ ವಿಶೇಷ ಪ್ರತ್ಯೇಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾದ ಅವಶ್ಯಕತೆ ಸರ್ಕಾರಕ್ಕೆ ಬರಲಿಲ್ಲ. ಮಹಿಳೆಯರು ಅವರಷ್ಟಕ್ಕೆ ಕೆಲಸಕ್ಕೆ ಬಂದರು. ಹಾಗೆಯೇ ಮನರೇಗಾ ಯೋಜನೆಯಲ್ಲಿ ಉದ್ಯೋಗ ಪಡೆದುಕೊಂಡವರಲ್ಲಿ ಪರಿಶಿಷ್ಟ ಜಾತಿ ಹಾಗು ಬುಡಕಟ್ಟಿಗೆ ಸೇರಿದವರು ಶೇಕಡ 38ರಷ್ಟು ಜನ ಇದ್ದರು.

ಎರಡನೆಯದಾಗಿ ಇದೊಂದು ವಿಕೇಂದ್ರೀಕೃತ ಯೋಜನೆಯಾಗಿತ್ತು. ಕಾಮಗಾರಿಗಳನ್ನು ಗುರುತಿಸುವುದು ಮತ್ತು ಲೆಕ್ಕಪರಿಶೋಧನೆ ಮಾಡುವುದು ಗ್ರಾಮಸಭೆಗಳ ಜವಾಬ್ದಾರಿಯಾಗಿತ್ತು.

ಮೂರನೆಯದಾಗಿ ರಾಜ್ಯಗಳಿಗೆ ಹೊರೆಯಾಗದಂತೆ ನೋಡಿಕೊಳ್ಳಲು, ಕೇಂದ್ರ ಸರ್ಕಾರವು ವೇತನದ 100% ಖರ್ಚನ್ನು ಮತ್ತು ಸಾಮಗ್ರಿ ವೆಚ್ಚದ 75% ಭರಿಸುತ್ತಿತ್ತು. ರಾಜ್ಯ ಸರ್ಕಾರಗಳು ಸಾಮಗ್ರಿ ವೆಚ್ಚದ 25% ಮತ್ತು ನಿರುದ್ಯೋಗ ಭತ್ಯೆಯ ಸಂಪೂರ್ಣ ವೆಚ್ಚವನ್ನು ಭರಿಸಬೇಕಿತ್ತು. ನಿರುದ್ಯೋಗ ಭತ್ಯೆಯ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳ ಮೇಲೆ ಹಾಕಿದ್ದರ ಉದ್ದೇಶ ಉದ್ಯೋಗವನ್ನು ಸೃಷ್ಟಿಸಲು ರಾಜ್ಯಗಳನ್ನು ಒತ್ತಾಯಿಸುವುದಾಗಿತ್ತು.

ಕ್ರಮೇಣ ಮನರೇಗಾದ ಆಚರಣೆಯಲ್ಲಿ ಹಲವು ಸಮಸ್ಯೆಗಳು ಕಾಣಿಸಿಕೊಳ್ಳತೊಡಗಿದವು. ಆರಂಭಿಕ ವರ್ಷಗಳಲ್ಲಿ (2006–2012) ಮನರೇಗಾದಿಂದಾಗಿ ಗ್ರಾಮೀಣ ವೇತನದಲ್ಲಿ ಗಮನಾರ್ಹ ಏರಿಕೆ ಸಾಧ್ಯವಾಗಿತ್ತು. ನಂತರದ ದಿನಗಳಲ್ಲಿ, ಹಣದುಬ್ಬರ ಹೆಚ್ಚಿದ್ದರಿಂದ ಗ್ರಾಮೀನ ಪ್ರದೇಶದಲ್ಲಿನ ನೈಜ ವೇತನದ ಬೆಳವಣಿಗೆ ಸ್ಥಗಿತಗೊಂಡಿತ್ತು. ಮನರೇಗಾ ವೇತನವೂ ಸ್ಥಗಿತವಾಯಿತು. ವೇತನದ ಪಾವತಿಯೂ ವಿಳಂಬವಾಗತೊಡಗಿತು. ಭ್ರಷ್ಟಾಚಾರದ ಆರೋಪ ವ್ಯಾಪಕವಾಯಿತು. ಸುಳ್ಳು ಉದ್ಯೋಗದ ಕಾರ್ಡುಗಳು ಕಾಣಿಸಿಕೊಳ್ಳತೊಡಗಿದವು. ನಂತರ ಆಡಳಿತಕ್ಕೆ ಬಂದ ಎನ್‌ಡಿಎ ಸರ್ಕಾರ ಇದನ್ನು ತೀವ್ರವಾಗಿ ವಿರೋಧಿಸಿತು. 2015ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಸಂಸತ್ತಿನಲ್ಲಿ ಮನರೇಗಾವನ್ನು ಕಾಂಗ್ರೆಸ್ ಸರ್ಕಾರದ ವೈಫಲ್ಯದ "ಜೀವಂತ ಸ್ಮಾರಕ" ಎಂದು ಬಣ್ಣಿಸಿದ್ದರು. ರಾಜಕೀಯ ವಿರೋಧ ತೀವ್ರವಾಗತೊಡಗಿತು. ಮನರೇಗಾವನ್ನು ಕೆಲವೇ ಜಿಲ್ಲೆಗಳಿಗೆ ಸೀಮಿತಗೊಳಿಸುವ ಪ್ರಯತ್ನ ನಡೆಯಿತು. ಅದರ ಖರ್ಚಿಗೆ ಮಿತಿ ಹೇರುವ ಪ್ರಯತ್ನವೂ ಆಯಿತು. ಮನರೇಗಾದ ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗತೊಡಗಿತು. ಆ ವರ್ಷ ಉದ್ಯೋಗಿಗಳ ಸಂಖ್ಯೆ 25% ಇಳಿಯಿತು.

ಸಂಕಷ್ಟದ ಸಮಯದಲ್ಲಿ ಇದು ಆಸರೆಯನ್ನು ನೀಡಬಲ್ಲ ಯೋಜನೆಯಾಗಿತ್ತು ಅನ್ನುವುದರಲ್ಲಿ ಅನುಮಾನವಿಲ್ಲ. 2009–10ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನಲ್ಲಿ ಇದು ಜನರಿಗೆ ಆಸರೆ ಒದಗಿಸುತ್ತು. ಅದರ ಅರಿವಿದ್ದ ಸರ್ಕಾರಕ್ಕೆ ಕೋವಿಡ್ ಸಮಯದಲ್ಲಿ ಅದನ್ನು ಆಶ್ರಯಿಸುವುದು ಅನಿವಾರ್ಯವಾಗಿತ್ತು. ಆಗ ಲಾಕ್‌ಡೌನ್ ಸಂದರ್ಭದಲ್ಲಿ ಲಕ್ಷಾಂತರ ಕಾರ್ಮಿಕರು ತಮ್ಮ ಹಳ್ಳಿಗಳಿಗೆ ಮರಳಿದಾಗ ಅಲ್ಲಿ ಅವರಿಗೆ ಆಸರೆಯಾಗಿ ನಿಂತಿದ್ದೇ ಮನರೇಗಾ. ಅದು ಅವರಿಗೆ ಉದ್ಯೋಗ ಕೊಟ್ಟಿತ್ತು. ಇದು ಆರ್ಥಿಕತೆಯ 'ವಿಮೆಯಂತೆ ಕೆಲಸ ಮಾಡಿತು. ಆದರೂ ಯೋಜನೆಯನ್ನು ನಿಲ್ಲಿಸುವ, ಅದರ ಸ್ವರೂಪವನ್ನು ಬದಲಾಯಿಸುವ ಪ್ರಯತ್ನ ನಡೆದೇ ಇತ್ತು.

ತಂತ್ರಜ್ಞಾನ ಆಧಾರಿತ ಸುಧಾರಣೆಗಳಿಗೆ ಒತ್ತು ನೀಡಿತು. ವೇತನವನ್ನು ನೇರವಾಗಿ ಫಲಾನುಭವಿಗಳ ಆಧಾರ್–ಸಂಯೋಜಿತ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲು ಒತ್ತು ನೀಡಲಾಯಿತು. ದಿನಕ್ಕೆ ಎರಡು ಬಾರಿ ಕೆಲಸದ ಸ್ಥಳದಲ್ಲಿ ಜಿಯೋ–ಟ್ಯಾಗ್ ಮಾಡಿದ ಫೋಟೋಗಳೊಂದಿಗೆ ಹಾಜರಾತಿಯನ್ನು ದಾಖಲಿಸುವುದನ್ನು ಕಡ್ಡಾಯಗೊಳಿಸಲಾಯಿತು. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ನೆಟ್ ಸಂಪರ್ಕದಲ್ಲಿ ಸಮಸ್ಯೆಯಿತ್ತು. ಅದರಿಂದ ಹಲವು ಕಾರ್ಮಿಕರಿಗೆ ವೇತನ ಪಾವತಿಯಾಗಲಿಲ್ಲ. ವೇತನ ಪಾವತಿಗೆ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ABPS) ಕಡ್ಡಾಯಗೊಳಿಸಿದ ನಂತರ, ತಾಂತ್ರಿಕ ಸಮಸ್ಯೆಗಳಿಂದ ಲಕ್ಷಾಂತರ ಕಾರ್ಮಿಕರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಯಿತು. ಲಿಬ್‌ಟೆಕ್ ಇಂಡಿಯಾ ವರದಿಯ ಪ್ರಕಾರ, 2023–24 ರಲ್ಲಿಯೇ 8 ಕೋಟಿಗೂ ಹೆಚ್ಚು ಕಾರ್ಮಿಕರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಡಿಸೆಂಬರ್ 2021ರಿಂದ ಕೇಂದ್ರ ಸರ್ಕಾರವು ಭ್ರಷ್ಟಾಚಾರದ ಆರೋಪದ ಮೇಲೆ ಪಶ್ಚಿಮ ಬಂಗಾಳಕ್ಕೆ ಮನರೇಗಾ ನಿಧಿಯನ್ನು ತಡೆಹಿಡಿದಿದೆ. ಇದರಿಂದ ಲಕ್ಷಾಂತರ ಕಾರ್ಮಿಕರು ವೇತನವಿಲ್ಲದೆ ಪರದಾಡುವಂತಾಗಿದೆ. ಆದರೆ, ನಕಲಿ ಜಾಬ್ ಕಾರ್ಡ್‌ಗಳ ಸಂಖ್ಯೆ ಇತರ ಕೆಲವು ರಾಜ್ಯಗಳಿಗಿಂತ ಪಶ್ಚಿಮ ಬಂಗಾಳದಲ್ಲಿ ಕಡಿಮೆಯಿದೆ ಎಂದು ವರದಿಗಳು ಸೂಚಿಸುತ್ತವೆ.

ವಿಬಿ ಜಿ ರಾಂ ಜಿ ಜಾರಿಯಾಗಿದ್ದು

ಡಿಸೆಂಬರ್ 2025ರಲ್ಲಿ ಸರ್ಕಾರ ಮನರೇಗಾ ಕಾಯ್ದೆಯನ್ನು ರದ್ದುಗೊಳಿಸಿ ಹೊಸ ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಔರ್ ಅಜೀವಿಕಾ ಮಿಷನ್ (ವಿಬಿ ಜಿ ರಾಂ ಜಿ) ಕಾಯ್ದೆಯನ್ನು ಜಾರಿಗೊಳಿಸಿತು. ಹೊಸ ಮಸೂದೆಯನ್ನು ಸ್ಥಾಯಿ ಸಮಿತಿಗೆ ಕಳುಹಿಸದೇ, ವ್ಯಾಪಕ ಪರಾಮರ್ಶೆಯಿಲ್ಲದೇ, ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿ ಗಂಭೀರ ಚರ್ಚೆಯೂ ಆಗದೆ ಮಸೂದೆಯನ್ನು ಯಥಾವತ್ತು ಅಂಗೀಕರಿಸಲಾಯಿತು. ಮನರೇಗಾದಲ್ಲಿ ಉದ್ಯೋಗ ಹಕ್ಕಾಗಿತ್ತು. ಈಗ ಅದನ್ನು ಹೇಗೆ, ಎಲ್ಲಿ ಯಾವಾಗ ಮತ್ತು ಹೇಗೆ ಜಾರಿಗೊಳಸಿಬೇಕು ಅನ್ನುವುದನ್ನು ಕೇಂದ್ರ ನಿರ್ಧರಿಸುತ್ತದೆ. ಅಷ್ಟೇ ಅಲ್ಲ ಅದನ್ನು ನಿರ್ಧರಿಸುವುದಕ್ಕೆ ಮಾನದಂಡವನ್ನೂ ಕೇಂದ್ರವೇ ನಿರ್ಧರಿಸುತ್ತದೆ. ಸಹಜವಾಗಿಯೇ ಯೋಜನೆ ಅದು ಸಾರ್ವತ್ರಿಕವಾಗುವುದಿಲ್ಲ, ಬೇಡಿಕೆ ಆಧಾರಿತ ಕಾರ್ಯಕ್ರಮವೂ ಆಗುವುದಿಲ್ಲ. ಇದು ಉದ್ಯೋಗ ಖಾತ್ರಿಯ ಉದ್ದೇಶಕ್ಕೆ ಅಪಚಾರ ಅನ್ನುವ ಜೀನ್ ಡ್ರೀಜ್ ಇದನ್ನು "ಉದ್ಯೋಗವನ್ನು ಖಾತ್ರಿಯಾಗಿ ನೀಡಲಾಗುತ್ತದೆ ಎನ್ನುವ ಖಾತ್ರಿಯೇ ಇಲ್ಲದ ಉದ್ಯೋಗ ಖಾತ್ರಿ ಯೋಜನೆಯಾಗಿದೆ !" ಎಂದು ಟೀಕಿಸಿದ್ದಾರೆ. ಇದನ್ನು ಅವರು "ರಿಮೋಟ್ ಕಂಟ್ರೋಲಿನಿಂದ ತೆರೆದುಕೊಳ್ಳುವ ಪ್ಯಾರಾಚೂಟ್"ಗೆ ಹೋಲಿಸುತ್ತಾರೆ.

ಮೂಲತಃ ಇದು ಬೇಡಿಕೆ ಆಧಾರಿತ ಯೋಜನೆಯಾಗಿದ್ದರಿಂದ ಮನರೇಗಾದ ಬಜೆಟ್ ಕೇವಲ ಒಂದು ಅಂದಾಜಾಗಿತ್ತು. ಅದು ಯೋಜನೆಯ ಗರಿಷ್ಠ ಮಿತಿಯಾಗಿರಲಿಲ್ಲ. ಬೇಡಿಕೆ ಬಜೆಟ್ಟಿಗಿಂತ ಹೆಚ್ಚಾಗಿದ್ದರೆ ಅದನ್ನು ಒದಗಿಸುವುದು ಕೇಂದ್ರದ ಕಾನೂನಾತ್ಮಕ ಜವಾಬ್ದಾರಿಯಾಗಿತ್ತು. ಆದರೆ ಈಗ ಅದು ಬೇಡಿಕೆ ಆಧಾರಿತ ಮೊತ್ತವಲ್ಲ. ಅದರ ಗರಿಷ್ಠ ಮಿತಿಯನ್ನು ಕೇಂದ್ರ ನಿರ್ಧರಿಸುತ್ತದೆ. ಹಾಗೆಯೇ ಯೋಜನೆಯಲ್ಲಿ ಕೈಗೊಳ್ಳುವ ಕೆಲಸವನ್ನೂ ಇನ್ನೂ ಮುಂದೆ ರಾಜ್ಯಗಳು, ಗ್ರಾಮ ಸಭೆಗಳು ನಿರ್ಧರಿಸುವುದಿಲ್ಲ. ಈಗ ಕೇಂದ್ರ ನಿರ್ಧರಿಸುತ್ತದೆ. ಅದು ಕೇಂದ್ರದಿಂದ ಆದೇಶವಾಗಿ ಬರುತ್ತದೆ. ಬೇಡಿಕೆ ಆಧಾರಿತ ವ್ಯವಸ್ಥೆಯು ಕೆಳಮಟ್ಟದಿಂದ ಆರ್ಥಿಕತೆಯನ್ನು ಗಟ್ಟಿಗೊಳಿಸುತ್ತಾ ಹೋಗುತ್ತದೆ. ಆದರೆ ಪೂರೈಕೆ ಆಧಾರಿತ ವ್ಯವಸ್ಥೆಯು ಸಾಮಾನ್ಯ ಜನರ ಸಂಕಟಗಳನ್ನು, ಸ್ಥಳೀಯ ಅವಶ್ಯಕತೆಯನ್ನು ನಿರ್ಲಕ್ಷಿಸಲು ಪ್ರಯತ್ನಿಸುತ್ತದೆ.

ವಿಬಿ ಜಿ ರಾಂ ಜಿ ಕಾಯ್ದೆಯಲ್ಲಿ ಕೇಂದ್ರವು ಯೋಜನೆಯ ಮೊತ್ತವನ್ನು ನಿರ್ಧರಿಸುತ್ತದೆ. ಅದರ ಶೇಕಡ 60ರಷ್ಟನ್ನು ಅದು ಭರಿಸುತ್ತದೆ. ಉಳಿದ 40% ಹಣವನ್ನು ರಾಜ್ಯಗಳು ಹೊಂದಿಸಿಕೊಳ್ಳಬೇಕು. ಇದು ರಾಜ್ಯಗಳಿಗೆ, ಅದರಲ್ಲೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ರಾಜ್ಯಗಳಿಗೆ ಕಷ್ಟವಾಗುತ್ತದೆ. ಕೇಂದ್ರದಿಂದ ಹಣಕಾಸಿನ ನೆರವು ಪಡೆಯಬೇಕಾದರೆ ರಾಜ್ಯಗಳು 40% ಹಣವನ್ನು ಹೂಡುವುದಕ್ಕೆ ಸಿದ್ಧವಿರಬೇಕು. ಇಲ್ಲದೇ ಹೋದರೆ ಅವರು ಹೂಡುವುದಕ್ಕೆ ತಯಾರಿರುವ ಮೊತ್ತಕ್ಕೆ ಅನುಗುಣವಾಗಿ ಕೇಂದ್ರದ ನೆರವು ಸಿಗುತ್ತದೆ. ಅಂದರೆ ಯೋಜನೆಯ ಗಾತ್ರ ರಾಜ್ಯಗಳ ಹಣಕಾಸಿನ ಸಾಮರ್ಥ್ಯವನ್ನು ಅವಲಂಭಿಸಿರುತ್ತದೆ. ಹಣಕಾಸಿನ ಸಾಮರ್ಥ್ಯ ಕಡಿಮೆ ಇರುವ ರಾಜ್ಯಗಳು ಅಗತ್ಯವಿದ್ದರೂ ಸಹ ಹಣದ ಕೊರತೆಯಿಂದಾಗಿ ಯೋಜನೆಯನ್ನು ಕಡಿಮೆ ಬಳಸಿಕೊಳ್ಳುವ ಅಪಾಯವಿದೆ. ಆ ಮಟ್ಟಿಗೆ ಯೋಜನೆಗೆ ಕೇಂದ್ರ ಮೀಸಲಿಟ್ಟ ಹಣ ಬಳಕೆಯಾಗದೆ ಉಳಿಯುತ್ತದೆ. ಅಂತಿಮವಾಗಿ ದೂಷಣೆಯನ್ನು ರಾಜ್ಯಗಳ ಮೇಲೆ ಹಾಕಿ ಕೇಂದ್ರ ಜವಾಬ್ದಾರಿಯಿಂದ ಜಾರಿಕೊಳ್ಳಬಹುದು. ಅಂತಿಮವಾಗಿ ಅನ್ಯಾಯವಾಗುವುದು ಜನರಿಗೆ.

ತಮ್ಮ ರಾಜ್ಯಗಳಿಗೆ ಅವಶ್ಯವಾದ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸ್ವಾತಂತ್ರ್ಯ ರಾಜ್ಯಗಳಿಗಿದೆ. ಆದರೆ ಅದರ ಸಂಪೂರ್ಣ ವೆಚ್ಚವನ್ನು ರಾಜ್ಯಗಳೇ ಭರಿಸಬೇಕು. ಹಾಗಾಗಿ ಅದು ಜಾರಿಯಾಗುವುದಿಲ್ಲ. ಸಹಜವಾಗಿಯೇ ಕೇಂದ್ರ ನಿರ್ಧರಿಸಿದ ಮಿತಿಯೇ ಯೋಜನೆಯ ಗರಿಷ್ಠ ಮಿತಿಯೂ ಆಗಿಬಿಡುವ ಸಾಧ್ಯತೆ ಹೆಚ್ಚು.

ಕೇಂದ್ರ ತನ್ನ ಹಣಕಾಸಿನ ಹೊರೆಯನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದಲೇ ರಾಜ್ಯಗಳಿಗೆ 40% ಖರ್ಚನ್ನು ವರ್ಗಾಯಿಸುವ ಯೋಜನೆ ಮಾಡಿದ್ದರೆ, "ಖರ್ಚನ್ನು 60:40 ಅನುಪಾತದಲ್ಲಿ ವಿಂಗಡಿಸುವುದಕ್ಕಿಂತ ಕೇಂದ್ರವು 75 ದಿನಗಳ ಖರ್ಚನ್ನು ಪೂರ್ಣ ವಹಿಸಿಕೊಂಡು ಹೆಚ್ಚಿನ 50 ದಿನಗಳ ಖರ್ಚನ್ನು ಕ್ರೋಡೀಕರಿಸಲು ರಾಜ್ಯಗಳಿಗೆ ತಿಳಿಸಬಹುದಿತ್ತು." ಎಂದು ಕಾರ್ತಿಕ್ ಮುರುಳಿದರನ್ ಅಭಿಪ್ರಾಯ ಪಡುತ್ತಾರೆ.

ಉದ್ಯೋಗ ಖಾತರಿ ದಿನಗಳು 125ಕ್ಕೆ ಏರಿಕೆ

ವಿಬಿ ಜಿ ರಾಂ ಜಿ ಮಸೂದೆಯಲ್ಲಿ ಉದ್ಯೋಗ ಖಾತರಿ ದಿನಗಳನ್ನು 100ರಿಂದ 125 ದಿನಕ್ಕೆ ಹೆಚ್ಚಿಸಲಾಗಿದೆ. ಇದು ಸ್ವಾಗತಾರ್ಹ. ಆದರೆ ಇದು ಆಚರಣೆಗೆ ಬರುವ ಸಾಧ್ಯತೆ ತುಂಬಾ ಕಡಿಮೆ. ಜೀನ್ ಡ್ರೀಜ್ ಈ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಅದಕ್ಕೆ ಹಲವು ಕಾರಣಗಳನ್ನು ಕೊಡುತ್ತಾರೆ. ಈಗಿರುವ ನೂರು ದಿನಗಳ ಉದ್ಯೋಗವನ್ನು ಬಳಸಿಕೊಳ್ಳುತ್ತಿರುವವರು ಕೇವಲ 2% ಕುಟುಂಬಗಳು. ಅಸ್ತಿತ್ವದಲ್ಲಿರುವ ಮಿತಿಯೇ ಬಳಕೆ ಆಗದಿರುವಾಗ, ಇನ್ನು ಹೆಚ್ಚಿನ ದಿನಗಳು ಬಳಕೆಯಾಗುವ ಸಾಧ್ಯತೆ ಕಡಿಮೆ.



ಎರಡನೆಯದಾಗಿ ಶೇಕಡ 40ರಷ್ಟು ಖರ್ಚನ್ನು ರಾಜ್ಯಗಳು ಭರಿಸಬೇಕಾಗಿರುವುದರಿಂದ ರಾಜ್ಯಗಳ ಮೇಲೆ ಆರ್ಥಿಕ ಹೊರೆ ಹೆಚ್ಚಿದೆ. ಹಾಗಾಗಿ ರಾಜ್ಯಗಳು ಹೆಚ್ಚಿನ ಹೊರೆಯನ್ನು ಹೊರುವ ಸಾಧ್ಯತೆಗಳು ಕಡಿಮೆ. ಹಣಕಾಸಿನ ನೆರವನ್ನು ಕಡಿತ ಮಾಡಿ ಉದ್ಯೋಗದ ದಿನಗಳ ಮಿತಿಯನ್ನು ಏರಿಸುವುದರಿಂದ ಯಾವುದೇ ಅನುಕೂಲವೂ ಆಗುವುದಿಲ್ಲ. ಬದಲಿಗೆ ವೇತನ ದರ ಹೆಚ್ಚಿಸುವುದು ಜನರಿಗೆ ಹೆಚ್ಚು ಪ್ರಯೋಜನಕಾರಿ ಆಗುತ್ತಿತ್ತು. ಮೂರನೆಯದಾಗಿ 125 ದಿನಗಳ ಉದ್ಯೋಗವನ್ನು ನೀಡಬೇಕೆನ್ನುವುದು ಕಡ್ಡಾಯವೇನಲ್ಲ. ಹಾಗಾಗಿ ಕೇವಲ ಮಿತಿಯನ್ನು ಹೆಚ್ಚಿಸುವುದರಿಂದ ಯಾವುದೇ ಬದಲಾವಣೆಯೂ ಆಗುವುದಿಲ್ಲ. ಈ ಬದಲಾವಣೆ ಮನರೇಗಾ ಯೋಜನೆಯಲ್ಲಿ ಸುಧಾರಣೆಯನ್ನು ತರಲಾಗಿದೆ ಎಂಬ ಭಾವನೆಯನ್ನು ರೂಪಿಸುವುದಕ್ಕಷ್ಟೆ ಸೇರಿಸಲಾಗಿದೆ.

ಸರ್ಕಾರಕ್ಕೆ 125 ದಿನಗಳ ಉದ್ಯೋಗವನ್ನು ಒದಗಿಸುವ ಇರಾದೆಯೂ ಇದ್ದಂತಿಲ್ಲ. ಈ ವರ್ಷ ಮನರೇಗಾಕ್ಕೆ 95,692 ಕೋಟಿ ಘೋಷಿಸಿದ್ದಾರೆ. 125 ದಿನಗಳ ಕೆಲಸ ನೀಡಲು ಕನಿಷ್ಠ 3.84 ಲಕ್ಷ ಕೋಟಿ ಬೇಕಾಗುತ್ತದೆ. ಕೇಂದ್ರ್ರದ ಪಾಲು 60% ಅಂದರೆ ಬಜೆಟ್ಟಿನಲ್ಲಿ 2.3 ಲಕ್ಷ ಕೋಟಿ ರೂಪಾಯಿ ಇಡಬೇಕಿತ್ತು. ಆದರೆ ಈಗ ನಿಗದಿ ಮಾಡಿರುವ ಹಣದಿಂದ ವರ್ಷಕ್ಕೆ ಕೇವಲ 52 ದಿನಗಳ ಕೆಲಸವನ್ನು ನೀಡಬಹುದು. ಹಾಗಾಗಿ 125 ದಿನಗಳು ಜಾರಿಯಾಗುವುದಿಲ್ಲ ಅನ್ನುವ ಭರವಸೆ ಸರ್ಕಾರಕ್ಕೂ ಇದ್ದಂತಿದೆ.

ಹೊಸ ಮಸೂದೆಯಲ್ಲಿ ತಂದಿರುವ ಇನ್ನೊಂದು ಬದಲಾವಣೆ ಅಂದರೆ "ಕೃಷಿ ಬಿತ್ತನೆ ಮತ್ತು ಸುಗ್ಗಿಯ ಅವಧಿಯಲ್ಲಿ ವರ್ಷಕ್ಕೆ ಒಟ್ಟು 60 ದಿನಗಳ ಕಾಲ ಕೆಲಸವನ್ನು ಸ್ಥಗಿತಗೊಳಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ." ಸುಗ್ಗಿ ಸಮಯದಲ್ಲಿ ಕೃಷಿ ಕಾರ್ಮಿಕರು ಮನರೇಗಾ ಕೆಲಸದಲ್ಲಿ ತೊಡಗಿಕೊಂಡರೆ ಗದ್ದೆಗಳಲ್ಲಿ ಕೆಲಸ ಮಾಡಲು ಜನರಿರುವುದಿಲ್ಲ. ಕಾರ್ಮಿಕರ ಕೊರತೆಯಿಂದ ಕೂಲಿಯೂ ಹೆಚ್ಚಾಗಬಹುದು. ಹಾಗಾಗಿ ಭೂಮಾಲಿಕರಿಗೆ ತೊಂದರೆಯಾಗುವುದನ್ನು ತಪ್ಪಿಸುವ ಕಾರಣಕ್ಕೆ ಈ ಬದಲಾವಣೆಯನ್ನು ಮಾಡಲಾಗಿದೆ ಎನ್ನಲಾಗಿದೆ. ಆದರೆ ಇದರಿಂದ ರೈತರಿಗೆ ಚೌಕಾಸಿ ಮಾಡುವ ಶಕ್ತಿಯೇ ಹೋಗಿಬಿಡುತ್ತದೆ. ಮನರೇಗಾ ಇದ್ದಿದ್ದರೆ ಕೃಷಿ ಕಾರ್ಮಿಕರಿಗೆ ಗ್ರಾಮದಲ್ಲಿ ಸರಿಯಾದ ಕೂಲಿ ಸಿಗದಿದ್ದರೆ ಕೆಲಸಗಾರರು ಅದನ್ನು ನಿರಾಕರಿಸಬಹುದಿತ್ತು. ಆ ಅವಧಿಯಲ್ಲಿ ಮನರೇಗಾವನ್ನು ನಿಲ್ಲಿಸಿಬಿಟ್ಟರೆ ಚೌಕಾಸಿ ಮಾಡುವ ಶಕ್ತಿಯನ್ನು ರೈತರು ಕಳೆದುಕೊಳ್ಳುತ್ತಾರೆ. ಇದರಿಂದ ದೊಡ್ಡ ರೈತರ ಹಿತಾಸಕ್ತಿಗೆ ರಕ್ಷಣೆ ಸಿಕ್ಕರೂ ರೈತರು ಖಾಸಗಿ ಮಾರುಕಟ್ಟೆಯಲ್ಲಿ ಶೋಷಣೆಗೆ ಒಳಗಾಗುತ್ತಾರೆ ಅನ್ನುವ ಯೋಜನೆಯನ್ನು ಉತ್ತಮವಾಗಿ ಜಾರಿಗೊಳಿಸುವುದರಿಂದ ಕಾರ್ಮಿಕರಿಗೆ ಗ್ರಾಮೀಣ ಆರ್ಥಿಕತೆಯಲ್ಲಿ ಪರ್ಯಾಯ ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಅದರಿಂದ ಮಾರುಕಟ್ಟೆ ವೇತನ ಮತ್ತು ಖಾಸಗಿ ಉದ್ಯೋಗ ಎರಡೂ ಹೆಚ್ಚಿರುವುದು ಹಲವು ಅಧ್ಯಯನಗಳಿಂದ ತಿಳಿಯುತ್ತದೆ. ಹೆಚ್ಚಿನ ಆದಾಯದಿಂದ ಸ್ಥಳೀಯವಾಗಿ ಬೇಡಿಕೆ ಹೆಚ್ಚಿದೆ. ಇದರಿಂದ ಕೃಷಿಯೇತರ ಉದ್ಯಮಗಳು ಮತ್ತು ಉದ್ಯೋಗಗಳು ಗಣನೀಯವಾಗಿ ಹೆಚ್ಚಿದೆ. ಇದನ್ನು ಹಲವು ಆರ್ಥಿಕ ಸಮೀಕ್ಷೆಗಳು ತಿಳಿಸುತ್ತವೆ"


"ಮನರೇಗಾದ ಅನುಷ್ಠಾನದಲ್ಲಿ ಸುಧಾರಣೆಯನ್ನು ತಂದರೆ ಸಮಾನತೆ ಹಾಗೂ ದಕ್ಷತೆ ಎರಡರಲ್ಲೂ ಸುಧಾರಣೆ ಸಾಧ್ಯವಾಗುತ್ತದೆ. ಮನರೇಗಾ ಯೋಜನೆಯಿಂದ ವ್ಯಾಪಕವಾಗಿ ಅನುಕೂಲವಾಗಿದೆ. ಭೂಹಿಡುವಳಿಯ ಆಧಾರದ ಮೇಲೆ ಪರಿಶೀಲಿಸಿದಾಗ, ಕೆಳಗಿನ ಶೇ. 93ರಷ್ಟು ಜನರ ಪರಿಸ್ಥಿತಿ ಸುಧಾರಿಸಿದೆ. ಮೇಲಿನ ಕೇವಲ ಶೇಕಡ 7ರಷ್ಟು ಶ್ರೀಮಂತರು ಸ್ವಲ್ಪ ನಷ್ಟ ಅನುಭವಿಸಿದ್ದಾರೆ. ಅವರಿಗೆ ಹೆಚ್ಚಿನ ಕೂಲಿ ಕೊಡಬೇಕಾಗಿ ಬಂದಿದೆ. ಆದರೆ ಅನೇಕ ದೊಡ್ಡ ಭೂಮಾಲೀಕರು ಕೃಷಿಯೇತರ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಹಾಗಾಗಿ ಸ್ಥಳೀಯವಾಗಿ ಬೇಡಿಕೆ ಹೆಚ್ಚಾದಾಗ ಅವರಿಗೂ ಲಾಭವಾಗುತ್ತದೆ."

ಒಟ್ಟಿನಲ್ಲಿ ತನ್ನೆಲ್ಲಾ ಸಮಸ್ಯೆಗಳ ನಡುವೆಯೂ ಮನರೇಗಾ ಬಡವರಿಗೆ, ಮಹಿಳೆಯರಿಗೆ ಆಸರೆಯನ್ನು ಒದಗಿಸಿದೆ. ಅದರಲ್ಲೂ ಸಂಕಷ್ಟದ ಸಮಯದಲ್ಲಿ ಇದು ನೆರವಾಗಿದೆ. ಅದರ ಅನುಷ್ಠಾನದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಿದರೆ ಅನುಕೂಲವಾಗುತ್ತದೆ. ಈಗ ಅದನ್ನು ದುರ್ಬಲಗೊಳಿಸುವುದರಿಂದ ಗ್ರಾಮೀಣ ಬಡವರಿಗಿದ್ದ ಒಂದು ನೆಲೆಯನ್ನು ನಾಶಮಾಡಲಾಗುತ್ತಿದೆ. ರಾಜ್ಯಗಳ ಸ್ವಾತಂತ್ರ್ಯವನ್ನು ಹಾಗೂ ಸಾಮರ್ಥ್ಯವನ್ನು ಮೊಟಕುಗೊಳಿಸಿದಂತೆ ಆಗುತ್ತದೆ. ಇದು ಏಕಕಾಲಕ್ಕೆ "ಬಡವರ ಹಕ್ಕಿನ ಮೇಲೆ ಮತ್ತು ಸಂವಿಧಾನದ ಮೇಲಿನ ದಾಳಿಯೂ ಆಗಿದೆ." ಕೇಂದ್ರ್ರದ ಸಹಕಾರ ಹಾಗೂ ಪ್ರೋತ್ಸಾಹ ಇಲ್ಲದೇ ಹೋದರೆ ರಾಜ್ಯಗಳು ಇದನ್ನು ಮುಂದುವರಿಸುವ ಸಾಧ್ಯತೆ ಕಡಿಮೆ. ಕೇಂದ್ರ್ರ ಏಕಪಕ್ಷೀಯವಾಗಿ ಯೋಜನೆಯನ್ನು ಬದಲಿಸುವ ಮೂಲಕ ಸಹಕಾರ ಒಕ್ಕೂಟ ವ್ಯವಸ್ಥೆಯ ತತ್ತ್ವವನ್ನು ಉಲ್ಲಂಘಿಸುತ್ತಿದೆ.

ಕೃಪೆ– ಹೊಸತು ಮಾಸ ಪತ್ರಿಕೆ

ಇವ ನಮ್ಮವ-3

ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ ಭಾರತೀಯ ಅರ್ಥಶಾಸ್ತ್ರಜ್ಞರನ್ನು ಪರಿಚಯಿಸುವ ಉದ್ದೇಶದಿಂದ ಪ್ರಾರಂಭಿಸಿರುವ ಮಾಲಿಕೆಯಲ್ಲಿ ಮೂರನೆಯದು



ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಿದ ಸುಖಮೋಯ್ ಚಕ್ರವರ್ತಿ

ಸುಖಮೋಯ್ ಚಕ್ರವರ್ತಿ ಸ್ವತಂತ್ರ ಭಾರತದ ಮೊದಲ ತಲೆಮಾರಿನ ಅರ್ಥಶಾಸ್ತ್ರಜ್ಞರಲ್ಲಿ ಪ್ರಮುಖರು. ಅವರು ಕೇವಲ ಭಾರತದಲ್ಲಷ್ಟೇ ಅಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲೂ ಖ್ಯಾತರಾಗಿದ್ದರು. 'ಅಂತರರಾಷ್ಟ್ರೀಯ ಆರ್ಥಿಕ ಸಂಘದ' ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅಮರ್ತ್ಯ ಸೇನ್ ಹೇಳುವಂತೆ, ಸುಖಮೋಯ್ ಅವರದ್ದು ಬಹುಮುಖ ಪ್ರತಿಭೆ. ಅವರಿಗೆ ಸಂಸ್ಕೃತ ಸಾಹಿತ್ಯದಿಂದ ಹಿಡಿದು ಕ್ವಾಂಟಮ್ ಫಿಸಿಕ್ಸ್ ಮತ್ತು ತತ್ವಶಾಸ್ತ್ರದವರೆಗೆ ಎಲ್ಲವನ್ನೂ ಓದಿ, ಗ್ರಹಿಸಿಕೊಳ್ಳುವ ಅದ್ಭುತ ಶಕ್ತಿಯಿತ್ತು. "ಸುಖಮೋಯ್ ಓದದಿರುವ ವಿಷಯವೇ ಜಗತ್ತಿನಲ್ಲಿ ಇರಲಿಲ್ಲವೇನೋ" ಅನ್ನುತ್ತಾರೆ ಸೇನ್.

ಸುಖಮೋಯ್ ಚಕ್ರವರ್ತಿಯವರು ಹುಟ್ಟಿದ್ದು ಜುಲೈ 26, 1934 ರಂದು. ಅವರದ್ದು ಬೌದ್ಧಿಕವಾಗಿ ಅತ್ಯಂತ ಶ್ರೀಮಂತವಾಗಿದ್ದ ಕುಟುಂಬ. ಚಕ್ರವರ್ತಿಯವರು ಪಿಯುಸಿ ಓದುತ್ತಿರುವಾಗಲೇ ದಂತಕಥೆಯಾಗಿಬಿಟ್ಟಿದ್ದರು. ಕಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ 1953ರಲ್ಲಿ ತಮ್ಮ ಪದವಿ ಮತ್ತು 1955ರಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರೈಸಿದರು. ಆ ವೇಳೆಗಾಗಲಿ ಸೆಲಿಬ್ರಿಟಿಯಾಗಿದ್ದರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುವಾಗ ಅಮರ್ತ್ಯ ಸೇನ್ ಇವರ ಸಹಪಾಠಿಯಾಗಿದ್ದರು. ಇಬ್ಬರೂ ಆತ್ಮೀಯ ಸ್ನೇಹಿತರಾಗಿದ್ದರು. ಕೋಲ್ಕತ್ತಾದ ಪ್ರಸಿದ್ಧ ಕಾಫಿ ಹೌಸ್‌ನಲ್ಲಿ ಇವರಿಬ್ಬರೂ ಗಂಟೆಗಟ್ಟಲೆ ಅರ್ಥಶಾಸ್ತ್ರ, ರಾಜಕೀಯ ಮತ್ತು ತತ್ವಶಾಸ್ತ್ರದ ಬಗ್ಗೆ ಚರ್ಚಿಸುತ್ತಿದ್ದರು. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಕೆನ್ನೆತ್ ಆರೋ ಅವರ ಪುಸ್ತಕವನ್ನು ಅಂಗಡಿಯಿಂದ ಎರವಲು ತಂದು ಬೇಗ ಓದಿ ಮುಗಿಸಿದ್ದರು. ಆ ಪುಸ್ತಕದ ಓದುವಿಕೆಯೇ ಅಮರ್ತ್ಯ ಸೇನ್ ಅವರ 'ಸಾಮಾಜಿಕ ಆಯ್ಕೆಯ ಸಿದ್ಧಾಂತ'ಕ್ಕೆ ಅಡಿಪಾಯವಾಯಿತು.


ಇದು ಎಐ ಬಳಸಿ ಸೃಷ್ಟಿಸಿದ ಚಿತ್ರ.



ಸುಖಮೋಯ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದು ಮುಗಿಸಿ ಕೆಲ ಕಾಲ ಪಿ.ಸಿ. ಮಹಾಲನೋಬಿಸ್ ಅವರೊಂದಿಗೆ ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡಿದರು. ನಂತರದಲ್ಲಿ ಅವರು ನೋಬೆಲ್ ಪುರಸ್ಕೃತ ಜಾನ್ ಟಿನ್‌ಬರ್ಗನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಲು ನೆದರ್‌ಲ್ಯಾಂಡ್ಸ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಸೇರಿದರು. 1958ರಲ್ಲಿ ಪಿಎಚ್‌ಡಿ ಪೂರ್ಣಗೊಳಿಸಿದರು. ಅಲ್ಲೇ ಒಂದು ವರ್ಷ ಸಂದರ್ಶಕ ಫೆಲೋ ಆಗಿ ಕೆಲಸ ಮಾಡಿ ನಂತರ, 1959–61ರ ಅವಧಿಯಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಮ್ಯಾಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (MIT) ಸೇರಿದರು. ಅಲ್ಲಿ ಅವರಿಗೆ ಪಾಲ್ ರೋಸೆನ್‌ಸ್ಟೈನ್–ರೋಡಾನ್ ಅವರೊಂದಿಗೆ ನಿಕಟವಾಗಿ ಕೆಲಸಮಾಡುವ ಅವಕಾಶ ದೊರೆಯಿತು. ಜೊತೆಗೆ ಪಾಲ್ ಸ್ಯಾಮ್ಯುಯೆಲ್ಸನ್ ಮತ್ತು ರಾಬರ್ಟ್ ಸೋಲೋ ಅವರ ಒಡನಾಟವೂ ಸಾಧ್ಯವಾಯಿತು. ನಂತರ ತಾವು ಓದಿದ್ದ ಪ್ರೆಸಿಡೆನ್ಸಿ ಕಾಲೇಜಿಗೆ ಪ್ರಾಧ್ಯಾಪಕರಾಗಿ ಸೇರಿಕೊಂಡರು. ಅಲ್ಲಿ ಎರಡು ವರ್ಷ ಸೇವೆ ಸಲ್ಲಿಸಿ, 1963–64ರ ಅವಧಿಯಲ್ಲಿ ಸಂದರ್ಶಕ ಅಸೋಸಿಯೇಟ್ ಪ್ರೊಫೆಸರ್ ಆಗಿ ಮತ್ತೆ ಎಂ.ಐ.ಟಿಯಲ್ಲಿ ಕೆಲಸ ಮಾಡಿದರು.

1964ರಲ್ಲಿ, ಚಕ್ರವರ್ತಿಯವರು ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಉನ್ನತ ಪ್ರಾಧ್ಯಾಪಕ ಹುದ್ದೆಗೆ ಬಂದರು. 1960 ಮತ್ತು 70ರ ದಶಕದಲ್ಲಿ ಅಮರ್ತ್ಯ ಸೇನ್, ಸುಖಮೋಯ್ ಚಕ್ರವರ್ತಿ, ಮನಮೋಹನ್ ಸಿಂಗ್ ಮತ್ತು ಜಗದೀಶ್ ಭಗವತಿ ಈ ನಾಲ್ವರೂ ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಒಟ್ಟಿಗೆ ಅಧ್ಯಾಪಕರಾಗಿದ್ದರು. ಅದು ಭಾರತದ ಆರ್ಥಿಕ ಚಿಂತನೆಯ 'ಸ್ವರ್ಣ ಯುಗ' ಎನಿಸಿಕೊಂಡಿತ್ತು. ಸೇನ್ ಸೈದ್ಧಾಂತಿಕವಾಗಿ ತುಂಬಾ ಗಟ್ಟಿಗರಾಗಿದ್ದರು. ಚಕ್ರವರ್ತಿ ಸಿದ್ಧಾಂತವನ್ನು ದೇಶದ ಯೋಜನೆಗಳಿಗೆ ಅನ್ವಯಿಸುವಲ್ಲಿ ನಿಷ್ಣಾತರಾಗಿದ್ದರು. ಆಗಸ್ಟ್ 22, 1990 ರಂದು

‘Development Planning: The Indian Experience’



ಸುಖಮೋಯ್ ಚಕ್ರವರ್ತಿಯವರ ‘Development Planning: The Indian Experience’ (ಅಭಿವೃದ್ಧಿ ಯೋಜನೆ: ಭಾರತದ ಅನುಭವ) ಪುಸ್ತಕವು ಭಾರತದ ಆರ್ಥಿಕ ಇತಿಹಾಸದ ಒಂದು ಅತ್ಯಂತ ಮಹತ್ವದ ದಾಖಲೆ. ಇದು ಕೇವಲ ಅಂಕಿಅಂಶಗಳ ವಿವರಣೆಯಲ್ಲ, ಬದಲಿಗೆ ಭಾರತವು ಏಕೆ ಒಂದು ನಿರ್ದಿಷ್ಟ ಆರ್ಥಿಕ ಹಾದಿಯನ್ನು ಆರಿಸಿಕೊಂಡಿತು ಎಂಬ ಬಗ್ಗೆ ಇರುವ ಬೌದ್ಧಿಕ ವಿಶ್ಲೇಷಣೆ.

ಈ ಪುಸ್ತಕದ ಪ್ರಮುಖ ವಾದಗಳನ್ನು ಕೆಳಗಿನಂತೆ ವಿವರಿಸಬಹುದು:

1. ವಸಾಹತುಶಾಹಿ ಆರ್ಥಿಕತೆಯಿಂದ ವಿಮೋಚನೆ (Structural Break): ಚಕ್ರವರ್ತಿಯವರ ಮೊದಲ ಪ್ರಮುಖ ವಾದವೆಂದರೆ, ಯೋಜನಾಬದ್ಧ ಆರ್ಥಿಕತೆಯು ಭಾರತದ ಪಾಲಿಗೆ ಕೇವಲ ಒಂದು ಆರ್ಥಿಕ ನೀತಿಯಾಗಿರಲಿಲ್ಲ, ಅದು ವಸಾಹತುಶಾಹಿ ಕಾಲದ ಶೋಷಣೆಯಿಂದ ಹೊರಬರಲು ಮಾಡಿದ ಒಂದು ‘ರಚನಾತ್ಮಕ ಬದಲಾವಣೆ’. ಬ್ರಿಟಿಷರ ಕಾಲದಲ್ಲಿ ಭಾರತದ ಆರ್ಥಿಕತೆಯು ಕುಂಠಿತವಾಗಿತ್ತು. ಅದನ್ನು ಪುನಶ್ಚೇತನಗೊಳಿಸಲು ಕೇವಲ ಮಾರುಕಟ್ಟೆಯ ಶಕ್ತಿಗಳು ಸಾಕಾಗುವುದಿಲ್ಲ, ಸರ್ಕಾರದ ನೇರ ಹಸ್ತಕ್ಷೇಪ ಅನಿವಾರ್ಯ ಎಂದು ಅವರು ವಾದಿಸಿದ್ದಾರೆ.

2. **ನೆಹರೂ-ಮಹಾಲನೋಬಿಸ್ ತಂತ್ರದ ಸಮರ್ಥನೆ**: ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರೀ ಕೈಗಾರಿಕೆಗಳಿಗೆ (ಉಕ್ಕು, ವಿದ್ಯುತ್, ಯಂತ್ರೋಪಕರಣ) ಹೆಚ್ಚಿನ ಒತ್ತು ನೀಡಿದ್ದನ್ನು ಅವರು ಬಲವಾಗಿ ಸಮರ್ಥಿಸಿದ್ದಾರೆ: ಭಾರತವು ದೀರ್ಘಕಾಲದವರೆಗೆ ಸ್ವಾವಲಂಬಿಯಾಗಿ ಬೆಳೆಯಬೇಕಾದರೆ, ನಾವು ಮೊದಲು ‘ಬಂಡವಾಳ ಸರಕುಗಳನ್ನು’ ತಯಾರಿಸುವ ಶಕ್ತಿ ಪಡೆದುಕೊಳ್ಳಬೇಕು. ಒಮ್ಮೆ ಬಂಡವಾಳ ಸರಕುಗಳನ್ನು ಉತ್ಪಾದಿಸುವುದಕ್ಕೆ ಸಾಧ್ಯವಾದರೆ ನಂತರದ ಹಂತದಲ್ಲಿ ಕೃಷಿ ಮತ್ತು ಗ್ರಾಹಕ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದನ್ನು ಅವರು ‘ಆರ್ಥಿಕತೆಯ ತಳಹದಿ’ ಎಂದು ಕರೆದರು.

3. **ಕೃಷಿ – ಒಂದು ‘ಚೌಕಾಸಿ ವಲಯ’** (Agriculture as a ‘Bargain Sector’): ಈ ಪುಸ್ತಕದ ಅತ್ಯಂತ ವಿಶಿಷ್ಟವಾದ ಮತ್ತು ಚರ್ಚಿತವಾದ ವಾದ ಇದು. ಭಾರತದ ಯೋಜನೆಗಳಲ್ಲಿ ಕೃಷಿಯನ್ನು ನಿರ್ಲಕ್ಷಿಸಲಾಗಿದೆ ಎಂಬ ಟೀಕೆಯನ್ನು ಅವರು ಒಪ್ಪುವುದಿಲ್ಲ. 1950ರ ದಶಕದ ಆರಂಭದಲ್ಲಿ ಕೃಷಿಯನ್ನು ಒಂದು ‘ಚೌಕಾಸಿ ವಲಯ’ ಎಂದು ಪರಿಗಣಿಸಲಾಗಿತ್ತು. ಅಂದರೆ, ಕೃಷಿಯಲ್ಲಿ ಉತ್ಪಾದನೆ ಹೆಚ್ಚಿಸಲು ಸರ್ಕಾರದಿಂದ ದೊಡ್ಡ ಪ್ರಮಾಣದ ಹಣದ ಹೂಡಿಕೆ ಬೇಕಿಲ್ಲ; ಬದಲಿಗೆ ‘ಭೂ ಸುಧಾರಣೆ’ ಮತ್ತು ಸಾಂಸ್ಥಿಕ ಬದಲಾವಣೆಗಳನ್ನು ತಂದರೆ ಸಾಕು, ಉತ್ಪಾದನೆಯು ತಾನಾಗಿಯೇ ಹೆಚ್ಚುತ್ತದೆ ಎನ್ನುವುದು ಆಗಿನ ನಂಬಿಕೆಯಾಗಿತ್ತು. ಆದರೆ, ರಾಜಕೀಯ ಕಾರಣಗಳಿಂದಾಗಿ ಭೂ ಸುಧಾರಣೆಗಳು ಸರಿಯಾಗಿ ಜಾರಿಯಾಗಲಿಲ್ಲ. ಇದರಿಂದಾಗಿ ಕೃಷಿ ಉತ್ಪಾದನೆ ನಿರೀಕ್ಷಿತ ಮಟ್ಟದಲ್ಲಿ ಏರಲಿಲ್ಲ. ಇದು ಯೋಜನೆಯ ದೋಷವಲ್ಲ, ಬದಲಿಗೆ ಅನುಷ್ಠಾನದ ವೈಫಲ್ಯ ಎಂದು ಚಕ್ರವರ್ತಿ ಪ್ರತಿಪಾದಿಸಿದ್ದಾರೆ.

4. **ಯೋಜನೆಯ ಅನುಷ್ಠಾನದ ಸವಾಲುಗಳು** (Implementation Constraints): ಯೋಜನೆಗಳು ಕಾಗದದ ಮೇಲೆ ಅದ್ಭುತವಾಗಿದ್ದರೂ, ಅವುಗಳನ್ನು ಕಾರ್ಯರೂಪಕ್ಕೆ ತರುವಾಗ ವಿಫಲವಾದವು. ಅದಕ್ಕೆ ಹಲವು ಕಾರಣಗಳನ್ನು ಅವರು ನೀಡುತ್ತಾರೆ:
ಸಂಪನ್ಮೂಲಗಳ ಕೊರತೆ: ಭಾರತದಂತಹ ಬಡ ದೇಶದಲ್ಲಿ ಜನರಿಂದ ತೆರಿಗೆ ವಸೂಲಿ ಮಾಡುವುದು ಕಷ್ಟವಾಗಿತ್ತು.
ರಾಜಕೀಯ ಒತ್ತಡಗಳು: ವಿವಿಧ ಗುಂಪುಗಳ ನಡುವಿನ ಹಿತಾಸಕ್ತಿ ಸಂಘರ್ಷಗಳು ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರಿದವು.
ಬಾಹ್ಯ ಸವಾಲುಗಳು: ಯುದ್ಧಗಳು ಮತ್ತು ಬರಗಾಲದಂತಹ ಅನಿರೀಕ್ಷಿತ ಘಟನೆಗಳು ಯೋಜನೆಯ ಹಾದಿಯನ್ನು ತಪ್ಪಿಸಿದವು.

5. **ಮಾರುಕಟ್ಟೆ ಮತ್ತು ಯೋಜನೆಯ ನಡುವಿನ ಆಯ್ಕೆ**: ಇಂದು ಅನೇಕರು “ಮಾರುಕಟ್ಟೆಯೇ ಎಲ್ಲವನ್ನೂ ನಿರ್ಧರಿಸಲಿ” ಎನ್ನುತ್ತಾರೆ. ಆದರೆ ಚಕ್ರವರ್ತಿಯವರು ಈ ಪುಸ್ತಕದಲ್ಲಿ, “ಮಾರುಕಟ್ಟೆಯು ಕೇವಲ ದಕ್ಷತೆಯನ್ನು ನೋಡುತ್ತದೆ, ಆದರೆ ಯೋಜನೆಯು ಸಾಮಾಜಿಕ ನ್ಯಾಯವನ್ನು ನೋಡುತ್ತದೆ” ಎಂದು ವಾದಿಸಿದರು. ಬಡತನವಿರುವ ದೇಶದಲ್ಲಿ ಸಂಪನ್ಮೂಲಗಳ ಹಂಚಿಕೆಯು ಕೇವಲ ಲಾಭದ ಆಧಾರದ ಮೇಲೆ ನಡೆಯಬಾರದು, ಅದು ಸಮಾಜದ ಅಗತ್ಯದ ಮೇಲೆ ನಡೆಯಬೇಕು ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು.

ಈ ಪುಸ್ತಕದ ಮೂಲಕ ಸುಖಮೋಯ್ ಚಕ್ರವರ್ತಿಯವರು ಹೇಳಬಯಸಿದ್ದು ಇಷ್ಟೇ: “ಭಾರತದ ಆರಂಭಿಕ ಯೋಜನೆಗಳು ತಪ್ಪಾಗಿರಲಿಲ್ಲ. ಅವುಗಳು ತಾರ್ಕಿಕವಾಗಿದ್ದವು. ಆದರೆ ನಾವು ಸಾಂಸ್ಥಿಕ ಬದಲಾವಣೆಗಳನ್ನು (ವಿಶೇಷವಾಗಿ ಕೃಷಿಯಲ್ಲಿ) ತರುವಲ್ಲಿ ವಿಫಲವಾದೆವು ಮತ್ತು ಮಾರುಕಟ್ಟೆಯ ಶಕ್ತಿಗಳಿಗೆ ಅತಿಯಾದ ಪ್ರಾಮುಖ್ಯತೆ ನೀಡಲು ಇದು ಸರಿಯಾದ ಸಮಯವಲ್ಲ.” ಭಾರತವು ತನ್ನ ಆರ್ಥಿಕ ಹಾದಿಯನ್ನು ಬದಲಾಯಿಸುವ ಅಗತ್ಯವಿಲ್ಲ, ಬದಲಿಗೆ ಇದ್ದ ವ್ಯವಸ್ಥೆಯನ್ನೇ (ಯೋಜನಾ ಬದ್ಧ ಆರ್ಥಿಕತೆ) ಮತ್ತಷ್ಟು ಬಲಪಡಿಸಬೇಕು ಎಂದು ವಾದಿಸಿದ್ದಾರೆ. ಇಂದು ಕೂಡ ಭಾರತದ ಅನೇಕ ಅರ್ಥಶಾಸ್ತ್ರಜ್ಞರು ಮಾರುಕಟ್ಟೆಯ ಅತಿರೇಕಗಳನ್ನು ಟೀಕಿಸುವಾಗ ಚಕ್ರವರ್ತಿಯವರ ಈ ಸಿದ್ಧಾಂತಗಳನ್ನು ನೆನಪಿಸಿಕೊಳ್ಳುತ್ತಾರೆ.



ಗುರುವಿನ ಸಮಸ್ಯೆಯನ್ನು ಪರಿಹರಿಸಿದ ಶಿಷ್ಯ

ಪ್ರಖ್ಯಾತ ಅರ್ಥಶಾಸ್ತ್ರಜ್ಞ ಟಿನ್‌ಬರ್ಗೆನ್ ಚಕ್ರವರ್ತಿಯವರ ಮಾರ್ಗದರ್ಶಿ. ಅವರು ಒಂದು ದೇಶವು ತನ್ನ ಭವಿಷ್ಯದ ಏಳಿಗೆಗಾಗಿ ಎಷ್ಟು ಹಣವನ್ನು ಉಳಿಸಬೇಕು ಮತ್ತು ಅದನ್ನು ಹೇಗೆ ಯೋಜಿಸಬೇಕು ಎಂಬುದನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದರು. ಆದರೆ ಅವರ ಗಣಿತದ ಲೆಕ್ಕಾಚಾರದಲ್ಲಿ ಏನೋ ಸಮಸ್ಯೆಯಾಗಿತ್ತು. ಅವರ ವಾದ ಒಂದು ವಿಚಿತ್ರ ಮತ್ತು ಅಸಾಧ್ಯವಾದ ತೀರ್ಮಾನಕ್ಕೆ ಬಂದು ನಿಂತಿತು. ಅವರ ಗಣಿತದ ಪ್ರಕಾರ, ಜನರು ಕೇವಲ ಬದುಕಲು ಬೇಕಾದ ಅತ್ಯಂತ ಕನಿಷ್ಠ ಸೌಲಭ್ಯಗಳನ್ನು ಮಾತ್ರ ಬಳಸಿಕೊಂಡು, ಉಳಿದ ಹಣವನ್ನೆಲ್ಲಾ ಉಳಿತಾಯ ಮಾಡಬೇಕು. ಅದೂ ಒಂದೆರಡು ವರ್ಷಗಳಲ್ಲ, ಶಾಶ್ವತವಾಗಿ ಹೀಗೆ ಮಾಡುತ್ತಾ ಇರಬೇಕು ಎಂಬ ತೀರ್ಮಾನಕ್ಕೆ ತಂದು ನಿಲ್ಲಿಸಿತು. ಆದರೆ ಇದು ಅಸಂಬದ್ಧ. ಆರ್ಥಿಕ ಯೋಜನೆಯ ಮುಖ್ಯ ಉದ್ದೇಶವೇ ಜನರ ಜೀವನಮಟ್ಟವನ್ನು ಸುಧಾರಿಸುವುದು. ಆದರೆ ಟಿನ್‌ಬರ್ಗೆನ್ ಅವರ ಮಾದರಿಯನ್ನು ಅನುಸರಿಸಿದರೆ, ಜನರು ಶ್ರೀಮಂತರಾಗುವ ಬದಲು ಯಾವಾಗಲೂ ಬಡತನದಲ್ಲೇ (ಬರೀ ಬದುಕಲು ಬೇಕಾದಷ್ಟು ಮಾತ್ರ ತಿಂದು) ಇರಬೇಕಾಗುತ್ತದೆ.

ಟಿನ್‌ಬರ್ಗೆನ್ ಅವರ ಇಡೀ ಲೆಕ್ಕಾಚಾರವನ್ನು ಪರಿಶೀಲಿಸಿದ ಸುಕುಮೋಯ್ ಚಕ್ರವರ್ತಿಯವರು ತಮ್ಮ ಗುರುಗಳ ಲೆಕ್ಕಾಚಾರದ ಕ್ರಮದಲ್ಲೇ ತಪ್ಪಿರುವುದನ್ನು ಗಮನಿಸಿದರು. ಅರ್ಥಶಾಸ್ತ್ರದಲ್ಲಿ ನಾವು ಕೇವಲ ಇಂದಿನ ತೃಪ್ತಿಯ ಬಗ್ಗೆ ಯೋಚಿಸುವುದಿಲ್ಲ. ಒಂದು ದೇಶವು ಮುಂದಿನ ಎಷ್ಟೋ ವರ್ಷಗಳವರೆಗೆ ಅಥವಾ 'ಅನಂತ ಕಾಲದವರೆಗೆ' (Infinite time horizon) ಎಷ್ಟು ಸುಖವಾಗಿರಬಹುದು ಎಂದು ಲೆಕ್ಕ ಹಾಕಬೇಕು. ಪ್ರತಿ ವರ್ಷದ ತೃಪ್ತಿಯನ್ನು ಕೂಡಿಸುತ್ತಾ ಹೋದರೆ ಸಿಗುವ ಒಟ್ಟು ಮೊತ್ತವೇ 'ಒಟ್ಟು ಉಪಯುಕ್ತತೆ'. ಒಂದು ವೇಳೆ ಪ್ರತಿ ವರ್ಷವೂ ನಮಗೆ ಸಿಗುವ ತೃಪ್ತಿ ಒಂದೇ ಪ್ರಮಾಣದಲ್ಲಿದ್ದರೆ, ಅನಂತ ಕಾಲಕ್ಕೆ ಅದನ್ನು ಗಮನಿಸಿದರೆ ಒಟ್ಟು ತೃಪ್ತಿಯ ಮೊತ್ತವು 'ಅನಂತ' (Infinite) ಆಗಿಬಿಡುತ್ತದೆ. ಗಣಿತದಲ್ಲಿ ಒಂದು 'ಅನಂತ'ವನ್ನು ಇನ್ನೊಂದು 'ಅನಂತ'ದ ಜೊತೆ ಹೋಲಿಸಲು ಬರುವುದಿಲ್ಲ. ಅಂದರೆ ಪ್ರತಿ ಯೋಜನೆಗಳ ಒಟ್ಟಾರೆ ಉಪಯುಕ್ತತೆಯ ಮೊತ್ತಗಳೂ ಅನಂತವೇ ಆಗಿಬಿಟ್ಟರೆ ಅವನ್ನು ಪರಸ್ಪರ ಹೋಲಿಸುವುದಕ್ಕೆ ಆಗುವುದಿಲ್ಲ. ಮೊತ್ತಗಳು ನಿರ್ದಿಷ್ಟ ಸಂಖ್ಯೆಗಳು ಇದ್ದಾಗಷ್ಟೇ ಹೋಲಿಕ ಸಾಧ್ಯ.

ಇದು ಸಾಧ್ಯವಾಗಬೇಕಾದರೆ ಉಪಯುಕ್ತತೆಯು ಕಡಿಮೆಯಾಗುತ್ತಾ ಶೂನ್ಯದ ಕಡೆ ಚಲಿಸಬೇಕು. ಚಕ್ರವರ್ತಿಯವರು ರಾಮ್ಸೆಯವರ ಬ್ಲಿಸ್ ಪಾಯಿಂಟ್ ಸಿದ್ಧಾಂತವನ್ನು ಇಲ್ಲಿಗೆ ಅನ್ವಯಿಸಿದರು. ನಾವು ಸಾಮಾನ್ಯವಾಗಿ ಮಾನವನ ಆಸೆಗಳಿಗೆ ಮಿತಿಯಿಲ್ಲ ಅನ್ನುತ್ತೇವೆ. ಆದರೆ ಆರ್ಥಿಕ ಸಿದ್ಧಾಂತದ ಉದ್ದೇಶಕ್ಕಾಗಿ, ಫ್ರಾಂಕ್ ರಾಮ್ಸೆ ಒಟ್ಟು ಆಸೆಗಳಿಗೆ ಒಂದು ಮಿತಿಯನ್ನು ಕಲ್ಪಿಸಿಕೊಂಡರು. ಒಂದು ಹಂತದಲ್ಲಿ ಮನುಷ್ಯನಿಗೆ ಬೇಕಾದ ಎಲ್ಲಾ ವಸ್ತುಗಳು ಮತ್ತು ಸೇವೆಗಳು ಸಿಕ್ಕಿಬಿಡುತ್ತವೆ ಮತ್ತು ಅದಕ್ಕಿಂತ ಹೆಚ್ಚು ಸಿಕ್ಕರೂ ಅವನಿಗೆ ಹೆಚ್ಚಿನ ಸುಖ ಅಥವಾ ಉಪಯುಕ್ತತೆ ಸಿಗುವುದಿಲ್ಲ ಅಂತ ಭಾವಿಸಿಕೊಂಡರು. ಈ ಗರಿಷ್ಠ ಸುಖದ ಹಂತವನ್ನು 'ಬ್ಲಿಸ್ ಪಾಯಿಂಟ್' ಎಂದು ಕರೆದರು. ಈ ಹಂತದಲ್ಲಿ, ಹೆಚ್ಚುವರಿ ಅನುಭೋಗದಿಂದ ಸಿಗುವ 'ಸೀಮಾಂತ ಪ್ರಯೋಜನ' ಶೂನ್ಯವಾಗಿರುತ್ತದೆ.

ಸರಳವಾಗಿ ಹೇಳಬೇಕೆಂದರೆ ನಿಮಗೆ ಹಸಿವಾದಾಗ ಒಂದು ರೊಟ್ಟಿ ತಿಂದರೆ ತುಂಬಾ ಸುಖ ಸಿಗುತ್ತದೆ. ಎರಡನೇ ರೊಟ್ಟಿಗೆ ಸುಖ ಸ್ವಲ್ಪ ಕಡಿಮೆಯಾಗುತ್ತದೆ. ಐದನೇ ರೊಟ್ಟಿ ತಿಂದಾಗ ನಿಮ್ಮ ಹೊಟ್ಟೆ ಪೂರ್ತಿ ತುಂಬಿರುತ್ತದೆ. ಆರನೇ ರೊಟ್ಟಿ ನೀಡಿದರೂ ನಿಮಗೆ ಅದರಿಂದ ಯಾವುದೇ ಹೆಚ್ಚಿನ ಸುಖ ಸಿಗುವುದಿಲ್ಲ. ಇಲ್ಲಿ 'ಐದನೇ ರೊಟ್ಟಿ'ಯ ಹಂತವೇ ನಿಮ್ಮ ಬ್ಲಿಸ್ ಪಾಯಿಂಟ್.

ಜಾನ್ ಟಿನ್‌ಬರ್ಗೆನ್ ಅವರ ಲೆಕ್ಕಾಚಾರದಲ್ಲಿ ಇದ್ದ ಸಮಸ್ಯೆಯೇ ಇದು. ಅವರು ತಮ್ಮ ಲೆಕ್ಕಾಚಾರದಲ್ಲಿ ಈ 'ಬ್ಲಿಸ್ ಪಾಯಿಂಟ್' ಅಥವಾ ಯಾವುದೇ ಗರಿಷ್ಠ ಮಿತಿಯನ್ನು ಹಾಕಿರಲಿಲ್ಲ. ಇದರಿಂದಾಗಿ ಅವರ ಲೆಕ್ಕಾಚಾರದಲ್ಲಿ ಜನರು ಎಷ್ಟು ಉಳಿತಾಯ ಮಾಡಿದರೂ ಅವರ ಸುಖವು ಅನಂತದ ಕಡೆಗೆ ಸಾಗುತ್ತಿತ್ತು, ಇದು ಗಣಿತದ ಪ್ರಕಾರ "ಅಸಂಬದ್ಧ ಫಲಿತಾಂಶ" ನೀಡುತ್ತಿತ್ತು. ಚಕ್ರವರ್ತಿಯವರು ಇದನ್ನೇ ಎತ್ತಿ ತೋರಿಸಿ, "ನೀವು ಒಂದು ಮಿತಿಯನ್ನು (Boundary condition) ಹಾಕದಿದ್ದರೆ, ನಿಮ್ಮ ಆರ್ಥಿಕ ಮಾದರಿಯು ದಾರಿ ತಪ್ಪುತ್ತದೆ," ಎಂದರು.



ಅವರ ಅಕಾಲಿಕ ನಿಧನದವರೆಗೂ ಅಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಸುಖಮೋಯ್ ಚಕ್ರವರ್ತಿ ಅವರು ಕೇವಲ ಒಬ್ಬ ಯಶಸ್ವಿ ಉಪನ್ಯಾಸಕರಷ್ಟೇ ಅಲ್ಲದೆ, ಶಿಕ್ಷಣಕ್ಕೆ ಅವರ ಬದ್ಧತೆಯೂ ಅಷ್ಟೇ ಇತ್ತು. ಅವರ ಮನೆ ಯಾವಾಗಲೂ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಂದ ತುಂಬಿರುತ್ತಿತ್ತು. ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಬಂದ ಎಲ್ಲರಿಗೂ ಅವರ ಮನೆ ಯಾವಾಗಲೂ ತೆರೆದಿತ್ತು. 1970ರ ದಶಕದ ಆರಂಭದಿಂದ ಸುಖಮೋಯ್ ಅವರು ರಾಷ್ಟ್ರದ ಸಾರ್ವಜನಿಕ ಆಡಳಿತದಲ್ಲಿ ಪ್ರಮುಖ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಆದರೂ ಅಷ್ಟೇ ನಿಷ್ಠೆಯಿಂದ ತಮ್ಮ ಬೋಧನಾ ವೃತ್ತಿಯಲ್ಲೂ ತೊಡಗಿಸಿಕೊಂಡಿದ್ದರು.

ಸಾರ್ವಜನಿಕ ಸೇವೆಯಲ್ಲಿ

ಸುಖಮೋಯ್ ಚಕ್ರವರ್ತಿಯವರು ಕೇವಲ ಒಬ್ಬ ಸೈದ್ಧಾಂತಿಕ ಅರ್ಥಶಾಸ್ತ್ರಜ್ಞರಾಗಿ ಉಳಿಯದೆ, ತಮ್ಮ ಜ್ಞಾನವನ್ನು ಸಾರ್ವಜನಿಕ ನೀತಿಯನ್ನು ರೂಪಿಸುವುದಕ್ಕೆ, ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸುವುದಕ್ಕಾಗಿ ಅನ್ವಯಿಸಲು ಪ್ರಯತ್ನಿಸಿದರು. 1971ರಲ್ಲಿ ಅವರು ಯೋಜನಾ ಆಯೋಗವನ್ನು ಸೇರಿದಾಗ, ಭಾರತದ ಆರ್ಥಿಕತೆಯು ಅನೇಕ ಸವಾಲುಗಳನ್ನು ಎದುರಿಸುತ್ತಿತ್ತು. 1983 ರಿಂದ ಬದುಕಿರುವವರವರೆಗೆ ಅವರು ವಿವಿಧ ಪ್ರಧಾನ ಮಂತ್ರಿಗಳ (ಇಂದಿರಾ ಗಾಂಧಿ, ರಾಜೀವ್ ಗಾಂಧಿ, ವಿ.ಪಿ. ಸಿಂಗ್) ಕಾಲದಲ್ಲಿ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷರಾಗಿದ್ದರು. ಒಂದು ಸರ್ಕಾರ ಬಿದ್ದು, ಅದರ ವಿರೋಧಿ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಹೊಸ ಪ್ರಧಾನ ಮಂತ್ರಿಗಳು ಸುಖಮೋಯ್ ಅವರ ಬೌದ್ಧಿಕ ಮಟ್ಟ ಮತ್ತು ಪ್ರತಿಭೆಗೆ ಗೌರವ ನೀಡಿ, ಅವರನ್ನು ಮತ್ತೆ ಆರ್ಥಿಕ ಸಲಹಾ ಮಂಡಳಿಯ ಮುಖ್ಯಸ್ಥರನ್ನಾಗಿ ನೇಮಿಸುತ್ತಿದ್ದುದು ಅವರ ಬೌದ್ಧಿಕ ಘನತೆಗೆ ಸಂದ ದೊಡ್ಡ ಗೌರವ.

1987 ರಿಂದ ಅವರು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಇದಲ್ಲದೆ, 1983–85 ರ ಅವಧಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪಿಸಿದ 'ಹಣಕಾಸು ವ್ಯವಸ್ಥೆಯ ಮರುಪರಿಶೀಲನಾ ಸಮಿತಿ'ಯ ಅಧ್ಯಕ್ಷತೆ ಸೇರಿದಂತೆ ಹಲವು ಮಹತ್ವದ ಸಾರ್ವಜನಿಕ ಹುದ್ದೆಗಳನ್ನು ಅವರು ಅಲಂಕರಿಸಿದ್ದರು.

ಬರವಣಿಗೆಗಳು ಮತ್ತು ಪ್ರಕಟಣೆಗಳು

ಸುಖಮೋಯ್ ಅವರು ಬರೆದ ಪುಸ್ತಕಗಳು, ಲೇಖನಗಳು ತುಂಬಾ ಪ್ರಸಿದ್ಧವಾಗಿದ್ದವು. ಖ್ಯಾತ ಅರ್ಥಶಾಸ್ತ್ರಜ್ಞರ ಮೆಚ್ಚುಗೆಗೆ ಪಾತ್ರವಾಗಿತ್ತು. ಅವರ ಮೊದಲ ಪುಸ್ತಕ 'The Logic of Investment Planning' (1959) ಅವರ ಪಿಎಚ್‌ಡಿ ಪ್ರಬಂಧವಾಗಿತ್ತು. ಅದರಲ್ಲಿ ಪಿ.ಸಿ. ಮಹಲನೋಬಿಸ್ ಮತ್ತು ಜಾನ್ ಟಿನ್‌ಬರ್ಗನ್ ಇಬ್ಬರ ಪ್ರಭಾವವನ್ನೂ ಕಾಣಬಹುದಿತ್ತು. ಅವರು ಹಿಂದುಳಿದಿರುವಿಕೆಯ ರಾಚನಿಕ ಲಕ್ಷಣಗಳನ್ನು ಅರಿಯುವುದಕ್ಕೆ ಮತ್ತು ಅವುಗಳನ್ನು ಹೋಗಲಾಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ವಿಶೇಷ ಗಮನ ನೀಡಿದ್ದರು.

ಸುಖಮೋಯ್ ತಮ್ಮ ಪ್ರಾರಂಭದ ದಿನಗಳಲ್ಲಿ ಗರಿಷ್ಠ ಉಳಿತಾಯ (Optimum Savings) ಕುರಿತು ಅಧ್ಯಯನ ಮಾಡುತ್ತಿದ್ದರು. 1962ರಲ್ಲಿ ಆ ಬಗ್ಗೆ ಎರಡು ಗಮನಾರ್ಹ ಪ್ರಬಂಧಗಳನ್ನು



ಪ್ರಕಟಿಸಿದರು. ರಾಷ್ಟ್ರವು ಭವಿಷ್ಯದ ಬೆಳವಣಿಗೆಗಾಗಿ ಇಂದು ಎಷ್ಟು ಉಳಿತಾಯ ಮಾಡಬೇಕು ಮತ್ತು ಎಷ್ಟು ಖರ್ಚು ಮಾಡಬೇಕು ಎಂಬುದನ್ನು ನಿರ್ಧರಿಸುವ ಬಗ್ಗೆ ಮುಖ್ಯವಾಗಿ ಚರ್ಚಿಸಿದ್ದರು. ಉಳಿತಾಯ ಸಿದ್ಧಾಂತದ ಮೂಲ ಉದ್ದೇಶವೇ ಅದು. ಮೊದಲ ಪ್ರಬಂಧದಲ್ಲಿ ಉಳಿತಾಯ ಮತ್ತು ಬೆಳವಣಿಗೆಯ ಹಾದಿಯನ್ನು ಅನಂತ ಕಾಲದ ಅವಧಿಯಲ್ಲಿ ನಿರ್ಧರಿಸುವ ಸಂದರ್ಭದಲ್ಲಿ ಎದುರಿಸಬೇಕಾದ ಸಮಸ್ಯೆಯನ್ನು ಕುರಿತಂತೆ ಚರ್ಚಿಸಿದ್ದರು. 1928 ರಲ್ಲಿ ಫ್ರಾಂಕ್ ರಾಮ್ಸೆ ಅವರು ಮಂಡಿಸಿದ್ದ 'Bliss point' (ಗರಿಷ್ಠ ತೃಪ್ತಿಯ ಸ್ಥಿತಿ) ಪರಿಕಲ್ಪನೆಯನ್ನು ಸುಖಮೋಯ್ ವಿಸ್ತರಿಸಿದರು. ಒಂದು ದೇಶದ ಜನರಿಗೆ ಬೇಕಾದ ಮೂಲಭೂತ ಸೌಕರ್ಯಗಳು, ಶಿಕ್ಷಣ, ಆರೋಗ್ಯ ಎಲ್ಲವೂ ಗರಿಷ್ಠ ಮಟ್ಟದಲ್ಲಿ ಸಿಕ್ಕಾಗ ಆ ದೇಶವು ತನ್ನ ಗರಿಷ್ಠ ತೃಪ್ತಿಯ ಸ್ಥಿತಿಯನ್ನು ತಲುಪಿದೆ ಎನ್ನಬಹುದು. ಇದನ್ನು ಗರಿಷ್ಠ ತೃಪ್ತಿಯ ಸ್ಥಿತಿ ಎನ್ನಲಾಗುತ್ತದೆ. ಗರಿಷ್ಠ ತೃಪ್ತಿಯ ಸ್ಥಿತಿ– ಬ್ಲಿಸ್ ಪಾಯಿಂಟ್ ಅವರ ಗರಿಷ್ಠ ಉಳಿತಾಯದ ಸಿದ್ಧಾಂತದ ಮುಖ್ಯ ಪರಿಕಲ್ಪನೆಯಾಗಿತ್ತು.

ಸುಖಮೋಯ್ ಚಕ್ರವರ್ತಿ ಅವರ ಮತ್ತೊಂದು ಮಹತ್ವದ ಕೃತಿ 'ಕ್ಯಾಪಿಟಲ್ ಅಂಡ್ ಡೆವಲಪ್‌ಮೆಂಟ್ ಪ್ಲಾನಿಂಗ್'. ಇದು ಭಾರತದ ಆರ್ಥಿಕ ಚಿಂತನೆಗೆ ಸಂಬಂಧಿಸಿದಂತೆ ಬಹಳ ಪ್ರಮುಖ ಕೃತಿ. ಪಾಲ್ ಸ್ಯಾಮ್ಯುಯೆಲ್ಸನ್ ಅವರು ಇದನ್ನು ಅಪಾರವಾಗಿ ಮೆಚ್ಚಿಕೊಂಡು ಮುನ್ನುಡಿ ಬರೆದಿದ್ದಾರೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಂಡವಾಳ ಕ್ರೋಡೀಕರಣ ಆಗುವುದು ತುಂಬಾ ನಿಧಾನ. ಇದು ಚಕ್ರವರ್ತಿಯವರ ಪ್ರಕಾರ ಅಲ್ಲಿಯ ಮುಖ್ಯ ಸಮಸ್ಯೆ. ಆದರೆ ಕೇವಲ ಮಾರುಕಟ್ಟೆಯ ಶಕ್ತಿಗಳನ್ನೇ ನೆಚ್ಚಿಕೊಂಡು ಬಂಡವಾಳ ಕ್ರೋಡೀಕರಣವನ್ನು ತೀವ್ರಗೊಳಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರವು ಮಧ್ಯಪ್ರವೇಶ ಮಾಡಿ, ಉಳಿತಾಯ ಮತ್ತು ಹೂಡಿಕೆಯ ದರವನ್ನು ಕೃತಕವಾಗಿ ಹೆಚ್ಚಿಸಬೇಕು.

ಆಯೋಜನಾ ಆಯೋಗದಲ್ಲಿ ಸುಖಮೋಯ್ ಚಕ್ರವರ್ತಿ


ಅವರು 1971ರಲ್ಲಿ ಯೋಜನಾ ಆಯೋಗವನ್ನು ಸೇರಿದರು. ಅಲ್ಲಿ ಅವರ ಕೊಡುಗೆ ಹಲವು. ಕೆಲವನ್ನು ಕೆಳಕಂಡಂತೆ ಪಟ್ಟಿಮಾಡಬಹುದು:
1.ಕೃಷಿ ಮತ್ತು ಕೈಗಾರಿಕೆಗಳ ನಡುವೆ ವ್ಯಾಪಾರದಲ್ಲಿ ಸಮತೋಲನ: ಚಕ್ರವರ್ತಿಯವರು ಯೋಜನಾ ಆಯೋಗದಲ್ಲಿ ಮಾಡಿದ ಅತ್ಯಂತ ದೊಡ್ಡ ಕೆಲಸವೆಂದರೆ ಕೃಷಿ ಮತ್ತು ಕೈಗಾರಿಕಾ ವಲಯಗಳ ನಡುವಿನ ವ್ಯಾಪಾರ ಸಂಬಂಧವನ್ನು ಸಮತೋಲನಗೊಳಿಸಿದ್ದು. ಅವರ ದೃಷ್ಟಿಯಲ್ಲಿ ಕೈಗಾರಿಕೆಗಳು ಬೆಳೆಯಬೇಕಾದರೆ ರೈತರಿಗೆ ತಮ್ಮ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಸಿಗಬೇಕು (ಆಗಲೇ ಅವರು ಕೈಗಾರಿಕಾ ವಸ್ತುಗಳನ್ನು ಖರೀದಿಸಲು ಸಾಧ್ಯ). ಆದರೆ, ಆಹಾರದ ಬೆಲೆ ವಿಪರೀತ ಏರಬಾರದು (ಏರಿದರೆ ಕೈಗಾರಿಕಾ ಕಾರ್ಮಿಕರ ವೇತನ ಹೆಚ್ಚಿಸಬೇಕಾಗುತ್ತದೆ, ಇದು ಹೂಡಿಕೆಯನ್ನು ಕಡಿಮೆ ಮಾಡುತ್ತದೆ). ದೋಣಿ ಒಂದು ಕಡೆ ವಾಲದಂತೆ ಸರ್ಕಾರ ಎಚ್ಚರಿಕೆ ಎಚ್ಚರವಹಿಸಬೇಕು. ಇದಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಲು ಅವರು ನೆರವಾದರು.

2.ಎರಡನೆಯದಾಗಿ ಮಹಾಲನೋಬಿಸ್ ಮಾದರಿಗೆ ಅವರು ಸೈದ್ಧಾಂತಿಕ ಬೆಂಬಲ ನೀಡಿದರು. ಭಾರತದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರೀ ಕೈಗಾರಿಕೆಗಳಿಗೆ (ಉಕ್ಕು, ಯಂತ್ರೋಪಕರಣ) ಹೆಚ್ಚಿನ ಒತ್ತು ನೀಡಲಾಗಿತ್ತು. ಅನೇಕರು "ಇದು ಕೃಷಿಯನ್ನು ನಿರ್ಲಕ್ಷಿಸುತ್ತಿದೆ" ಎಂದು ಟೀಕಿಸಿದ್ದರು. ಆದರೆ ಚಕ್ರವರ್ತಿಯವರು ಇದನ್ನು 'ಟರ್ನ್‌ಪೈಕ್ ತಂತ್ರ'ದ ಮೂಲಕ ಸಮರ್ಥಿಸಿಕೊಂಡರು. "ನಮಗೆ ಭವಿಷ್ಯದಲ್ಲಿ ಹೆಚ್ಚು ಆಹಾರ ಮತ್ತು ಬಟ್ಟೆ ಬೇಕೆಂದರೂ ಸಹ, ಮೊದಲು ಆ ವಸ್ತುಗಳನ್ನು ತಯಾರಿಸುವ ಯಂತ್ರಗಳನ್ನು ತಯಾರಿಸುವ ಶಕ್ತಿ ನಮಗೆ ಬೇಕು" ಎಂದು ಅವರು ಪ್ರತಿಪಾದಿಸಿದರು. ಈ ದೂರದೃಷ್ಟಿಯ ಆಧಾರದ ಮೇಲೆ ಬಂಡವಾಳ ಹೂಡಿಕೆಯ ಹಂಚಿಕೆಯನ್ನು ಅವರು ಸಮರ್ಥವಾಗಿ ನಿರ್ವಹಿಸಿದರು.

3.ಚಕ್ರವರ್ತಿಯವರು ಕೃಷಿಯನ್ನು 'ಚೌಕಾಸಿ ವಲಯ'ವಾಗಿ ಕಂಡರು. ಕೃಷಿ ವಲಯದಲ್ಲಿ ಬೆಳವಣಿಗೆ ಆಗಬೇಕಾದರೆ ಭೂ ಸುಧಾರಣೆಯಾಗಬೇಕು ಎಂದು ಅವರು ವಾದಿಸುತ್ತಿದ್ದರು. ಕೃಷಿಯಲ್ಲಿ ಉತ್ಪಾದನೆ ಹೆಚ್ಚಿಸಲು ಕೇವಲ ಹಣ ಕೊಟ್ಟರೆ ಸಾಲದು, ಭೂಮಿಯ ಮಾಲೀಕತ್ವದ ಹಕ್ಕುಗಳಲ್ಲಿ ಬದಲಾವಣೆ ತರಬೇಕು. ಆಗ ಯಾವುದೇ ದೊಡ್ಡ ಹೂಡಿಕೆಯಿಲ್ಲದೆ ಉತ್ಪಾದನೆ ಹೆಚ್ಚಿಸಬಹುದು ಎಂಬುದು ಅವರ ನಂಬಿಕೆಯಾಗಿತ್ತು. ಇದನ್ನು ಯೋಜನಾ ಆಯೋಗದ ನೀತಿಗಳಲ್ಲಿ ಅಳವಡಿಸಲು ಅವರು ಶ್ರಮಿಸಿದರು.

4.ಸುಖಮೋಯ್ ಚಕ್ರವರ್ತಿಯವರು "ನಿರ್ದೇಶಿತ ಆರ್ಥಿಕತೆ" ಯ (Dirigiste Regime) ಬೆಂಬಲಿಗರಾಗಿದ್ದರು. ಅಂದರೆ ಸರ್ಕಾರವು ಆರ್ಥಿಕತೆಯ ಚುಕ್ಕಾಣಿ ಹಿಡಿಯಬೇಕು, ಅದು ಆರ್ಥಿಕತೆಯನ್ನು ಮುನ್ನಡೆಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಮುಕ್ತ ಮಾರುಕಟ್ಟೆಯು (Laissez-faire) ಬಡತನವಿರುವ ದೇಶದಲ್ಲಿ ಸರಿಯಾದ ಹಂಚಿಕೆ ಮಾಡಲಾರದು ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಹಾಗಾಗಿ ಅವರಿಗೆ ಉದಾರವಾದೀ ಆರ್ಥಿಕ ನೀತಿಯ ಬಗ್ಗೆ ತೀವ್ರವಾದ ಆಕ್ಷೇಪಣೆಗಳಿದ್ದವು.

ಪ್ರಧಾನಿ ನೆಹರೂ ಅವರ ಜೊತೆಯಲ್ಲಿ ಚರ್ಚಿಸುತ್ತಿರುವ ಮಹಾಲನೊಬಿಸ್



ಸರ್ಕಾರ ಹೂಡಿಕೆ ಮಾಡುವುದರ ಜೊತೆಗೆ ಯಾವ ಕ್ಷೇತ್ರಗಳಲ್ಲಿ ಮಾಡಬೇಕು ಎಂಬುದನ್ನು ನಿರ್ಧರಿಸಬೇಕು. ಅದೂ ಅಷ್ಟೇ ಮುಖ್ಯ. ಭಾರತದಂತಹ ದೇಶಗಳಲ್ಲಿ ಕಾರ್ಮಿಕರು ಹೆಚ್ಚಿದ್ದರೂ, ಕೇವಲ ಕಾರ್ಮಿಕ-ಪ್ರಧಾನ ತಂತ್ರಜ್ಞಾನಗಳನ್ನು ಬಳಸಿದರೆ ದೀರ್ಘಕಾಲೀನ ಬೆಳವಣಿಗೆ ನಿಧಾನವಾಗಬಹುದು. ಬಂಡವಾಳ-ಪ್ರಧಾನ ಕೈಗಾರಿಕೆಗಳಿಂದ (ಉದಾಹರಣೆಗೆ ಉಕ್ಕು, ಯಂತ್ರೋಪಕರಣ) ಮುಂದೆ ಹೆಚ್ಚಿನ ಲಾಭ ಹೆಚ್ಚುತ್ತದೆ. ಹಾಗೆಯೇ ಉಳಿತಾಯವೂ ಹೆಚ್ಚುತ್ತದೆ. ಅವು ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸುತ್ತವೆ. ಸರ್ಕಾರ ಹಮ್ಮಿಕೊಳ್ಳುವ ಅಭಿವೃದ್ಧಿ ಯೋಜನೆಗಳು ಬೃಹತ್ ಕೈಗಾರಿಕೆಗಳು ಮತ್ತು ಕೃಷಿ ಕ್ಷೇತ್ರದ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಬೇಕು. ಒಟ್ಟಿನಲ್ಲಿ ಆರ್ಥಿಕತೆಯ ಬೆಳವಣಿಗೆಯಲ್ಲಿ ಸರ್ಕಾರದ ನಿರ್ಧಾರ ಹಾಗೂ ಯೋಜನೆ ಪ್ರಮುಖ ಪಾತ್ರವಹಿಸುತ್ತದೆ ಎಂದು ಚಕ್ರವರ್ತಿ ವಾದಿಸಿದ್ದರು.

ಮಹಾಲನೋಬಿಸ್ ಮಾದರಿಯ ಅನುಮೋದನೆ:

ಸುಖಮೋಯ್ ಅವರು ನಿರ್ದಿಷ್ಟ ಕಾಲಾವಧಿಯಲ್ಲಿ ಗರಿಷ್ಠ ಉಳಿತಾಯವನ್ನು ಸಾಧಿಸುವುದಕ್ಕೆ ಸಂಬಂಧಿಸಿದಂತೆ ಮಾಡಿದ ಅಧ್ಯಯನಗಳು ತುಂಬಾ ಮಹತ್ವದ್ದು. ಗರಿಷ್ಠ ಬೆಳವಣಿಗೆಗೆ ಸಂಬಂದಿಸಿದಂತೆ ಎರಡು ರೀತಿಯ ಅಧ್ಯಯನಗಳು ಆಗ ಚಾಲ್ತಿಯಲ್ಲಿದ್ದವು.

1. ನಿರ್ದಿಷ್ಟ ಸಂಪನ್ಮೂಲಗಳನ್ನು ಬಳಸಿಕೊಂಡು ನಿಗದಿತ ಉತ್ಪಾದನೆಯನ್ನು ಕನಿಷ್ಠ ಸಮಯದಲ್ಲಿ ಸಾಧಿಸಬೇಕು. ಅಂದರೆ ನಿಮಗೆ ಪ್ರಾರಂಭದಲ್ಲೇ ಲಭ್ಯವಿರುವ ಸಂಪನ್ಮೂಲದ ಬಗ್ಗೆ ಹಾಗೂ ಅಂತಿಮವಾಗಿ ತಯಾರಾಗಬೇಕಾದ ಉತ್ಪನ್ನಗಳ ಬಗ್ಗೆಯೂ ಮಾಹಿತಿ ಇರುತ್ತದೆ. ಅವು ಮೊದಲೇ ನಿರ್ಧಾರವಾಗಿರುತ್ತದೆ. ಸಮಸ್ಯೆ ಇರುವುದು ಇರುವ ಸಂಪನ್ಮೂಲವನ್ನು ಬಳಸಿಕೊಂಡು ಗರಿಷ್ಠ ಬೆಳವಣಿಗೆಯನ್ನು ಕನಿಷ್ಠ ಸಮಯದಲ್ಲಿ ಸಾಧಿಸಬೇಕು. ಅವಧಿಯನ್ನು ಕಡಿಮೆ ಮಾಡುವುದು ಇಲ್ಲಿ ಮುಖ್ಯ. ಅದರ ಸಾಮಾಜಿಕ ಉಪಯುಕ್ತತೆ ಇಲ್ಲಿ ಮುಖ್ಯವಾಗುವುದಿಲ್ಲ. ಇದಕ್ಕೆ ಚಕ್ರವರ್ತಿಯವರು ಟರ್ನ್‌ಪೈಕ್ ಪ್ರಮೇಯವನ್ನು ಬಳಸಿಕೊಂಡರು. ಟರ್ನ್‌ಪೈಕ್ ಅಂದರೆ ವೇಗವಾಗಿ ಚಲಿಸುವುದಕ್ಕೆ ಅನುಕೂಲವಾದ ಹೈವೆ. ಮೊದಲು ಹೈವೆಯಲ್ಲಿ ವೇಗವಾಗಿ ಪ್ರಯಾಣಿಸಿ ನಿಮ್ಮ ಊರು ಸಮೀಪ ಬರುತ್ತಿದ್ದಂತೆ ಬೇರೆ ದಾರಿಯನ್ನು ಹಿಡಿಯುವುದು ಗುರಿಯನ್ನು ವೇಗವಾಗಿ ತಲುಪುವುದಕ್ಕೆ ಉತ್ತಮ ಮಾರ್ಗ ಎಂದು ಈ ಪ್ರಮೇಯ ಸೂಚಿಸುತ್ತದೆ. ಅದನ್ನು ಅರ್ಥಶಾಸ್ತ್ರಕ್ಕೆ ಅನ್ವಯಿಸಿದರೆ ನಮಗೆ ಭವಿಷ್ಯದಲ್ಲಿ ಹೆಚ್ಚಿನ ಅನುಭೋಗಿ ವಸ್ತುಗಳು (ಬಟ್ಟೆ, ಆಹಾರ ಇತ್ಯಾದಿ) ಬೇಕು ಅಂತ ಭಾವಿಸಿಕೊಳ್ಳೋಣ. ಅದಕ್ಕೆ ನೇರವಾಗಿ ಪ್ರಯತ್ನಿಸದೆ ಮೊದಲು ಬಂಡವಾಳ ಸರಕುಗಳನ್ನು (ಯಂತ್ರೋಪಕರಣಗಳು, ಉಕ್ಕು ಇತ್ಯಾದಿ) ವೇಗವಾಗಿ ಉತ್ಪಾದಿಸುವುದಕ್ಕೆ ಕ್ರಮತೆಗೆದುಕೊಳ್ಳಬೇಕು. ನಂತರ

ಉದಾರೀಕರಣದ ನೀತಿಯನ್ನು ಒಪ್ಪದ ಸುಖಮೋಯ್

ಸುಖಮೋಯ್ ಚಕ್ರವರ್ತಿಯವರು 1990ರಲ್ಲಿ ನಿಧನರಾದರು. ಅಂದರೆ ಭಾರತವು 1991ರಲ್ಲಿ ಅಧಿಕೃತವಾಗಿ ನವ ಉದಾರೀಕರಣ ಅಥವಾ ಆರ್ಥಿಕ ಸುಧಾರಣೆಗಳನ್ನು ಅಳವಡಿಸಿಕೊಳ್ಳುವ ಮೊದಲೇ ಅವರು ಕಾಲವಾಗಿದ್ದರು. ಆದರೆ, 80ರ ದಶಕದ ಅಂತ್ಯದಲ್ಲೇ ಜಾಗತಿಕವಾಗಿ ಬೀಸುತ್ತಿದ್ದ ಈ ಆರ್ಥಿಕ ಬದಲಾವಣೆಯ ಗಾಳಿಯನ್ನು ಅವರು ಗುರುತಿಸಿದ್ದರು ಮತ್ತು ಅದರ ಬಗ್ಗೆ ತೀವ್ರವಾದ ಆತಂಕ ಹಾಗೂ ಟೀಕೆಗಳನ್ನು ಹೊಂದಿದ್ದರು.
ನವ ಉದಾರೀಕರಣದ ಕುರಿತು ಅವರ ಪ್ರಮುಖ ಆಕ್ಷೇಪಣೆಗಳು ಇಲ್ಲಿವೆ:

1. **ಯೋಜನಾ ವ್ಯವಸ್ಥೆಯ ಅವನತಿಯ ಭೀತಿ**
ಚಕ್ರವರ್ತಿಯವರು ಯೋಜನಾ ಬದ್ಧ ಆರ್ಥಿಕತೆಯ (Planned Economy) ಬಲವಾದ ಪ್ರತಿಪಾದಕರಾಗಿದ್ದರು. ನವ ಉದಾರೀಕರಣವು ಮಾರುಕಟ್ಟೆಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದರಿಂದ, ದೀರ್ಘಕಾಲದ ಸಾಮಾಜಿಕ ಗುರಿಗಳು (ಬಡತನ ನಿರ್ಮೂಲನೆ, ಮೂಲಭೂತ ಸೌಕರ್ಯ ಅಭಿವೃದ್ಧಿ) ಮೂಲೆಗುಂಪಾಗುತ್ತವೆ ಎಂದು ಅವರು ನಂಬಿದ್ದರು. ಸರ್ಕಾರವು ಆರ್ಥಿಕತೆಯ ಚುಕ್ಕಾಣಿ ಬಿಟ್ಟರೆ, ಸಂಪನ್ಮೂಲಗಳು ಕೇವಲ ಲಾಭದಾಯಕ ಕ್ಷೇತ್ರಗಳಿಗೆ ಮಾತ್ರ ಹರಿಯುತ್ತವೆ ಎಂಬುದು ಅವರ ವಾದವಾಗಿತ್ತು.

2. **ಬಂಡವಾಳ ಸರಕುಗಳ ಉತ್ಪಾದನೆಗೆ ಧಕ್ಕೆ**
ಅವರು ಮಹಾಲನೋಬಿಸ್ ತಂತ್ರದ (ಭಾರೀ ಕೈಗಾರಿಕೆಗಳಿಗೆ ಒತ್ತು ನೀಡುವುದು) ಬೆಂಬಲಿಗರಾಗಿದ್ದರು. ನವ ಉದಾರೀಕರಣವು ಬಂದರೆ, ವಿದೇಶಿ ವಸ್ತುಗಳ ಆಮದು ಸುಲಭವಾಗುತ್ತದೆ. ಇದರಿಂದಾಗಿ ಭಾರತವು ಸ್ವಾವಲಂಬಿಯಾಗಿ ನಿರ್ಮಿಸುತ್ತಿದ್ದ ಬಂಡವಾಳ ಸರಕುಗಳ (Capital Goods) ಉದ್ದಿಮೆಗಳು ಅಂತರರಾಷ್ಟ್ರೀಯ ಸ್ಪರ್ಧೆಯನ್ನು ಎದುರಿಸಲಾರದೆ ನಾಶವಾಗಬಹುದು ಎಂದು ಅವರು ಎಚ್ಚರಿಸಿದ್ದರು.

3. **ಕೃಷಿ ಮತ್ತು ಕೈಗಾರಿಕೆಯ ನಡುವಿನ ಅಸಮತೋಲನ**
ನವ ಉದಾರೀಕರಣದ ಅಡಿಯಲ್ಲಿ ಮಾರುಕಟ್ಟೆಯೇ ಬೆಲೆಗಳನ್ನು ನಿರ್ಧರಿಸುತ್ತದೆ. ಚಕ್ರವರ್ತಿಯವರು ವಾದಿಸಿದಂತೆ, ಕೃಷಿ ಮತ್ತು ಕೈಗಾರಿಕೆಗಳ ನಡುವಿನ 'ವ್ಯಾಪಾರದ ನಿಯಮಗಳನ್ನು' ಮಾರುಕಟ್ಟೆ ನಿರ್ಧರಿಸುವಂತಾದರೆ, ಅದು ಸಮಾಜದ ಬಡವರ್ಗದ ಮೇಲೆ ಅಥವಾ ಕೃಷಿ ವಲಯದ ಮೇಲೆ ಗಂಭೀರ ಪರಿಣಾಮ ಬೀರಬಹುದು. ಸರ್ಕಾರದ ಹಸ್ತಕ್ಷೇಪವಿಲ್ಲದೆ ಈ ಎರಡು ವಲಯಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಅಸಾಧ್ಯ ಎಂದು ಅವರು ಭಾವಿಸಿದ್ದರು.

4. **ದ್ವಂದ್ವ ಆರ್ಥಿಕತೆ** (Dualism)
ನವ ಉದಾರೀಕರಣವು ದೇಶದಲ್ಲಿ ಎರಡು ತರಹದ ಆರ್ಥಿಕತೆಗಳನ್ನು ಸೃಷ್ಟಿಸುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದರು: ಒಂದು, ಅತ್ಯಂತ ಆಧುನಿಕವಾದ, ಜಾಗತಿಕ ಮಾರುಕಟ್ಟೆಯೊಂದಿಗೆ ಸಂಪರ್ಕ ಹೊಂದಿದ ಸಣ್ಣ ವಲಯ. ಇನ್ನೊಂದು, ಸಾಂಪ್ರದಾಯಿಕವಾದ, ಉದ್ಯೋಗವಿಲ್ಲದ ಮತ್ತು ಹಿಂದುಳಿದ ಬೃಹತ್ ವಲಯ. ಈ 'ದ್ವಂದ್ವತೆ'ಯು ಸಾಮಾಜಿಕ ಅಸ್ಥಿರತೆಗೆ ಕಾರಣವಾಗುತ್ತದೆ ಎಂಬುದು ಅವರ ಮುನ್ಸೂಚನೆಯಾಗಿತ್ತು.

5. **ಸಾಮಾಜಿಕ ಪ್ರಯೋಜನದ ನಿರ್ಲಕ್ಷ್ಯ**
ಅರ್ಥಶಾಸ್ತ್ರದಲ್ಲಿ 'ಸೋಶಿಯಲ್ ಯುಟಿಲಿಟಿ' ಎಂಬುದು ಚಕ್ರವರ್ತಿಯವರಿಗೆ ಬಹಳ ಮುಖ್ಯವಾಗಿತ್ತು. ನವ ಉದಾರೀಕರಣವು ಕೇವಲ 'ವೈಯಕ್ತಿಕ ಲಾಭ' ಮತ್ತು 'ದಕ್ಷತೆ'ಯನ್ನು (Efficiency) ಅಳೆಯುತ್ತದೆಯೇ ಹೊರತು, ಸಮಾಜದ ಒಟ್ಟಾರೆ ಸುಖವನ್ನಲ್ಲ. ಅವರು ಇದನ್ನು ಗಣಿತದ ಮಾದರಿಗಳ ಮೂಲಕವೇ ಟೀಕಿಸುತ್ತಿದ್ದರು.

ಈ ಯಂತ್ರೋಪಕರಣಗಳನ್ನು ಬಳಸಿಕೊಂಡು ಅನುಭೋಗಿ ವಸ್ತುಗಳನ್ನು ಹೆಚ್ಚು ವೇಗವಾಗಿ ಉತ್ಪಾದಿಸುವುದಕ್ಕೆ ಸಾಧ್ಯ ಅನ್ನುವುದು ಈ ಪ್ರಮೇಯದ ಹಿಂದಿರುವ ಚಿಂತನೆ. ಭಾರತದ ಎರಡನೇ ಪಂಚವಾರ್ಷಿಕ ಯೋಜನೆ ಪ್ರಶಾಂತ್ ಚಂದ್ರ ಮಹಾಲನೋಬಿಸ್ ಅವರು ರೂಪಿಸಿದ 'ಭಾರೀ ಕೈಗಾರಿಕೆ'ಗಳ ಮಾದರಿಯು ಈ ಟರ್ನ್‌ಪೈಕ್ ತಂತ್ರಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಅವರು ಮೊದಲಿಗೆ ಬಂಡವಾಳ ಸರಕುಗಳನ್ನು (ಯಂತ್ರಗಳು, ಕಟ್ಟಡಗಳು ಇತ್ಯಾದಿ) ವೇಗವಾಗಿ ಉತ್ಪಾದಿಸುವುದಕ್ಕೆ ಆದ್ಯತೆ ನೀಡಿದರು. ನಂತರದಲ್ಲಿ ಆ ಯಂತ್ರಗಳನ್ನು ಬಳಸಿಕೊಂಡು ಅನುಭೋಗಿ ಸರಕುಗಳ ಉತ್ಪಾದನೆಯನ್ನು ವೇಗಗೊಳಿಸುವ ಪ್ರಯತ್ನ ಮಾಡಿದರು. ಹಾಗಾಗಿ ಇದು ಅನುಭೋಗಿ ಸರಕುಗಳ ಉತ್ಪಾದನೆಯನ್ನು ವೇಗಗೊಳಿಸುವುದಕ್ಕೆ ಉತ್ತಮ ಮಾರ್ಗ.

2. ಎರಡನೆಯ ಮಾರ್ಗ ಸಾಮಾಜಿಕ ಉಪಯುಕ್ತತೆಯನ್ನು ಹೆಚ್ಚಿಸುವುದಕ್ಕೆ ಗಮನಕೊಡುತ್ತದೆ. ಸಾಮಾಜಿಕ ಉಪಯುಕ್ತತೆ ಹೆಚ್ಚಬೇಕಾದರೆ ಅನುಭೋಗಿ ಸರಕುಗಳ ಉತ್ಪಾದನೆ ಹೆಚ್ಚಬೇಕು. ಮಹಾಲನೋಬಿಸ್ ಯೋಜನೆಯು ಮೊದಲಿಗೆ ಬಂಡವಾಳ ಸರಕುಗಳ ಉತ್ಪಾದನೆಗೆ ಆದ್ಯತೆ ನೀಡಿದರೂ ಅಂತಿಮವಾಗಿ ಅದರಿಂದ ಅನುಭೋಗಿ ಸರಕುಗಳ ಉತ್ಪಾದನೆಯು ಹೆಚ್ಚುತ್ತದೆ. ಸಹಜವಾಗಿಯೇ ಸಾಮಾಜಿಕ ಉಪಯುಕ್ತತೆ ಹೆಚ್ಚುತ್ತದೆ. ಹಾಗಾಗಿ ಸುಖಮೋಯ್ ಹೇಳುವಂತೆ ಮಹಾಲನೋಬಿಸ್ ಮಾದರಿಯಿಂದ ಅನುಭೋಗಿ ಸರಕುಗಳ ಉತ್ಪಾದನೆಯ ವೇಗವೂ ಹೆಚ್ಚುತ್ತದೆ. ಮತ್ತು ಸಾಮಾಜಿಕ ಉಪಯುಕ್ತತೆಯೂ ಹೆಚ್ಚುತ್ತದೆ. ಹಾಗಾಗಿ ಅದು ಎರಡೂ ಕಾರಣಕ್ಕೆ ಉತ್ತಮ ಮಾರ್ಗ ಎಂದು ಅದನ್ನು ಬೆಂಬಲಿಸಿದರು.

ಸುಖಮೋಯ್ ಹೆಚ್ಚಾಗಿ ಭಾರತೀಯ ಆರ್ಥಿಕತೆಯನ್ನು ಕುರಿತೇ ವಿಶ್ಲೇಷಿಸುತ್ತಿದ್ದರು. ಅವರ ಅಧ್ಯಯನ ಆರ್ಥಿಕತೆಯ ಕಾರ್ಯವೈಖರಿಯ ಬಗ್ಗೆ ಆಳವಾದ ಒಳನೋಟಗಳನ್ನು ನೀಡುತ್ತಿತ್ತು. ಲೂಯಿಸ್ ಮಾದರಿಯ (Lewis Model) ಹಿನ್ನೆಲೆಯಲ್ಲಿ ನೋಡಿದರೆ ಅವರ ಚಿಂತನೆ ಹೆಚ್ಚು ಸ್ಪಷ್ಟವಾಗುತ್ತದೆ. ಲೂಯಿಸ್ ಮಾದರಿಯ ಪ್ರಕಾರ ಹೊಸದಾಗಿ ಹುಟ್ಟಿಕೊಂಡ ಆಧುನಿಕ ಆರ್ಥಿಕತೆಯಲ್ಲಿ ಉತ್ಪಾದಕತೆ ಹೆಚ್ಚಿರುತ್ತದೆ. ಸ್ವಾಭಾವಿಕವಾಗಿಯೇ ಲಾಭವೂ ಹೆಚ್ಚಿರುತ್ತದೆ. ಆ ಹೆಚ್ಚುವರಿ ಲಾಭವನ್ನು ಮರುಹೂಡಿಕೆ ಮಾಡುವುದರಿಂದ ಆರ್ಥಿಕತೆ ಇನ್ನಷ್ಟು ಬೆಳೆಯುತ್ತದೆ. ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತದೆ. ಕೃಷಿ ಕ್ಷೇತ್ರದಲ್ಲಿರುವ ಹೆಚ್ಚಿನ ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ. ಅವರಿಗೆ ನೈಜ ಕೂಲಿಯನ್ನು ಕೊಡುವುದಕ್ಕೂ ಸಾಧ್ಯವಾಗುತ್ತದೆ.

ಆದರೆ ಈ ವಾದವನ್ನು ಕುರಿತಂತೆ ಒಂದು ತಕರಾರು ಇದೆ. ಆಧುನಿಕ ಆರ್ಥಿಕತೆ ಬೆಳೆದಂತೆ ಉತ್ಪಾದನೆಗೆ ಕಾರ್ಮಿಕರ ಬದಲು ಯಂತ್ರಗಳನ್ನು ಬಳಸುವುದಕ್ಕೆ ಪ್ರಾರಂಭಿಸಿದರೆ ಉದ್ಯೋಗ ಸೃಷ್ಟಿಯಾಗುವುದಿಲ್ಲ. ಅಂದರೆ ಗ್ರಾಮೀಣ ಪ್ರದೇಶದ ಕಾರ್ಮಿಕರಿಗೆ ಪಟ್ಟಣಗಳಲ್ಲಿ ಕೆಲಸ ಸಿಗುವುದಿಲ್ಲ. ಅವರು ಕೆಲಸವಿಲ್ಲದೆ ಉಳಿಯುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಲೂಯಿಸ್ ಮಾದರಿ ಅಂದುಕೊಂಡಂತೆ ಗ್ರಾಮೀಣ ಪ್ರದೇಶದ ಶ್ರಮಿಕರಿಗೆ ಪಟ್ಟಣಗಳಲ್ಲಿ ಕೆಲಸ ಸಿಗುವುದಿಲ್ಲ.

ಸುಖಮೋಯ್ ಗ್ರಾಮೀಣ ಪ್ರದೇಶದ ಶ್ರಮಿಕರಿಗೆ ಕೆಲಸ ಸಿಗದಿರುವುದಕ್ಕೆ ಇನ್ನೂ ಒಂದು ಕಾರಣವನ್ನು ಕೊಡುತ್ತಾರೆ. ಆಧುನಿಕ ವಲಯದ ವಿಸ್ತಾರಗೊಳ್ಳಬೇಕಾದರೆ ಅಲ್ಲಿಯ ಕಾರ್ಮಿಕರಿಗೆ ಆಹಾರ ಧಾನ್ಯ ಬೇಕಾಗುತ್ತದೆ. ಆಹಾರ ಧಾನ್ಯ ಪಡೆಯಲು ಕಾರ್ಖಾನೆಗಳು ತಮ್ಮ ಉತ್ಪಾದನೆಗಳನ್ನು ಸಾಂಪ್ರದಾಯಿಕ ಕ್ಷೇತ್ರ ಅಂದರೆ ಕೃಷಿ ವಲಯದೊಂದಿಗೆ ವಿನಿಮಯ ಮಾಡಿಕೊಳ್ಳಬೇಕಾಗುತ್ತದೆ. ಅವರ ಲಾಭವೂ ಆಧುನಿಕ ಉತ್ಪನ್ನಗಳನ್ನು ಕೃಷಿ ಉತ್ಪನ್ನಗಳೊಂದಿಗೆ ವಿನಿಮಯ ಮಾಡಿಕೊಳ್ಳುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಅವರಿಗೆ ಹೆಚ್ಚಿನ ಕೈಗಾರಿಕಾ ಸರಕುಗಳನ್ನು ಗ್ರಾಮೀಣ ಪ್ರದೇಶದಲ್ಲಿ ಮಾರುವುದಕ್ಕೆ ಸಾಧ್ಯವಾದರಷ್ಟೇ ಹೆಚ್ಚಿನ ಲಾಭ ಸಾಧ್ಯ. ಲಾಭ ಹೆಚ್ಚಿದರೆ ಮಾತ್ರ ಹೆಚ್ಚಿನ ಮರುಹೂಡಿಕೆ ಸಾಧ್ಯ.

ಕೃಷಿಯ ವೈಫಲ್ಯದಿಂದಲೋ, ಅಥವಾ ಶ್ರೀಮಂತ ರೈತರ ರಾಜಕೀಯ ಒತ್ತಡದಿಂದಲೋ ಆಹಾರದ ಬೆಲೆ ಏರಿದರೆ ಕಾರ್ಖಾನೆಯ ಲಾಭ ಕಡಿಮೆಯಾಗುತ್ತದೆ. ಲಾಭದ ಮರುಹೂಡಿಕೆ ಕಮ್ಮಿಯಾಗುತ್ತದೆ. ಬೆಳವಣಿಗೆಯ ದರ ಕುಂಠಿತಗೊಳ್ಳುತ್ತದೆ. ಇದರಿಂದ ಕಾರ್ಮಿಕರಿಗೆ ಉದ್ಯೋಗದ ಅವಕಾಶ ಕಮ್ಮಿಯಾಗುತ್ತದೆ.

ಒಂದು ವೇಳೆ ಆಹಾರದ ಬೆಲೆ ತುಂಬಾ ಕಡಿಮೆಯಾದರೆ, ರೈತರ ಕೈಯಲ್ಲಿ ಹಣವಿರುವುದಿಲ್ಲ. ಕಾರ್ಖಾನೆಯಲ್ಲಿ ತಯಾರಾದ ಬಟ್ಟೆ, ಸೈಕಲ್ ಅಥವಾ ಇತರ ವಸ್ತುಗಳನ್ನು ಖರೀದಿಸುವವರೇ ರೈತರು. ರೈತರ ಆದಾಯ ಕುಸಿದರೆ ಕಾರ್ಖಾನೆಯ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆಯೇ ಇರುವುದಿಲ್ಲ.

ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ಮಾರುಕಟ್ಟೆಯನ್ನು ಸುಧಾರಿಸಲು ಪ್ರಯತ್ನಿಸಬಹುದು. ಆದರೆ ಸರ್ಕಾರದ ಹೂಡಿಕೆ ತಕ್ಷಣವೇ ಫಲ ನೀಡುವುದಿಲ್ಲ. ಅಲ್ಲದೆ, ರೈತರು ಯಾವ ವಸ್ತುಗಳನ್ನು ಕೊಳ್ಳುವುದನ್ನು ನಿಲ್ಲಿಸಿರುತ್ತಾರೋ, ಸರ್ಕಾರದ ಕ್ರಮದಿಂದ ಆ ಸರಕುಗಳಿಗೆ ಬೇಡಿಕೆ ಹೆಚ್ಚುವ ಖಾತ್ರಿಯಿಲ್ಲ.

ಗೌರವಗಳು ಮತ್ತು ಮಾನ್ಯತೆಗಳು

ಸುಖಮೋಯ್ ಅವರ ಸಾಧನೆಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಪಾರ ಮಾನ್ಯತೆ ದೊರೆಯಿತು. ಅವರಿಗೆ 1974ರಲ್ಲಿ 'ಮಹಾಲನೋಬಿಸ್ ಮೆಮೋರಿಯಲ್ ಗೋಲ್ಡ್ ಮೆಡಲ್' ಮತ್ತು 1978ರಲ್ಲಿ ಸಾಮಾಜಿಕ ವಿಜ್ಞಾನದ 'ವಿ.ಕೆ.ಆರ್.ವಿ. ರಾವ್ ಪ್ರಶಸ್ತಿ' ಲಭಿಸಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರು ಎಕನಾಮೆಟ್ರಿಕ್ ಸೊಸೈಟಿಯ ಫೆಲೋ ಆಗಿ ಆಯ್ಕೆಯಾದರು ಮತ್ತು ಅಂತರಾಷ್ಟ್ರೀಯ ಆರ್ಥಿಕ ಸಂಘದ ಜೀವಮಾನದ ಗೌರವಾನ್ವಿತ ಅಧ್ಯಕ್ಷರಾಗಿ ನೇಮಕಗೊಂಡರು.

ಬದಲಾದ ಚಿಂತನೆಯ ಕ್ರಮ

ಸುಖಮೋಯ್ ಅವರ ವ್ಯಕ್ತಿತ್ವದಲ್ಲೇ ಬೌದ್ಧಿಕ ಕುತೂಹಲ ಅಪಾರವಾಗಿತ್ತು. ಜಗತ್ತನ್ನು ಸುಧಾರಿಸಲು ಜ್ಞಾನಕ್ಕೆ ಇರುವ ಶಕ್ತಿಯ ಬಗ್ಗೆ ಅಚಲವಾದ ನಂಬಿಕೆಯಿತ್ತು. ರಾಜಕೀಯವಾಗಿ ಅವರನ್ನು 'Skeptically Left' (ಸಂದೇಹವಾದಿ ಎಡಪಂಥೀಯ) ಎಂದು ಕರೆಯಬಹುದು.

ಆರಂಭದ ವರ್ಷಗಳಲ್ಲಿ ಸುಖಮೋಯ್ ಅವರಿಗೆ ಗಣಿತೀಯ ತರ್ಕದ ವ್ಯಾಪ್ತಿ ಮತ್ತು ಅದರ ಪ್ರಸ್ತುತತೆಯ ಬಗ್ಗೆ ಅಪಾರ ನಂಬಿಕೆಯಿತ್ತು. ಮಹಾಲನೋಬಿಸ್ ಅವರ ಪರಿಮಾಣಾತ್ಮಕ ಯೋಜನಾ ಮಾದರಿಗಳತ್ತ ಅವರಿಗಿದ್ದ ಆರಂಭಿಕ ಆಕರ್ಷಣೆಗೂ ಅದೇ ಮುಖ್ಯ ಕಾರಣವಾಗಿತ್ತು. ಮಹಾಲನೋಬಿಸ್ ಮಾದರಿಗಳು ಅಂದು ಭಾರತೀಯ ಅರ್ಥಶಾಸ್ತ್ರದ ಅಧ್ಯಯನಗಳಲ್ಲಿ ಪ್ರಚಲಿತದಲ್ಲಿದ್ದ ಅನೌಪಚಾರಿಕ ತರ್ಕಕ್ಕಿಂತ ಹೆಚ್ಚು ಗಣಿತೀಯ ಮಾಡೆಲುಗಳನ್ನು ಬಳಸುತ್ತಿದ್ದವು. ಆದರೆ 1960ರ ದಶಕದ ಅಂತ್ಯದ ವೇಳೆಗೆ, ಕೇವಲ


ಔಪಚಾರಿಕ ಗಣಿತದ ಮಾಡೆಲ್ಲುಗಳನ್ನು ಬಳಸಿ ವಾಸ್ತವವನ್ನು ಬದಲಿಸುವುದಕ್ಕೆ ಸಾಧ್ಯವಿಲ್ಲ ಅನ್ನುವ ಅರಿವು ಅವರಲ್ಲಿ ಮೂಡಿತು. ಈ ಕಾರಣದಿಂದಾಗಿ ಅವರು ಗಣಿತಕ್ಕಿಂತ ಹೆಚ್ಚಾಗಿ ಸಾಂಸ್ಥಿಕ (Institutional) ಮತ್ತು ಐತಿಹಾಸಿಕ ಅರಿವಿನ ಕಡೆ ವಾಲಿದರು. ಅವರು ಅರ್ಥಶಾಸ್ತ್ರವನ್ನು ಹೆಚ್ಚು ಐತಿಹಾಸಿಕ ಮತ್ತು ಸಾಂಸ್ಥಿಕ ಹಿನ್ನೆಲೆಯಲ್ಲಿ ಮರುನಿರ್ಮಾಣ ಮಾಡುವ ದೊಡ್ಡ ಯೋಜನೆಯನ್ನು ಹಾಕಿಕೊಂಡಿದ್ದರು. ಆದರೆ ಅವರ ಅಕಾಲಿಕ ಮರಣದಿಂದಾಗಿ ಆ ಮಹತ್ತರ ಕೆಲಸ ನಿಂತು ಹೋಯಿತು.

ಸಮಾಜವು ಎದುರಿಸುತ್ತಿರುವ ಸಾಮಾಜಿಕ ವಾಸ್ತವದಿಂದ ಹೊರಗುಳಿದು, ಕೇವಲ 'ಶುದ್ಧ ಸಿದ್ಧಾಂತ'ದಿಂದ (Pure Theory) ಏನನ್ನೂ ಸಾಧಿಸಲಾಗದು ಎಂಬುದು ಅವರ ನಿಲುವಾಗಿತ್ತು. ವಾಸ್ತವ ಜೀವನದ ಸಂದರ್ಭಗಳಿಗೆ ಹತ್ತಿರವಾಗಬೇಕಾದ ಅಗತ್ಯವನ್ನು ಅವರು ಕಂಡುಕೊಂಡರು. ಅವರ ಆನಂತರದ ಕೃತಿಗಳು ಹೆಚ್ಚು ಪ್ರಾಯೋಗಿಕವಾಗಿದ್ದವು ಮತ್ತು ವಿಶೇಷವಾಗಿ ಭಾರತಕ್ಕೆ ಸಂಬಂಧಿಸಿದ್ದವು.

ಸೇನ್ ಗುರುತಿಸಿರುವಂತೆ "ಕೊನೆಕೊನೆಯಲ್ಲಿ, ಔಪಚಾರಿಕ ಮಾದರಿಗಳ ಪ್ರಾಯೋಗಿಕ ಪ್ರಸ್ತುತತೆಯ ಬಗ್ಗೆ ಸುಖಮೋಯ್ ಅವರು ನಂಬಿಕೆ ಕಳೆದುಕೊಳ್ಳತೊಡಗಿದರು. ಆ ಸಮಯದಲ್ಲಿ ಅವರ ಮುಂದೆ ಮೂರು ಸಾಧ್ಯತೆಗಳಿದ್ದವು. ಮೊದಲನೆಯದಾಗಿ, ವಾಸ್ತವ ಪ್ರಪಂಚದ ಬದಲಾವಣೆಯ ಬಗ್ಗೆ ಚಿಂತಿಸದೆ ಒಬ್ಬ 'ಶುದ್ಧ ಸಿದ್ಧಾಂತಿ'ಯಾಗಿ ಉಳಿಯಬಹುದಿತ್ತು. ಆದರೆ ಇದಕ್ಕವರು ಎಂದೂ ತಯಾರಿರಲಿಲ್ಲ. ಎರಡನೆಯದಾಗಿ, ಬೇರೆ ಬಗೆಯ ಔಪಚಾರಿಕ ಸಿದ್ಧಾಂತಗಳು ಮತ್ತು ಗಣಿತೀಯ ತರ್ಕಗಳಿಗಾಗಿ ಅವರು ಹುಡುಕಾಡಬಹುದಿತ್ತು. ಆದರೆ ಅವರು ಈ ಹಾದಿಯನ್ನು ಹಿಡಿಯಲಿಲ್ಲ. ಆ ಬಗೆಯ ಸಾಧ್ಯತೆಯ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದರು ಅನಿಸುತ್ತದೆ. ಮೂರನೆಯ ದಾರಿ ಗಣಿತೀಯ ತರ್ಕದಿಂದ ದೂರ ಸರಿದು, ಬೇರೆ ಮೂಲಗಳಿಂದ ಒಳನೋಟಗಳನ್ನು ಹುಡುಕುವುದು. ವಾಸ್ತವವಾಗಿ ಅವರು ಮಾಡಿದ್ದೂ ಅದನ್ನೇ. ಆದರೆ ಈ ಬದಲಾವಣೆಯು ಕ್ರಮೇಣವಾಗಿ ಆಯಿತು. ಹಾಗಾಗಿ ತಕ್ಷಣ ತಿಳಿಯುತ್ತಿರಲಿಲ್ಲ. ಭಾರತೀಯ ಯೋಜನಾ ಆಯೋಗಕ್ಕೆ ಸೇರಲು ಬಂದ ಆಹ್ವಾನವು ಈ ಬದಲಾವಣೆಯನ್ನು ತೀವ್ರಗೊಳಿಸಿತು."

ಆದರೆ ವಾಸ್ತವ ಜಗತ್ತಿನಲ್ಲಿ ಬದಲಾವಣೆ ತರುವುದಕ್ಕೆ ಜ್ಞಾನ ಮತ್ತು ತರ್ಕ ಬೇಕು ಅನ್ನುವ ಅವರ ನಂಬಿಕೆಯಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಲಿಲ್ಲ. ಅದು ಮಾತ್ರ ದೃಢವಾಗಿತ್ತು. ಆದರೆ ಜ್ಞಾನವು ಹೆಚ್ಚು ಸಾಂಸ್ಥಿಕ ಮತ್ತು ಐತಿಹಾಸಿಕವಾಗಿರಬೇಕು; ತರ್ಕ ಅಷ್ಟೊಂದು ಔಪಚಾರಿಕವಾಗಿರಬಾರದು; ಮತ್ತು ಪ್ರಮುಖ ಪರಿಕಲ್ಪನೆಗಳಿಗೆ ಒತ್ತು ನೀಡುವಂತಿರಬೇಕು ಎಂದು ಭಾವಿಸಿದ್ದರು.

ಅವರಲ್ಲಿ ನಿರಂತರ ಹುಡುಕಾಟದ ಪ್ರವೃತ್ತಿ ಕೊನೆಯವರೆಗೂ ಇತ್ತು. ಅವರ ಅಕಾಲಿಕ ಮರಣದಿಂದಾಗಿ ಅರ್ಥಶಾಸ್ತ್ರದ ಸಿದ್ಧಾಂತದ ಮರುನಿರ್ಮಾಣದ ಕಾರ್ಯವು ಅಪೂರ್ಣವಾಗಿ ಉಳಿಯಿತು. ಅದು ಅರ್ಥಶಾಸ್ತ್ರ ಜಗತ್ತಿಗೆ ದೊಡ್ಡ ನಷ್ಟ. ಸೇನ್ ಅವರು ಹೇಳುವಂತೆ "ಇತರರು ಬೆಳೆಸಬಹುದಾದ ಅನೇಕ ಒಳನೋಟಗಳನ್ನು ಅವರು ಬಿಟ್ಟುಹೋಗಿದ್ದಾರೆ. ಆದರೆ ಸುಖಮೋಯ್ ಅವರೇ ಇದ್ದು ಈ ವಿಶ್ಲೇಷಣೆಗಳನ್ನು ಪೂರ್ಣಗೊಳಿಸಿದ್ದರೆ ಚೆನ್ನಾಗಿರುತ್ತಿತ್ತು ಎಂಬ ಹಂಬಲ ಮಾತ್ರ ಉಳಿಯುತ್ತದೆ." ಅವರ ಸಾವು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಜಗತ್ತಿಗೆ ತುಂಬಲಾರದ ನಷ್ಟ. ಆ ಶೂನ್ಯವನ್ನು ತುಂಬಲು ಯಾರಿಂದಲೂ ಸಾಧ್ಯವಿಲ್ಲ.



ಇದು ಎಐ ಬಳಸಿ ಸೃಷ್ಟಿಸಿದ ಚಿತ್ರ.

ಆಕರ

1. Sukhamoy Chakravarty -Structural Macroeconomist Theorist
By Prabhat Patnaik Azim Premzi University
2. Sukhamoy Chakravarty: An Appreciation by Amartya Sen
3. Development Planning The Indian Experience: Sukhamoy Chakravarty

ಅಮರ್ತ್ಯ ಸೇನ್- ಬದುಕು ಹಾಗು ಆಲೋಚನೆಗಳು-೩



ಅಮರ್ತ್ಯ ಸೇನ್ ನಮ್ಮ ನಡುವಿನ ಅಪರೂಪದ ಅರ್ಥಶಾಸ್ತ್ರಜ್ಞ, ತತ್ತ್ವಶಾಸ್ತ್ರಜ್ಞ ಮತ್ತು ಚಿಂತಕ. ಅವರ ಅಧ್ಯಯನದ ಹರವು ತೀರಾ ವಿಶಾಲ. ಅವರ ಬಗ್ಗೆ ಕನ್ನಡದಲ್ಲಿರುವ ಬರಹಗಳು ತುಂಬಾ ಕಡಿಮೆ. ಅವರ ಬದುಕು ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಪ್ರಾರಂಭವಾಗಿರುವ ಸರಣಿಯ ಮೂರನೆಯ ಭಾಗ ಇದು. ಇದರಲ್ಲಿ ಸಾಮರ್ಥ್ಯವನ್ನು ಕುರಿತ ಅವರ ಚಿಂತನೆಯನ್ನು ಪರಿಚಯಿಸಲಾಗಿದೆ.

ಸಾಮರ್ಥ್ಯದ ಕಣ್ಣಲ್ಲಿ ಬೆಳವಣಿಗೆಯನ್ನು ನೋಡಿದಾಗ

ಸೇನ್ ಅವರು ಮೂಲತಃ ಅರ್ಥಶಾಸ್ತ್ರಜ್ಞರಾಗಿ ತರಬೇತಿ ಪಡೆದವರು. ಇಂಗ್ಲೆಂಡ್, ಅಮೇರಿಕೆ ಹಾಗೂ ಭಾರತದಲ್ಲಿ ಅರ್ಥಶಾಸ್ತ್ರ ವಿಭಾಗದ ಉನ್ನತ ಹುದ್ದೆಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡಿದ್ದ ಅನುಭವ ಅವರದು. ಅರವತ್ತರ ದಶಕದಲ್ಲಿ ಅವರು ಉಪಯುಕ್ತವಾದಕ್ಕೆ (utilitarianism) ಸಂಬಂಧಿಸಿದಂತೆ ಬಂದಿದ್ದ ಕೆಲವು ಪ್ರಮುಖ ತಾತ್ವಿಕ ಪ್ರತಿಕ್ರಿಯೆಗಳನ್ನು ಸಂಶೋಧಿಸಲು ಪ್ರಾರಂಭಿಸಿದ್ದರು. ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನಲ್ಲಿ ಅವರಿಗೆ 'ಪ್ರೈಜ್ ಫೆಲೋಶಿಪ್' ಸಿಕ್ಕಾಗ ಆ ಬಗ್ಗೆ ಅಧ್ಯಯನ ಮಾಡುವುದಕ್ಕೆ ಒಂದು ಸೊಗಸಾದ ಅವಕಾಶ ಸಿಕ್ಕಂತಾಯಿತು. ಅವರಿಗೆ ಯಾವುದೇ ನಿಬಂಧನೆಗಳು ಇರಲಿಲ್ಲ. ಸಂಪೂರ್ಣ ಸ್ವಾತಂತ್ರ್ಯವಿತ್ತು. ಯಾರಿಗೂ ವಿವರಣೆ ಕೊಡಬೇಕಾದ ಅವಶ್ಯಕತೆಯಿರಲಿಲ್ಲ. ಅಲ್ಲಿಯವರೆಗೂ ತಮ್ಮ ಅಧ್ಯಯನವನ್ನು ಅರ್ಥಶಾಸ್ತ್ರ ಮತ್ತು ಅಭಿವೃದ್ಧಿಗೆ ಸೀಮಿತಗೊಳಿಸಿಕೊಂಡಿದ್ದ ಸೇನ್ ತಾತ್ವಿಕ ವಿಶ್ಲೇಷಣೆಯನ್ನು (philosophical analysis) ಕುರಿತು ಅಧ್ಯಯನ ಪ್ರಾರಂಭಿಸಿದರು. ಆ ಕ್ಷೇತ್ರದಲ್ಲೂ ಅವರಿಗೆ ಪ್ರಮುಖ ಕೊಡುಗೆ ನೀಡುವುದಕ್ಕೆ ಸಾಧ್ಯವಾಯಿತು.


ಅಮರ್ತ್ಯ ಸೇನ್ ಅವರು 1960 ಮತ್ತು 1970ರ ದಶಕದ ಬಹುಭಾಗವನ್ನು ಅರ್ಥಶಾಸ್ತ್ರದ ಅತ್ಯಂತ ಪ್ರಮುಖ ಮೂಲಕಲ್ಪನೆಗಳನ್ನು ಟೀಕಿಸುವುದರಲ್ಲಿ ಕಳೆದರು. ಅವರು ಮುಖ್ಯವಾಗಿ ಉಪಯುಕ್ತತಾವಾದ (utilitarianism) ಮತ್ತು ಅದರಿಂದ ಹುಟ್ಟಿಕೊಂಡ ಕಲ್ಯಾಣವಾದವನ್ನು (welfarism) ವಿಮರ್ಶಾತ್ಮಕವಾಗಿ ಪರಿಶೀಲಿಸಿದರು. ಅವರು ಈ ಬಗ್ಗೆ ನಡೆಸಿದ ಅಧ್ಯಯನ ಆಧುನಿಕ ಕಲ್ಯಾಣ ಅರ್ಥಶಾಸ್ತ್ರ ಮತ್ತು ರಾಜಕೀಯ ತತ್ವಶಾಸ್ತ್ರದ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಯಿತು. ಆ ಬಗ್ಗೆ ಈಗಾಗಲೇ ಇದ್ದ ಓದನ್ನು ವಿಸ್ತರಿಸಿದರು. ಹಲವು ನ್ಯೂನತೆಗಳನ್ನು ಗಮನಿಸಿದರು.

ಎಲ್ಲರಿಗೂ ಗರಿಷ್ಠ "ಸಂತೋಷ" ಅಥವಾ "ಪ್ರಯೋಜನ"ವನ್ನು ನೀಡುವ ಕ್ರಿಯೆಯನ್ನು ಉಪಯುಕ್ತತಾವಾದವು ಉತ್ತಮ ಕ್ರಿಯೆ ಎಂದು ಭಾವಿಸುತ್ತದೆ. ಮೇಲ್ನೋಟಕ್ಕೆ ಇದು ನ್ಯಾಯಯುತವಾಗಿ ಕಂಡರೂ, ಅದು ನೈತಿಕವಾಗಿ ಬಹಳ ಅಸ್ಥಿರ ಎಂದು ಅವರಿಗೆ ತೋರಿತು. ಅದು ಉಪಯುಕ್ತತೆಯ ಒಟ್ಟು ಮೊತ್ತವನ್ನು ಗಣನೆಗೆ ತೆಗೆದುಕೊಳ್ಳುತ್ತಿತ್ತು. ಹಾಗಾಗಿ ಅದು ಪರಿಗಣನೆಗೆ ತೆಗೆದುಕೊಳ್ಳುವ ಮಾಹಿತಿಯೂ ಸೇನ್ ಅವರಿಗೆ ತುಂಬಾ ಸೀಮಿತವಾಗಿ ತೋರಿತು. ಜೊತೆಗೆ ಅದು ಜನರ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಒಂದು ವೇಳೆ ಅಲ್ಪಸಂಖ್ಯಾತರನ್ನು ತುಳಿಯುವುದರಿಂದ ಒಟ್ಟು ಸಂತೋಷ ಹೆಚ್ಚುವುದಾದರೆ ಉಪಯುಕ್ತತಾವಾದದ ಪ್ರಕಾರ ಅದು ಸಮರ್ಥನೀಯವಾಗಿತ್ತು. ಆದರೆ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಕೇವಲ ಉಪಯುಕ್ತತೆಯ ಲೆಕ್ಕಾಚಾರಕ್ಕೆ ಬಲಿಕೊಡುವುದು ಸೇನ್ ಅವರಿಗೆ ಸರಿಯನಿಸಲಿಲ್ಲ. ಕೇವಲ ಒಟ್ಟು ಪ್ರಯೋಜನವನ್ನು ನೋಡುವುದಕ್ಕಿಂತ ಅದು ಜನರಲ್ಲಿ ಹೇಗೆ ಹಂಚಿಕೆಯಾಗಿದೆ ಎಂಬುದನ್ನೂ ನೋಡಬೇಕು ಎನ್ನುವುದು ಸೇನ್ ಅವರ ಸ್ಪಷ್ಟ ನಿಲುವಾಗಿತ್ತು.

ಉಪಯುಕ್ತತಾವಾದ (utilitarianism) ಮತ್ತು ಕಲ್ಯಾಣವಾದ (welfarism) ಇವೆರಡರ ಕೊರತೆಗಳನ್ನು ಕಂಡುಕೊಂಡಿದ್ದ ಸೇನ್ ಪರ್ಯಾಯಕ್ಕಾಗಿ ಹುಡುಕುತ್ತಿದ್ದರು. ಜಾನ್ ರಾಲ್ಸ್ ಅವರ 'ನ್ಯಾಯದ ಸಿದ್ಧಾಂತ' (Theory of Justice, 1973) ಇಂತಹ ಪರ್ಯಾಯ ಸಿದ್ಧಾಂತಕ್ಕೆ ಒಂದು ಅಡಿಪಾಯ ಒದಗಿಸಬಲ್ಲುದೇ, ಎಂಬ ಕುತೂಹಲ ಅವರಿಗಿತ್ತು. ರಾಲ್ಸ್ ಅವರ 'ಪ್ರಾಥಮಿಕ ಸರಕುಗಳು' (primary goods) ಎಂಬ ಪರಿಕಲ್ಪನೆಯನ್ನು ಅವರು



ವಿಶೇಷ ಆಸಕ್ತಿಯಿಂದ ಗಮನಿಸಿದರು. ಪ್ರಾಥಮಿಕ ಸರಕುಗಳ ಬಗ್ಗೆ, ಅಂದರೆ 'ಬೇರೆ ಯಾವುದು ಇಲ್ಲದಿದ್ದರೂ ಇದು ಇರಲೇಬೇಕು ಎಂದು ಪ್ರತಿಯೊಬ್ಬರೂ ಬಯಸುವಂತಹ ಸರಕುಗಳ' ಬಗ್ಗೆ ರಾಲ್ಸ್ ಚಿಂತಿಸುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಗೂ ತಾನು ಬಯಸುವಂತಹ ಜೀವನ ನಡೆಸಲು ಅಗತ್ಯವಿರುವ ಪ್ರಾಥಮಿಕ ಸರಕುಗಳು ದೊರೆಯಬೇಕು ಎಂದು ರಾಲ್ಸ್ ಪ್ರತಿಪಾದಿಸಿದರು.
1979ರಲ್ಲಿ ಸೇನ್ ಈ ಎರಡೂ ಪರಿಕಲ್ಪನೆಗಳಿಗೆ ('ಉಪಯುಕ್ತತೆ' ಮತ್ತು 'ಪ್ರಾಥಮಿಕ ಸರಕುಗಳು') ಪರ್ಯಾಯವಾಗಿ ತಮ್ಮ 'ಮೂಲಭೂತ ಸಾಮರ್ಥ್ಯದ ಸಮಾನತೆ' (basic capability equality) ಎಂಬ ಪರಿಕಲ್ಪನೆಯನ್ನು ಮುಂದಿಟ್ಟರು. ಇದನ್ನು ಮೊದಲಿಗೆ ಅವರು 'ಯಾವುದರ ಸಮಾನತೆ?' ಎಂಬ ತಮ್ಮ ಪ್ರಸಿದ್ಧ ಉಪನ್ಯಾಸದಲ್ಲಿ ಪ್ರತಿಪಾದಿಸಿದ್ದರು. ಇಲ್ಲಿ ಅವರ 'ಸಾಮರ್ಥ್ಯದ ದೃಷ್ಟಿಕೋನ' (capability approach) ಸಿದ್ಧಾಂತದ ಮೂಲಸ್ವರೂಪವನ್ನು ಕಾಣಬಹುದಿತ್ತು.



ಕೇಪಬಿಲಿಟಿ – ಸಾಮರ್ಥ್ಯಗಳು

ಲಾರೆನ್ಸ್ ಹ್ಯಾಮಿಲ್ಟನ್ ಈ ಬಗ್ಗೆ ಬರೆಯುತ್ತಾ "ಕೇಪಬಿಲಿಟಿ ಎಂಬ ಪದದ ಬಗ್ಗೆ ಸ್ವತಃ ಸೇನ್ ಅವರಿಗೆ ಅಂತಹ ಸಂತೋಷವಿರಲಿಲ್ಲ. ಪದವು ಕೇಳಲು ಸ್ವಲ್ಪ ವಿಚಿತ್ರವಾಗಿದೆ. ಇದು ಹದಿನೆಂಟನೇ ಶತಮಾನದ ಇಂಗ್ಲಿಷ್ ಭೂದೃಶ್ಯ ವಿನ್ಯಾಸಗಾರ ಲಾನ್ಸೆಲಾಟ್ ಬ್ರೌನ್ ಅವರನ್ನು ನೆನಪಿಸುತ್ತದೆ. ಬ್ರೌನ್ ತೋಟಗಾರಿಕೆಯಲ್ಲಿ ತುಂಬಾ ಪ್ರಸಿದ್ಧನಾಗಿದ್ದ. ಅವನನ್ನು 'ಕೇಪಬಿಲಿಟಿ ಬ್ರೌನ್' ಎಂದೇ ಕರೆಯುತ್ತಿದ್ದರು. ಆತ ತನ್ನೆಲ್ಲ ಗ್ರಾಹಕರಿಗೆ 'ನಿಮ್ಮ ಜಮೀನನ್ನು ಇನ್ನೂ ಸುಧಾರಿಸಬಹುದು. ಆ ಜಮೀನಿಗೆ ಆ 'ಕೇಪಬಿಲಿಟಿ' ಇದೆ' ಎಂದು ಯಾವಾಗಲೂ ಹೇಳುತ್ತಿದ್ದ. ಹಾಗಾಗಿ ಕೇಪಬಿಲಿಟಿ ಅನ್ನುವುದು ಅವನ ಹೆಸರಿಗೆ ಅಂಟಿಕೊಂಡು ಅವನ ಅನ್ವರ್ಥನಾಮವಾಗಿತ್ತು. ಭೂಮಿಗೆ ಆ ಸಾಧ್ಯತೆ (ಪೊಟೆನ್ಷಿಯಲ್) ಇದೆ ಅನ್ನುವ ಅರ್ಥದಲ್ಲಿ ಬ್ರೌನ್ ಈ ಪದವನ್ನು ಬಳಸುತ್ತಿದ್ದ. ಅಮರ್ತ್ಯ ಸೇನ್ ಅವರು 'ಕೇಪಬಿಲಿಟಿ' ಅನ್ನುವುದನ್ನು ಸರಳವಾಗಿ 'ಸಾಧ್ಯತೆ' ಅಂತ ಅರ್ಥ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಕ್ಯಾಪಬಿಲಿಟಿಯನ್ನು ಅಬಿಲಿಟಿ–ಶಕ್ತಿ ಅನ್ನುವ ಅರ್ಥದಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ "ಈ ಕೆಲಸ ನನ್ನ ಸಾಮರ್ಥ್ಯಕ್ಕೆ ಮೀರಿದ್ದು", "ಜನರಲ್ಲಿ ಇರುವ ಅತ್ಯುತ್ತಮ ಪ್ರತಿಭೆಯನ್ನು ಹೊರತರಬಲ್ಲ ಸಾಮರ್ಥ್ಯ ಅವನಿಗಿದೆ", ಇತ್ಯಾದಿ ಸಂದರ್ಭಗಳನ್ನು ನೋಡಬಹುದು.

'ಕೇಪಬಿಲಿಟಿ–ಸಾಮರ್ಥ್ಯ' ಅನ್ನುವುದು 'ಅಬಿಲಿಟಿ– ಶಕ್ತಿ' ಅನ್ನುವುದಕ್ಕಿಂತ ಹೆಚ್ಚು ವಿಶಾಲವಾದದ್ದು. ಅಬಿಲಿಟಿ ಅಥವಾ ಶಕ್ತಿ ಅನ್ನುವುದು ಒಬ್ಬ ವ್ಯಕ್ತಿಯ ಸ್ವಂತ ಕೌಶಲ ಅಥವಾ ಶಕ್ತಿಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿಗೆ ಓದುವುದಕ್ಕೆ, ಸೈಕಲ್ ಓಡಿಸುವುದಕ್ಕೆ, ಈಜುವುದಕ್ಕೆ ಇರುವ ಶಕ್ತಿಯನ್ನು ಇದು ಸೂಚಿಸುತ್ತದೆ. ಇನ್ನು ಪೊಟೆನ್ಷಿಯಲ್ ಅಥವಾ ಸಾಧ್ಯತೆ ಅಂದರೆ ಇದು ಇನ್ನೂ ಆಗಿಲ್ಲ, ಆಗುವ ಸಾಧ್ಯತೆ ಇದೆ ಅನ್ನುವ ಭವಿಷ್ಯದ ನೋಟವನ್ನು ಸೂಚಿಸುತ್ತದೆ. ಕೇಪಬಿಲಿಟಿ ಅಥವಾ ಸಾಮರ್ಥ್ಯ ಅನ್ನುವುದು ಕೇವಲ ವೈಯಕ್ತಿಕ ಶಕ್ತಿಯಲ್ಲ, ಬದಲಿಗೆ ಆ ಶಕ್ತಿಯನ್ನು ಬಳಸಲು ಸಮಾಜ ನೀಡುವ ಅವಕಾಶವನ್ನು ಸೂಚಿಸುತ್ತದೆ. ಸೈಕಲ್ ಓಡಿಸುವ ಕೌಶಲ ಇದ್ದು ಸೈಕಲ್ ಇಲ್ಲದೆ ಹೋದರೆ ಪ್ರಯೋಜನವಿಲ್ಲ. ಕೇವಲ ಸೈಕಲ್ ಓಡಿಸುವ ಶಕ್ತಿ ಇದ್ದರೆ ಸಾಲದು ಓಡಿಸಲು ಸೈಕಲ್ ಕೂಡ




ಇರಬೇಕು. ಅಂದರೆ ಶಕ್ತಿ ಮತ್ತು ಅವಕಾಶ ಎರಡೂ ಇರಬೇಕು. ಸಾಮರ್ಥ್ಯ ಮನುಷ್ಯನ ಈ ಒಟ್ಟಾರೆ ಸಾಧ್ಯತೆಯನ್ನು ಸೂಚಿಸುತ್ತದೆ. ಅದು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಪೂರಕವಾದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಇದ್ದಾಗ ಮಾತ್ರ ಮನುಷ್ಯನಿಗೆ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

ಸೇನ್ ಸಾಮರ್ಥ್ಯದ ಪರಿಕಲ್ಪನೆಯನ್ನು ಪರಿಚಯಿಸಿದ್ದು "ಯಾವುದರ ಸಮಾನತೆ?" ಎನ್ನುವ ಪ್ರಶ್ನೆಯನ್ನು ಚರ್ಚಿಸುವ ಸಂದರ್ಭದಲ್ಲಿ. ನಾವು ಸಮಾನತೆಯ ಬಗ್ಗೆ ಯೋಚಿಸುವಾಗ ಯಾವುದರ ಸಮಾನತೆ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವುದು ಮುಖ್ಯವಾಗುತ್ತದೆ. ಕೇವಲ ಆದಾಯ ಅಥವಾ ಸಂಪನ್ಮೂಲದ ಸಮಾನತೆಯಷ್ಟೇ ಸಾಲುವುದಿಲ್ಲ. ಒಬ್ಬ ವ್ಯಕ್ತಿಗೆ ತಾನು ಮೌಲಿಕವೆಂದು ಭಾವಿಸುವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗಬೇಕು. ಅದೇ ನಿಜವಾದ ಕಲ್ಯಾಣ. ಒಬ್ಬ ವ್ಯಕ್ತಿ ಏನಾಗಬಹುದು ಮತ್ತು ಏನನ್ನು ಮಾಡಬಹುದು ಎನ್ನುವುದನ್ನು 'ಸಾಮರ್ಥ್ಯ' ಪ್ರತಿನಿಧಿಸುತ್ತದೆ. ಒಬ್ಬ ವ್ಯಕ್ತಿ ಏನನ್ನು ಮಾಡುತ್ತಾನೆ ಅಥವಾ ಏನಾಗುತ್ತಾನೆ ಎಂಬುದನ್ನು (ಉದಾ: ಪೌಷ್ಟಿಕ ಆಹಾರ ಸೇವಿಸುವುದು, ಗೌರವದಿಂದ ಬದುಕುವುದು) ಸೂಚಿಸುವುದಕ್ಕೆ ಸೇನ್ 'ಕಾರ್ಯನಿರ್ವಹಣೆಗಳು' (Functioning) ಎಂಬ ಪದವನ್ನು ಬಳಸುತ್ತಾರೆ. ಅದನ್ನು ಸಾಧಿಸಲು ನಮಗಿರುವ ಸಾಮರ್ಥ್ಯವನ್ನು ಸೇನ್ ಕೇಪಬಿಲಿಟಿ ಎಂದು ಕರೆದಿದ್ದಾರೆ. ಇದು ವ್ಯಕ್ತಿಗೆ ಲಭ್ಯವಿರುವ ವಿವಿಧ ಜೀವನ ವಿಧಾನಗಳ ಆಯ್ಕೆಗಳು. ಇದು ಅವನಿಗಿರುವ 'ನೈಜ ಸ್ವಾತಂತ್ರ್ಯ'ವನ್ನು ಸೂಚಿಸುತ್ತದೆ.
ಸೇನ್ ಮಾತುಗಳಲ್ಲಿ ಹೇಳುವುದಾದರೆ,
"ಅಂತಿಮವಾಗಿ, ನಾವು ಯಾವ ರೀತಿಯ ಜೀವನವನ್ನು ನಡೆಸುತ್ತೇವೆ ಮತ್ತು ನಾವು ಏನನ್ನು ಮಾಡಲು ಸಾಧ್ಯ ಅಥವಾ ಸಾಧ್ಯವಿಲ್ಲ, ಏನಾಗಲು ಸಾಧ್ಯ ಅಥವಾ ಸಾಧ್ಯವಿಲ್ಲ ಎಂಬುದರ ಮೇಲೆ ನಮ್ಮ ಗಮನವಿರಬೇಕು. ನಾವು ಸಾಧಿಸಬಹುದಾದ ಅಥವಾ ಸಾಧಿಸಲಾಗದ ವಿವಿಧ ಜೀವನ ಪರಿಸ್ಥಿತಿಗಳನ್ನು ನಾನು 'ಫಂಕ್ಷನಿಂಗ್ಸ್' ಎಂದು ಕರೆದಿದ್ದೇನೆ ಮತ್ತು ಅವುಗಳನ್ನು ಸಾಧಿಸುವ ನಮ್ಮ ಸಾಮರ್ಥ್ಯವನ್ನು 'ಕೇಪಬಿಲಿಟೀಸ್' (ಸಾಮರ್ಥ್ಯಗಳು) ಎಂದು ಕರೆದಿದ್ದೇನೆ."

ಉಪಯುಕ್ತತಾ ಸಿದ್ಧಾಂತ ಹಾಗೂ ಕಲ್ಯಾಣವಾದವನ್ನು ಕುರಿತಂತೆ ಸೇನ್ ಪ್ರಾರಂಭಿಸಿದ ವಿಮರ್ಶೆಯಿಂದಲೇ ಅವರ ಸಾಮರ್ಥ್ಯ ಮತ್ತು ಕಾರ್ಯನಿರ್ವಹಣೆಯನ್ನು ಕುರಿತ ಅಧ್ಯಯನ ಬೆಳೆಯತೊಡಗಿದ್ದು. ಉಪಯುಕ್ತತಾವಾದವೂ ವೈಯಕ್ತಿಕ ಉಪಯುಕ್ತತೆಯನ್ನು ಸುಖ ಸಂತೋಷ ಅಥವಾ ಬಯಕೆಯಂತಹ ಕೆಲವು ಮಾನಸಿಕ ಲಕ್ಷಣಗಳ ಮೂಲಕ ಗ್ರಹಿಸಿಕೊಳ್ಳುತ್ತದೆ. ಆ ಮೂಲಕ ಅದು ದೈಹಿಕ ಪರಿಸ್ಥಿತಿಯನ್ನು ನಿರ್ಲಕ್ಷಿಸುತ್ತದೆ. ಅಂದರೆ ಆ ವ್ಯಕ್ತಿಗೆ ಈ ಸ್ಥಿತಿಯನ್ನು ತಲುಪುವುದಕ್ಕೆ ಎಂತಹ ಸ್ವಾತಂತ್ರ್ಯವಿತ್ತು, ಅವನ ವಸ್ತುನಿಷ್ಠ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಅದು ಗಮನಿಸುವುದಿಲ್ಲ. ಇದನ್ನು ಅವರು ದೈಹಿಕ ಸ್ಥಿತಿಯ ನಿರ್ಲಕ್ಷ್ಯ (Physical-condition neglect) ಎಂದು ಭಾವಿಸುತ್ತಾರೆ. ಅಷ್ಟೇ ಅಲ್ಲ, ಉಪಯುಕ್ತತಾವಾದವೂ ಜನರ ಬಯಕೆಗಳು ನಿರ್ಧಾರಿತವಾಗಿದೆ ಎಂದು ಭಾವಿಸುತ್ತದೆ. ಮಾನಸಿಕ ತೃಪ್ತಿಯನ್ನೇ ಅಭಿವೃದ್ಧಿಯ ಅಳತೆಗೋಲಾಗಿ ಬಳಸುತ್ತದೆ. ಆದರೆ ಜನರ ಬಯಕೆಗಳು ಅವರ ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ರೂಪುಗೊಂಡಿರುತ್ತವೆ. ಪರಿಸ್ಥಿತಿ ಬದಲಾದಂತೆ ಅವರ ಬಯಕೆಗಳೂ ಬದಲಾಗಬಹುದು. ಇಂದಿನ ಬಯಕೆಗಳೇ ಅಂತಿಮವಾದ ಅಥವಾ ಸ್ಥಿರವಾದ ಬಯಕೆಗಳೆಂದು ಭಾವಿಸಿ, ಅದರ ಆಧಾರದ ಮೇಲೆ ನೀತಿಗಳನ್ನು ರೂಪಿಸುವುದನ್ನು ಸೇನ್ ಅವರು ಅಕಾಲಿಕ (Premature) ಎನ್ನುತ್ತಾರೆ.

ಸೇನ್ ಇದಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳನ್ನು ಮುಖ್ಯವಾಗಿ ಗಮನಿಸುತ್ತಾರೆ. ತೀರಾ ಬಡತನದ ಜೀವನ ನಡೆಸುತ್ತಿರುವನೊಬ್ಬನಿಗೆ ತಾನು ಸಂತೋಷವಾಗಿದ್ದೇನೆ ಅಂತ ತೋರಬಹುದು. ಬಹುಶಃ ಅವನು ಹುಟ್ಟಿನಿದಂದಲೇ ಸದಾ ಸಂತೋಷದಿಂದ, ಎಲ್ಲವನ್ನು ಸಕಾರಾತ್ಮಕವಾಗಿ ನೋಡುವ ಸ್ವಾಭಾವದವನಿರಬಹುದು. ಅಥವಾ ಬಡತನದ ಮತ್ತು ಕಷ್ಟದ ಬದುಕಿಗೆ ಒಗ್ಗಿ ಹೋಗಿ, ತನ್ನ ಬಯಕೆಗಳನ್ನು ಅದಕ್ಕೆ ಸರಿಯಾಗಿ ಹೊಂದಿಸಿಕೊಂಡಿರಬಹುದು. ಹಾಗಾಗಿ ಅವನಿಗೆ ತಾನು ಸಂತೋಷವಾಗಿದ್ದೇನೆ ಅಂತ ಅನಿಸುತ್ತಿರಬಹುದು. ಅದರಿಂದ ಸಂತೋಷವನ್ನೇ ಮಾಪನವನ್ನಾಗಿ ನೋಡಿದಾಗ ಅವನು ಸುಖವಾಗಿರುವಂತೆ ತೋರಬಹುದು.

ಕೇವಲ ಜನರ 'ಸಂತೋಷ'ದ ಆಧಾರದ ಮೇಲೆ ಅವರ ಅಭಿವೃದ್ಧಿಯನ್ನು ಅಳೆಯುವುದರಿಂದ ಅದು ಪ್ರಾರಂಭದಲ್ಲೇ ಎಡುವುತ್ತದೆ. ಯಾಕೆಂದರೆ, ಬದುಕಿನ ಪರಿಸ್ಥಿತಿಗೆ ಮನುಷ್ಯರು ಸ್ಪಂದಿಸುವ ರೀತಿಯಲ್ಲೇ ವ್ಯತ್ಯಾಸವಿರುತ್ತದೆ. ಕೆಲವರಿಗೆ ಎಲ್ಲವನ್ನೂ ತಟ್ಟೆಯಲ್ಲಿಟ್ಟು ಕೊಟ್ಟರೂ ಗೊಣಗುವುದನ್ನು ಬಿಡುವುದಿಲ್ಲ. ಇನ್ನು ಕೆಲವರು ಅತ್ಯಂತ ದಾರುಣ ಬದುಕು ನಡೆಸುತ್ತಿದ್ದರೂ



ಹಸನ್ಮುಖಿಯಾಗಿರುತ್ತಾರೆ.

ಈ ಬಗ್ಗೆ ಸೇನ್ ಅವರು ಬಹಳ ಮಾರ್ಮಿಕವಾಗಿ ಹೀಗೆ ಹೇಳುತ್ತಾರೆ: "ಅತೀವ ವಂಚನೆಗೊಳಗಾದ, ಕಷ್ಟದ ಬದುಕನ್ನು ನಡೆಸುತ್ತಿರುವ ವ್ಯಕ್ತಿಯೊಬ್ಬ ತನ್ನ ಕಷ್ಟದ ಸ್ಥಿತಿಯನ್ನು ವಿಧಿಯಾಟವೆಂದು ಒಪ್ಪಿಕೊಂಡರೆ, ಆತ ಮಾನಸಿಕವಾಗಿ ದುಃಸ್ಥಿತಿಯಲ್ಲಿರುವಂತೆ ಕಾಣುವುದಿಲ್ಲ. ದೀರ್ಘಕಾಲದ ಬಡತನದಲ್ಲಿ ಬೆಂದವರು ಸದಾ ಕಾಲ ಗೋಳಾಡುತ್ತಾ ಕೂರುವುದಿಲ್ಲ; ಬದಲಾಗಿ ಅವರು ತಮಗೆ ಸಿಗುವ ಸಣ್ಣಪುಟ್ಟ ಆಸರೆಗಳಲ್ಲೇ ಹಿತ ಕಾಣಲು ಪ್ರಯತ್ನಿಸುತ್ತಾರೆ ಮತ್ತು ತಮ್ಮ ಕನಸುಗಳನ್ನು ವಾಸ್ತವದ ಮಿತಿಗೆ – ಅಂದರೆ ಸಿಗುವ ಅಲ್ಪಸೌಲಭ್ಯಗಳಿಗೆ–ಹೊಂದಾಣಿಕೆ ಮಾಡಿಕೊಳ್ಳುತ್ತಾರೆ." ಸಂತೋಷವನ್ನು ಕ್ಷೇಮದ ಮಾನದಂಡವಾಗಿ ನೋಡುವುದು ಸರಿಯಲ್ಲ. ಜನರು ತಮ್ಮ ಪರಿಸ್ಥಿತಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳುವುದರಿಂದ, 'ಸಂತೋಷ' ಎಂಬುದು ಕ್ಷೇಮದ ಸರಿಯಾದ ಮಾನದಂಡವಲ್ಲ ಎಂದು ಅವರು ವಾದಿಸುತ್ತಾರೆ.

ಅತೀವ ಬಡತನದಲ್ಲಿರುವ ವ್ಯಕ್ತಿ ಅಥವಾ ಪುರುಷಪ್ರಧಾನ ಸಮಾಜದಲ್ಲಿರುವ ಮಹಿಳೆ, ತಮಗೆ ಸಿಗುವ ಅಲ್ಪಸೌಲಭ್ಯಗಳಲ್ಲೇ ತೃಪ್ತಿ ಪಟ್ಟುಕೊಳ್ಳುವುದನ್ನು 'ಕಲಿಯುತ್ತಾರೆ'. ಅವರು ಹೆಚ್ಚಿನದನ್ನು ನಿರೀಕ್ಷಿಸದ ಕಾರಣ, ಅವರು "ನಾವು ಸುಖವಾಗಿದ್ದೇವೆ" ಎಂದು ಹೇಳಬಹುದು. ನಾವು ಉಪಯುಕ್ತತಾ ವಾದವನ್ನು ಅನುಸರಿಸಿ ಹೋದರೆ, "ಅವರು ಸಂತೋಷವಾಗಿದ್ದಾರೆ, ಹಾಗಾಗಿ ಅವರಿಗೆ ಸಹಾಯದ ಅಗತ್ಯವಿಲ್ಲ" ಎಂಬ ತಪ್ಪು ತೀರ್ಮಾನಕ್ಕೆ ಬರಬಹುದು. ಹಾಗಾಗಿ, ಕೇವಲ ಮನುಷ್ಯನ ಮನಸ್ಸಿನ ಸ್ಥಿತಿಯನ್ನು ನೋಡಿ ಆತ ಅಭಿವೃದ್ಧಿ ಹೊಂದಿದ್ದಾನೆ ಎಂದು ತೀರ್ಮಾನಿಸುವುದು ಸರಿಯಲ್ಲ. ಅವನ ಇಂದಿನ ಅಲ್ಪ ಬಯಕೆಗಳನ್ನೇ ನಾವು "ಅಭಿವೃದ್ಧಿಯ ಗುರಿ" ಎಂದು ತೀರ್ಮಾನಿಸುವುದು ತಪ್ಪಾಗುತ್ತದೆ. ಆದ್ದರಿಂದ ನಾವು ಅವರ ಮಾನಸಿಕ ಸ್ಥಿತಿಗಿಂತ ಹೆಚ್ಚಾಗಿ, ಅವರಿಗೆ ವಾಸ್ತವದಲ್ಲಿ ಏನನ್ನು ಮಾಡಲು ಮತ್ತು ಏನಾಗಲು ಸಾಧ್ಯವಿದೆ (ಸಾಮರ್ಥ್ಯಗಳು ಅಥವಾ Capabilities) ಎಂಬುದನ್ನು ನೋಡಬೇಕು.

ಉಪಯುಕ್ತತೆಯನ್ನು ಆಧರಿಸಿದ ಸಿದ್ಧಾಂತಗಳು ಮನುಷ್ಯನ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಜಾನ್ ರಾಲ್ಸ್ ಕೂಡ ಉಪಯುಕ್ತತಾವಾದವನ್ನು ಟೀಕಿಸುವ ಜಾನ್ ರಾಲ್ಸ್ ಜನರ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಮಹತ್ವ ಕೊಡುತ್ತಾರೆ. ಅದಕ್ಕೆ ಪರ್ಯಾಯವಾಗಿ ಅವರು 'ಪ್ರಾಥಮಿಕ ಸರಕುಗಳ' ಸಿದ್ಧಾಂತವನ್ನು ಮುಂದಿಡುತ್ತಾರೆ. ಜಾನ್ ರಾಲ್ಸ್ ಅವರು ಎಲ್ಲರಿಗೂ ಸಮಾನವಾಗಿ 'ಸರಕುಗಳನ್ನು' (Resources/Good) ನೀಡಬೇಕು ಎನ್ನುತ್ತಾರೆ. ಆದರೆ ಸೇನ್ ಇದನ್ನು ಒಪ್ಪುವುದಿಲ್ಲ. ಸೇನ್ ಹೇಳುವಂತೆ ಎಲ್ಲಾ ಮನುಷ್ಯರೂ ಒಂದೇ ಅಲ್ಲ. ಎಲ್ಲರ ಅಗತ್ಯಗಳು ಬೇರೆ ಬೇರೆಯಾಗಿರುತ್ತವೆ. ಉದಾಹರಣೆಗೆ: ಒಬ್ಬ ಆರೋಗ್ಯವಂತ ವ್ಯಕ್ತಿ ಬಳಸುವ ಎಷ್ಟೋ ಸರಕುಗಳು ಒಬ್ಬ ವಿಕಲಚೇತನ ವ್ಯಕ್ತಿಗೆ ಪ್ರಯೋಜನಕ್ಕೆ ಬರದೇ ಹೋಗಬಹುದು. ರಾಲ್ಸ್ ಮಾರ್ಗವನ್ನೇ (ಸರಕು) ಗುರಿ ಎಂದು ಭಾವಿಸುತ್ತಾರೆ. ನೀವು ಕಾಲುಗಳನ್ನು ಬಳಸಲಾರದವನಿಗೆ ಹಾಗೂ ಆರೋಗ್ಯಶಾಲಿ ವ್ಯಕ್ತಿಗಳಿಬ್ಬರಿಗೂ ಸೈಕಲನ್ನು ಕೊಟ್ಟಲ್ಲಿ, ಆಗ ನೀವು ಇಬ್ಬರಿಗೂ ಒಂದೇ ಸರಕನ್ನು ಕೊಡುತ್ತೀರಿ. ಆದರೆ ಇಬ್ಬರಿಗೂ ಸಮಾನವಾದ ಚಲನೆಯನ್ನು ನೀಡಿರುವುದಿಲ್ಲ. ನೀವು ಕೊಡುವ ಸರಕಿನಿಂದ ಆ ವ್ಯಕ್ತಿ ಏನು ಮಾಡಬಲ್ಲ ಅನ್ನುವುದು ನಿಮ್ಮ ಗುರಿಯಾಗಿರಬೇಕು. ಜನರಿಗೆ ಹಣ ಅಥವಾ ಸರಕುಗಳನ್ನು ನೀಡಿದರಷ್ಟೇ ಸಾಲುವುದಿಲ್ಲ. ಅವು ಅವರ ಸಾಮರ್ಥ್ಯವನ್ನು ಹೆಚ್ಚಿಸುವುದೇ ಎಂಬುದನ್ನು ಗಮನಿಸಬೇಕು. ಅಂದರೆ ನಮ್ಮ ಗಮನ "ಸರಕುಗಳಿಗಿಂತ, ಆ ಸರಕುಗಳು ಮನುಷ್ಯರಿಗೆ ಏನು ಮಾಡುತ್ತವೆ" ಎನ್ನುವುದರತ್ತ ಇರಬೇಕು ಅನ್ನುತ್ತಾರೆ. ಅಂದರೆ ಸಮಾನ ಸರಕುಗಳನ್ನು ಕೊಡುವುದರಿಂದ ಸಮಾನ ಸಾಮರ್ಥ್ಯವನ್ನು ನೀಡಿದಂತಾಗುವುದಿಲ್ಲ. ಇದಕ್ಕೆ ಪರ್ಯಾಯವಾಗಿ ಸಾಮರ್ಥ್ಯವನ್ನು ಸಮಾನವಾಗಿ ಹೆಚ್ಚಿಸಬೇಕು ಎಂದು ಸೇನ್ ವಾದಿಸುತ್ತಾರೆ.

ಈ ಚರ್ಚೆಯಲ್ಲಿ ಕಾರ್ಯನಿರ್ವಹಣೆಗಳು (ಫಂಕ್ಷನಿಂಗ್ಸ್) ಅಂದರೆ ನಾವು ಸಾಧಿಸಬಹುದಾದ ಅಥವಾ ಸಾಧಿಸಲಾಗದ ವಿವಿಧ ಜೀವನ ಪರಿಸ್ಥಿತಿಗಳು ಮುಖ್ಯವಾಗುತ್ತವೆ. ಅಂದರೆ ಒಬ್ಬ ವ್ಯಕ್ತಿ ತನ್ನ ಜೀವನದಲ್ಲಿ ಏನಾಗುತ್ತಾನೆ ಅಥವಾ ಅವನಿಗೆ ಏನೆಲ್ಲಾ ಮಾಡಲು ಸಾಧ್ಯವಾಗುತ್ತದೆ ಎಂಬುದು (ಉದಾ: ಅರೋಗ್ಯದಿಂದಿರುವುದು, ಓದಿ ಬರೆಯುವ ಸಾಮರ್ಥ್ಯ, ಗೌರವದಿಂದ ಬದುಕುವುದು) ಮುಖ್ಯವಾಗುತ್ತದೆ. ಇವು ವ್ಯಕ್ತಿಯ ಅಸ್ತಿತ್ವದ ಅವಿಭಾಜ್ಯ

ಅಂಗಗಳಾಗಿದ್ದು, ಒಬ್ಬ ವ್ಯಕ್ತಿಯ ಕ್ಷೇಮವನ್ನು (well-being) ಅಳೆಯುವಾಗ ಈ ಅಂಶಗಳನ್ನು ಮೌಲ್ಯಮಾಪನ ಮಾಡಬೇಕು. ಅದನ್ನು ಸಾಧಿಸಲು ನಮಗಿರುವ ಸಾಮರ್ಥ್ಯವನ್ನು ಸೇನ್ ಕೇಪಬಿಲಿಟಿ ಎಂದು ಕರೆದಿದ್ದಾರೆ. ಇದು ವ್ಯಕ್ತಿಗೆ ಲಭ್ಯವಿರುವ ವಿವಿಧ ಜೀವನ ವಿಧಾನಗಳ ಆಯ್ಕೆಗಳು. ಅಂದರೆ ಅವನಿಗೆ ಆರೋಗ್ಯದಿಂದಿರುವುದಕ್ಕೆ ಆಸ್ಪತ್ರೆ ಅನುಕೂಲ ಇರಬೇಕು, ಪೌಷ್ಟಿಕ ಆಹಾರ ಲಭ್ಯವಿರಬೇಕು, ಹಾಗೆ ಓದು ಬರಹ ಕಲಿಯಲು ಶಾಲೆಯ ಸೌಕರ್ಯ ಇರಬೇಕು. ಇವೆಲ್ಲಾ ಇದ್ದಾಗಷ್ಟೇ ಅವನಿಗೆ ನೈಜ ಸ್ವಾತಂತ್ರವಿದೆ ಎಂದು ಭಾವಿಸಬಹುದು.

ಒಬ್ಬ ವ್ಯಕ್ತಿಯ 'ಸಾಮರ್ಥ್ಯ' (Capability) ಆ ವ್ಯಕ್ತಿಯು ಸಾಧಿಸಬಹುದಾದ ವಿವಿಧ ರೀತಿಯ 'ಕಾರ್ಯನಿರ್ವಹಣೆಗಳ' ಸಂಯೋಜನೆಯನ್ನು ಪ್ರತಿಫಲಿಸುತ್ತದೆ. ಅಂದರೆ, ಲಭ್ಯವಿರುವ ವಿವಿಧ ಜೀವನ ವಿಧಾನಗಳಲ್ಲಿ ಒಂದನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಇದು ಸೂಚಿಸುತ್ತದೆ. ಈ 'ಕಾರ್ಯನಿರ್ವಹಿಸುವ ಸಾಮರ್ಥ್ಯ'ವು ವ್ಯಕ್ತಿಯು ತನಗಿಷ್ಟ ಬಂದ ಜೀವನವನ್ನು ನಡೆಸಲು ಇರುವ ಸ್ವಾತಂತ್ರ್ಯ ಮತ್ತು ಶಕ್ತಿಯನ್ನು ಒಳಗೊಂಡಿರುತ್ತದೆ. ಒಬ್ಬ ವ್ಯಕ್ತಿ ವಾಸ್ತವದಲ್ಲಿ ಮಾಡುವ ಕೆಲಸಗಳು (Actual functioning) ಆತನಿಗೆ ಸಾಧ್ಯವಿರುವ 'ವಿವಿಧ ಸಾಮರ್ಥ್ಯಗಳ ಸಮೂಹದ' (Capability set) ಒಂದು ಭಾಗವಾಗಿರುತ್ತವೆಯೇ ಹೊರತು, ಅದೇ ಸಂಪೂರ್ಣ ಸಾಮರ್ಥ್ಯವಲ್ಲ.

ಸೇನ್ ಅವರು ಸ್ವಾತಂತ್ರ್ಯದ ಮಹತ್ವವನ್ನು ವಿವರಿಸಲು ಒಂದು ಉದಾಹರಣೆ ನೀಡುತ್ತಾರೆ: ಒಬ್ಬ ವ್ಯಕ್ತಿ ಧಾರ್ಮಿಕ ಅಥವಾ ವೈಯಕ್ತಿಕ ಕಾರಣಕ್ಕೆ ಉಪವಾಸ ಮಾಡಬಹುದು. ಇನ್ನೊಬ್ಬ ವ್ಯಕ್ತಿ ಆಹಾರವನ್ನು ಕೊಳ್ಳುವುದಕ್ಕಾಗದೆ ಹಸಿದುಕೊಂಡು ಇರಬಹುದು. ಅಂದರೆ ಅವನು ಅನಿವಾರ್ಯವಾಗಿ ಹಸಿವಿನಿಂದಿದ್ದಾನೆ. ಇಬ್ಬರೂ ದೈಹಿಕವಾಗಿ ಒಂದೇ ಸ್ಥಿತಿಯಲ್ಲಿದ್ದರೂ, ಉಪವಾಸ ಮಾಡುವವನು ಹಸಿವಿನಿಂದ ಸಾಯುವವನಿಗಿಂತ ಉತ್ತಮ ಸ್ಥಿತಿಯಲ್ಲಿದ್ದಾನೆ. ಏಕೆಂದರೆ ಅವನಿಗೆ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆ.

ಸ್ವಂತ ಕ್ಷೇಮ ಮತ್ತು ಕರ್ತೃತ್ವ (Well-being vs. Agency)

ಅಮರ್ತ್ಯ ಸೇನ್ ಚರ್ಚಿಸುವ ಮತ್ತೊಂದು ಮುಖ್ಯ ಪರಿಕಲ್ಪನೆ ಏಜೆನ್ಸಿ ಅಂದರೆ ಕರ್ತೃತ್ವದ ಪರಿಕಲ್ಪನೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಸ್ವಂತ ಕ್ಷೇಮಕ್ಕಿಂತ ಭಿನ್ನವಾದ ಆತ ಮೌಲ್ಯಯುತವೆಂದು ಭಾವಿಸುವ ಉದ್ದೇಶಗಳಿರಬಹುದು. ಇದನ್ನು ಸೇನ್ ಏಜೆನ್ಸಿ ಎಂದು ಕರೆಯುತ್ತಾರೆ. ಉದಾಹರಣೆಗೆ ಇಂಗ್ಲೆಂಡಿನಲ್ಲಿ ದುಡಿಯುತ್ತಿರುವ ಒಬ್ಬ ವೈದ್ಯೆಗೆ ತಾನು ಮಾಡುತ್ತಿರುವ ಕೆಲಸದಿಂದ ಹೆಚ್ಚು ಸಂಬಳ ಸಿಗುತ್ತಿದೆ. ಸುಖದ ಬದುಕು ಕೂಡ ಸಾಧ್ಯವಾಗಿದೆ. ಆದರೆ ಅವಳು ಮಲೇರಿಯಾ ವಿರುದ್ಧ ಹೋರಾಡಲು ಆಫ್ರಿಕಾಕ್ಕೆ ಹೋಗಲು ನಿರ್ಧರಿಸಿದರೆ, ಅವಳ ವೈಯಕ್ತಿಕ ಕ್ಷೇಮ ಕಡಿಮೆಯಾಗುತ್ತದೆ. ಆದರೆ ಅವಳ 'ಕರ್ತೃತ್ವ' ಅಥವಾ ಅವಳು ಬಯಸಿದ ಗುರಿಯ ಸಾಧನೆಗೆ ಹೆಚ್ಚಿನ ಮೌಲ್ಯ ಸಿಗುತ್ತದೆ. ಅಂದರೆ, ಬದುಕು ಎಂದರೆ ತಾವು ಸುಖವಾಗಿರುವುದಷ್ಟೇ ಅಲ್ಲ, ತಮಗೆ ಮೌಲ್ಯಯುತವೆನಿಸುವ ಕೆಲಸಗಳನ್ನು ಮಾಡುವ ಸ್ವಾತಂತ್ರ್ಯವೂ ಇರಬೇಕು. ಉಪಯುಕ್ತತಾವಾದವು ಇಂತಹ ಕ್ರಿಯೆಗಳನ್ನು ಕೇವಲ 'ಸಂತೋಷದ ಇಳಿಕೆ'ಯಾಗಿ ನೋಡುತ್ತದೆ, ಆದರೆ ಸೇನ್ ಇವುಗಳನ್ನು ಮಾನವನ ಘನತೆಯ ಭಾಗವಾಗಿ ನೋಡುತ್ತಾರೆ.

ಸೇನ್ ಮುಂದುವರಿದು ಜನ ತಮಗೆ ಬೇಕು ಅನ್ನುವ ವಿಷಯಗಳು ಜನರಿಗೆ ನಿಜವಾಗಿಯೂ ಬೇಕಾ ಅಥವಾ ಅವರಿರುವ ಪರಿಸ್ಥಿತಿಯಿಂದಾಗಿ ಅವರು ಹಾಗೆ ಯೋಚಿಸುತ್ತಿದ್ದಾರಾ ಅನ್ನುವುದನ್ನು ವಸ್ತುನಿಷ್ಠವಾಗಿ ಅರ್ಥಮಾಡಿಕೊಳ್ಳಬೇಕೆನ್ನುತ್ತಾರೆ. ಇದಕ್ಕವರು ಒಂದು ಉದಾಹರಣೆ ನೀಡುತ್ತಾರೆ. ನಾವು ಭೂಮಿಯಿಂದ ನೋಡಿದಾಗ ಸೂರ್ಯ ಮತ್ತು ಚಂದ್ರ ಎರಡೂ ಒಂದೇ ಗಾತ್ರವಿರುವಂತೆ ತೋರುತ್ತದೆ. ಇದು ನೋಡುವವರ ಭ್ರಮೆಯಲ್ಲ. ಭೂಮಿಯ ಮೇಲೆ ಆ ಜಾಗದಲ್ಲಿ ನಿಂತಿರುವ ಎಲ್ಲರಿಗೂ ಹಾಗೆಯೇ ಕಾಣಿಸುತ್ತದೆ. ಇದನ್ನು ಸೇನ್ 'ಸ್ಥಾನಿಕ ವಸ್ತುನಿಷ್ಠತೆ' (ಪೊಸಿಷನಲ್ ಆಬ್ಜೆಕ್ಟಿವಿಟಿ–ಒಂದು ನಿರ್ದಿಷ್ಟ ನೆಲೆಯಿಂದ ನೋಡಿದಾಗ ಕಾಣುವ ಸತ್ಯ) ಎನ್ನುತ್ತಾರೆ. ನಾವು ನಮ್ಮ ಸ್ಥಾನದ ಪರಿಣಾಮವನ್ನು ಮೀರಿಕೊಂಡು ನೋಡಿದಾಗ, ಅಂದರೆ ನಾವು ವಿಜ್ಞಾನ ಅಥವಾ ಮಸೂರಗಳನ್ನು ಬಳಸಿ ನೋಡಿದಾಗ, ಸೂರ್ಯನು ಚಂದ್ರನಿಗಿಂತ ಎಷ್ಟೋ ಪಟ್ಟು ದೊಡ್ಡವನು ಎಂದು ತಿಳಿಯುತ್ತದೆ. ವಿವಿಧ ನೆಲೆಗಳಿಂದ (Positions) ಮಾಹಿತಿಯನ್ನು ಸಂಗ್ರಹಿಸಿ ಸತ್ಯವನ್ನು

ಯಾವ ಸಾಮರ್ಥ್ಯಗಳು ಮುಖ್ಯ?" ಎಂಬ ಪ್ರಶ್ನೆಯನ್ನು ಒಬ್ಬ ತತ್ವಜ್ಞಾನಿ ಅಥವಾ ಸಿದ್ಧಾಂತಿಯು ಕೊಠಡಿಯೊಳಗೆ ಕುಳಿತು ನಿರ್ಧರಿಸಬಾರದು. ಅದನ್ನು ಆಯಾ ಸಮಾಜದ ಜನರು ಸಾರ್ವಜನಿಕ ಚರ್ಚೆ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕ ನಿರ್ಧರಿಸಬೇಕು.



ತಿಳಿಯುವುದನ್ನು ಸೇನ್ ಟ್ರಾನ್ಸ್‌ಪೊಸಿಷನಲ್ ಆಬ್ಜೆಕ್ಟಿವಿಟಿ –ಪಾರ–ಸ್ಥಾನಿಕ ವಸ್ತುನಿಷ್ಠತೆ ಎನ್ನುತ್ತಾರೆ.

ಒಂದು ನೆಲೆಯಿಂದ ನೋಡಿದಾಗ ಒಂದು ನಂಬಿಕೆಯು ಸರಿಯಿದೆ ಅನಿಸಬಹುದು. ಆದರೆ ಹೆಚ್ಚಿನ ಮಾಹಿತಿ ಸಿಕ್ಕಾಗ ನಮ್ಮ ನೆಲೆ ಬದಲಾಗುತ್ತದೆ. ಆಗ ಅದು ತಪ್ಪಾಗಿ ತೋರಬಹುದು. ಉದಾಹರಣೆಗೆ, ಒಂದು ಹಿಂದುಳಿದ ಸಮುದಾಯದ ಜನರು "ನಮಗೆ ಓದು–ಬರಹ ಬೇಡ, ನಾವು ಹೀಗೇ ಸುಖವಾಗಿದ್ದೇವೆ" ಎನ್ನಬಹುದು. ಅವರು ಈಗಿರುವ ನೆಲೆಯಿಂದ ನೋಡಿದಾಗ ಅದು ಸರಿಯಾದ (Objective) ನಂಬಿಕೆಯಾಗಿರಬಹುದು. ಆದರೆ ಶಿಕ್ಷಣ ಮತ್ತು ಜಗತ್ತಿನ ಅರಿವು ಇರುವ ಇನ್ನೊಂದು ನೆಲೆಯಿಂದ ನೋಡಿದಾಗ, ಅವರ ನಂಬಿಕೆ ತಪ್ಪೆಂದು ತಿಳಿಯುತ್ತದೆ. ಈ ರೀತಿ ಬೇರೆ ಬೇರೆ ದೃಷ್ಟಿಕೋನಗಳಿಂದ ವಿಚಾರಗಳನ್ನು ಪರೀಕ್ಷಿಸುವುದರಿಂದ 'ನೈಜ ಹಿತಾಸಕ್ತಿ'ಗಳನ್ನು (True Interests) ಗುರುತಿಸಲು ಸಾಧ್ಯವಾಗುತ್ತದೆ.

ಒಂದು ನಂಬಿಕೆಯನ್ನು ಒಂದು ನಿರ್ದಿಷ್ಟ ಪರಿಸ್ಥಿತಿಯಿಂದ ನೋಡಿದಾಗ ಎಲ್ಲರಿಗೂ ನಿಜವೆಂದು ಕಂಡರೂ, ಅದು ವಾಸ್ತವದಲ್ಲಿ ತಪ್ಪಾಗಿರಬಹುದು. ಇದನ್ನು ಸೇನ್ 'ವಸ್ತುನಿಷ್ಠ ಭ್ರಮೆ' ಎನ್ನುತ್ತಾರೆ. ಉದಾಹರಣೆ ಭಾರತದ ಕೆಲವು ರಾಜ್ಯಗಳಲ್ಲಿ ಆರೋಗ್ಯದ ಬಗ್ಗೆ ಜನರಲ್ಲಿ ಸಾಕಷ್ಟು ಅರಿವಿಲ್ಲ. ಅಲ್ಲಿನ ಜನರು ತಮಗೆ ಕಾಯಿಲೆ ಇಲ್ಲ ಎಂದು ಭಾವಿಸಬಹುದು, ಆದರೆ ವಾಸ್ತವದಲ್ಲಿ ಅವರ ಜೀವಿತಾವಧಿ (Life expectancy) ಕಡಿಮೆಯಿರುತ್ತದೆ. ಅವರಿಗೆ 'ಉತ್ತಮ ಆರೋಗ್ಯ' ಎಂದರೆ ಏನು ಎಂದು ತಿಳಿದಿಲ್ಲದಿರುವುದರಿಂದ ಅವರು ತಾವು ಆರೋಗ್ಯವಾಗಿದ್ದೇವೆ ಎನ್ನುವ ಭ್ರಮೆಯಲ್ಲಿರುತ್ತಾರೆ. ಹಾಗೆಯೇ ಮಹಿಳೆಯರು ತಮ್ಮ ದ್ವಿತೀಯ ದರ್ಜೆಯ ಸ್ಥಾನಮಾನವನ್ನು 'ನೈಸರ್ಗಿಕ' ಎಂದು ಭಾವಿಸುವುದು ಕೂಡ ಇಂತಹದೇ ಒಂದು ವಸ್ತುನಿಷ್ಠ ಭ್ರಮೆ. ಅರಿವು ಮತ್ತು ವಿಮರ್ಶಾತ್ಮಕ ಚಿಂತನೆ (Trans-positional scrutiny) ಮೂಡಿದಾಗ ಮಾತ್ರ ಭ್ರಮೆ ಹರಿಯುತ್ತದೆ.

ಸೇನ್ ಅವರ ಮಾತುಗಳಲ್ಲಿ: "ಯಾವುದೋ ಒಂದು ನಿರ್ದಿಷ್ಟ ಸ್ಥಾನದಿಂದ ನೋಡಿದಾಗ ಉಂಟಾದ ಸೀಮಿತ ಅವಲೋಕನದ ಆಧಾರದ ಮೇಲೆ ರೂಪುಗೊಂಡ ನಂಬಿಕೆಗಳನ್ನು ಭ್ರಮೆ ಎನ್ನಬಹುದು. ಇವು ತಪ್ಪು ನಂಬಿಕೆಗಳಾಗಿದ್ದರೂ, ಬೇರೆ ದೃಷ್ಟಿಕೋನಗಳಿಂದ ಪರೀಕ್ಷಿಸುವ ಅವಕಾಶವಿಲ್ಲದಿದ್ದಾಗ ಇವು ವಸ್ತುನಿಷ್ಠವಾಗಿವೆ ಎಂದೇ ಭಾವಿಸಲಾಗುತ್ತದೆ."

'ಅಭಿವೃದ್ಧಿ' ಎಂದರೆ ಕೇವಲ ಆದಾಯದ ಏರಿಕೆಯಲ್ಲ, ಬದಲಿಗೆ ಇಂತಹ 'ವಸ್ತುನಿಷ್ಠ ಭ್ರಮೆಗಳಿಂದ' ಹೊರಬರುವುದು ಮತ್ತು ಜ್ಞಾನದ ಮೂಲಕ ಸ್ವತಂತ್ರರಾಗುವುದು.

ಪೂರ್ಣ ಸಿದ್ಧಾಂತದ (Incomplete Theory) ಮಹತ್ವ

ಅಮರ್ತ್ಯ ಸೇನ್ ಅವರು ತಮ್ಮ 'ಸಾಮರ್ಥ್ಯದ ದೃಷ್ಟಿಕೋನ'ವನ್ನು ಮುಂದಿಡುತ್ತಾ ಸಾಮರ್ಥ್ಯಗಳ ಒಂದು ಸ್ಥಿರವಾದ ಪಟ್ಟಿಯನ್ನು ನೀಡುವುದಿಲ್ಲ. ಅದಕ್ಕೆ ಅವರು ಸ್ವಾತಂತ್ರ್ಯಕ್ಕೆ ನೀಡುವ ಮಹತ್ವವೇ ಕಾರಣ. ಆದರೆ 'ಸಾಮರ್ಥ್ಯದ ದೃಷ್ಟಿಕೋನ'ದ ಇನ್ನೊಬ್ಬ ಪ್ರಬಲ ಪ್ರತಿಪಾದಕರಾದ ಮಾರ್ಥಾ ನುಸ್‌ಬಾಮ್ (Martha Nussbaum) ಅವರು ಮಾನವ ಘನತೆಯ ಬದುಕಿಗೆ ಅವಶ್ಯಕವಾದ 10 ಮೂಲಭೂತ ಸಾಮರ್ಥ್ಯಗಳ ಪಟ್ಟಿಯನ್ನು ನೀಡುತ್ತಾರೆ. ಸಂಸ್ಕೃತಿ ಯಾವುದೇ ಇರಲಿ, ಜಗತ್ತಿನ ಎಲ್ಲರಿಗೂ


ಇದು ಎಐ ಬಳಸಿ ಸೃಷ್ಟಿಸಿದ ಚಿತ್ರ.

ಇವು ಸಿಗಲೇಬೇಕು ಎನ್ನುತ್ತಾರೆ. ಮನುಷ್ಯನಿಗೆ ಪೂರ್ಣ ಆಯಸ್ಸು, ದೈಹಿಕ ಆರೋಗ್ಯ, ದೈಹಿಕ ಹಾಗೂ ಲೈಂಗಿಕ ದೌರ್ಜನ್ಯದಿಂದ ಮುಕ್ತಿ, ಜಾತಿ, ಧರ್ಮ ಅಥವಾ ಲಿಂಗ ಆಧಾರಿತ ಅವಮಾನಗಳಿಂದ ಮುಕ್ತಿ ಹೀಗೆ ಹತ್ತು ಅಗತ್ಯಗಳನ್ನು ಅವರು ಪಟ್ಟಿ ಮಾಡುತ್ತಾರೆ.

ಆದರೆ ಸೇನ್ ಇಂತಹ ಪಟ್ಟಿಯನ್ನು ಕೊಡದೆ ತಮ್ಮ ಸಿದ್ಧಾಂತವನ್ನು "ಅಪೂರ್ಣವಾಗಿಯೇ" ಉಳಿಸಿಕೊಳ್ಳುತ್ತಾರೆ. ಸೇನ್ ಅವರ ಪ್ರಕಾರ, "ಯಾವ ಸಾಮರ್ಥ್ಯಗಳು ಮುಖ್ಯ?" ಎಂಬ ಪ್ರಶ್ನೆಯನ್ನು ಒಬ್ಬ ತತ್ವಜ್ಞಾನಿ ಅಥವಾ ಸಿದ್ಧಾಂತಿಯು ಕೊಠಡಿಯೊಳಗೆ ಕುಳಿತು ನಿರ್ಧರಿಸಬಾರದು. ಅದನ್ನು ಆಯಾ ಸಮಾಜದ ಜನರು ಸಾರ್ವಜನಿಕ ಚರ್ಚೆ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕ ನಿರ್ಧರಿಸಬೇಕು. ಮೊದಲೇ ಪಟ್ಟಿಯನ್ನು ನೀಡಿದರೆ, ಅದು ಜನರ ಭಾಗವಹಿಸುವಿಕೆಯ ಹಕ್ಕನ್ನು ಕಿತ್ತುಕೊಂಡಂತೆ ಆಗುತ್ತದೆ. ಜೊತೆಗೆ ವಿವಿಧ ಪ್ರದೇಶಗಳಲ್ಲಿ, ವಿವಿಧ ಕಾಲಘಟ್ಟಗಳಲ್ಲಿ ಜನರ ಅಗತ್ಯಗಳು ಬೇರೆಯಾಗಿರುತ್ತವೆ. ಬರಗಾಲ ಪೀಡಿತ ಪ್ರದೇಶದಲ್ಲಿ 'ಆಹಾರದ ಸಾಮರ್ಥ್ಯ'ಕ್ಕೆ ಮೊದಲ ಆದ್ಯತೆ ಇರುತ್ತದೆ. ಆದರೆ ತಂತ್ರಜ್ಞಾನ ಮುಂದುವರಿದ ಸಮಾಜದಲ್ಲಿ 'ಇಂಟರ್ನೆಟ್ ಬಳಕೆ' ಅಥವಾ 'ಡಿಜಿಟಲ್ ಸಾಕ್ಷರತೆ' ಒಂದು ಮುಖ್ಯ ಸಾಮರ್ಥ್ಯವಾಗಿರಬಹುದು. ಪೂರ್ವನಿರ್ಧಾರಿತ ಸ್ಥಿರವಾದ ಪಟ್ಟಿಯಲ್ಲಿ ಇಂತಹ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ.

ಸಮಾಜವು ಬೆಳೆದಂತೆ ಮನುಷ್ಯರ ತಿಳುವಳಿಕೆ ವಿಕಸನಗೊಳ್ಳುತ್ತದೆ. ಇಂದು ನಾವು ಯಾವುದನ್ನು 'ವಸ್ತುನಿಷ್ಠ ಭ್ರಮೆ' ಎಂದು ಕರೆಯುತ್ತಿದ್ದೇವೆಯೋ, ಅದು ನಾಳೆ ತಿಳುವಳಿಕೆಯ ಮೂಲಕ ಬದಲಾಗಬಹುದು. ಆದ್ದರಿಂದ ಸಿದ್ಧಾಂತವು 'ಅಪೂರ್ಣ'ವಾಗಿರುವುದು ಅದನ್ನು ಹೆಚ್ಚು ಶಕ್ತಿಯುತವಾಗಿಸುತ್ತದೆ, ಏಕೆಂದರೆ ಅದು ಹೊಸ ಆಲೋಚನೆಗಳಿಗೆ ಸದಾ ಮುಕ್ತವಾಗಿರುತ್ತದೆ.

ಹಾಗಾಗಿ ಸೇನ್ ತಮ್ಮ ಸಿದ್ಧಾಂತವನ್ನು ಪೂರ್ಣಗೊಳಿಸುವುದಿಲ್ಲ. ಸಾಮರ್ಥ್ಯಗಳ ಪಟ್ಟಿಯನ್ನು ನೀಡದೆ ಅಪೂರ್ಣವಾಗಿಯೇ

ಉಳಿಸಿಕೊಳ್ಳುತ್ತಾರೆ. ಜಾನ್ ರಾಲ್ಸ್ ಅವರಂತಹ ಚಿಂತಕರು ನ್ಯಾಯದ ಬಗ್ಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಮೊದಲೇ ನಿರ್ಧರಿಸುತ್ತಾರೆ. ಆದರೆ ಸೇನ್ ಅವರ ನಿಲುವಿನ ಪ್ರಕಾರ ಕೇವಲ ಸಿದ್ಧಾಂತದಿಂದ ಎಲ್ಲವನ್ನೂ ಪರಿಹರಿಸಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಜನರು ಚರ್ಚೆಯ ಮೂಲಕ ತಮಗೆ ಯಾವುದು ಬೇಕು ಎಂದು ನಿರ್ಧರಿಸಬೇಕು. ಸಿದ್ಧಾಂತವು ಮೊದಲೇ ಎಲ್ಲವನ್ನೂ ನಿರ್ಧರಿಸಿದರೆ ಜನರ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತೆ ಆಗುತ್ತದೆ.
ಅಮರ್ತ್ಯ ಸೇನ್ ಅವರು ಫೆಮಿನಿಸ್ಟ್ ಎಕನಾಮಿಕ್ಸ್ (Feminist Economics) ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ತಮ್ಮ ಸಿದ್ಧಾಂತವನ್ನು ಏಕೆ 'ಅಪೂರ್ಣ'ವಾಗಿಡಲಾಗಿದೆ ಎಂಬುದನ್ನು ವಿವರಿಸಿದ್ದಾರೆ.

"ಮುಖ್ಯವಾದ ಸಾಮರ್ಥ್ಯಗಳನ್ನು ಪಟ್ಟಿ ಮಾಡುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದರೆ, ಸಾರ್ವಜನಿಕ ಚರ್ಚೆ ಅಥವಾ ಸಾಮಾಜಿಕ ಚಿಂತನೆಯೇ ಇಲ್ಲದೆ, ಕೇವಲ ಸಿದ್ಧಾಂತದ ಆಧಾರದ ಮೇಲೆ ಸಿದ್ಧಪಡಿಸಿದ ಒಂದು ನಿರ್ದಿಷ್ಟ ಪಟ್ಟಿಯನ್ನೇ (canonical list) ಎಲ್ಲರೂ ಪಾಲಿಸಬೇಕು ಎಂದು ಪಟ್ಟು ಹಿಡಿಯುವುದರಲ್ಲಿ ಸಮಸ್ಯೆಯಿದೆ. ಸಂಪೂರ್ಣವಾಗಿ ಶುದ್ಧ ಸಿದ್ಧಾಂತವನ್ನೇ ಆಧರಿಸಿ ಪಟ್ಟಿಯನ್ನು ಸಿದ್ಧಪಡಿಸುವುದು ಸರಿಯಲ್ಲ. ಪಟ್ಟಿಯಲ್ಲಿ ಯಾವುದನ್ನು ಸೇರಿಸಬೇಕು ಮತ್ತು ಏಕೆ ಸೇರಿಸಬೇಕು ಎಂಬ ಬಗ್ಗೆ ನಡೆಯಬಹುದಾದ ಫಲಪ್ರದ ಸಾರ್ವಜನಿಕ ಸಹಭಾಗಿತ್ವದ ಸಾಧ್ಯತೆಯನ್ನೇ ಇದು ನಿರಾಕರಿಸಿಬಿಡುತ್ತದೆ

"ನಾನು ಸಹ ಗಮನ ಹರಿಸಬೇಕಾದ ವಿವಿಧ ಸಾಮರ್ಥ್ಯಗಳ ಪಟ್ಟಿಗಳ ಬಗ್ಗೆ ಖಂಡಿತವಾಗಿಯೂ ಚರ್ಚಿಸಿದ್ದೇನೆ. ಆದರೆ ಬದಲಾಗದ ಒಂದು ಸ್ಥಿರವಾದ ಪಟ್ಟಿಯನ್ನು ಸಿದ್ಧಪಡಿಸುವುದರ ಬಗ್ಗೆ ನನಗೆ ವಿರೋಧವಿದೆ. ಅಂತಹ ಪಟ್ಟಿಗೆ ಯಾವುದೇ ಹೊಸ ಸಾಮರ್ಥ್ಯವನ್ನು ಸೇರಿಸುವುದಕ್ಕೆ ಸಾಧ್ಯವಿರುವುದಿಲ್ಲ. ಅದು ಸ್ಥಿರವಾಗಿರುತ್ತದೆ ಅಂದರೆ ಅದು ಸಾರ್ವಜನಿಕ ಚರ್ಚೆಗಳಿಗೆ ಅಥವಾ ಸಾಮಾಜಿಕ ಮೌಲ್ಯಗಳ ಬದಲಾವಣೆಗೆ ಸ್ಪಂದಿಸುವುದಿಲ್ಲ.


ನಾನು ಸಿದ್ಧಾಂತದಲ್ಲಿ ಅಪಾರ ನಂಬಿಕೆ ಉಳ್ಳವನು. ಮೌಲ್ಯಮಾಪನ ಮತ್ತು ಅಳೆಯುವ ಕೆಲಸವನ್ನು ಮಾಡುವ ಸಿದ್ಧಾಂತಗಳು ತುಂಬಾ ಕಠಿಣವಾದ ಕೆಲಸ ಮಾಡುತ್ತಿವೆ. ನಮ್ಮ ಬಳಿ ಇರುವ ಭೌತಿಕ ವಸ್ತುಗಳು ಅಥವಾ ಸಂಪನ್ಮೂಲಗಳಿಗಿಂತ ಭಿನ್ನವಾಗಿ, ನಾವು ಏನನ್ನು ಮಾಡಲು ಮತ್ತು ಏನಾಗಲು ಸ್ವತಂತ್ರರಾಗಿದ್ದೇವೆ (ಸಾಮರ್ಥ್ಯಗಳು) ಎಂಬುದರ ಪ್ರಸ್ತುತತೆಯನ್ನು ಎತ್ತಿ ತೋರಿಸುವ ಕೆಲಸ ಮಾಡುತ್ತವೆ. ಆದರೆ, ಶುದ್ಧ ಸಿದ್ಧಾಂತವು (pure theory) ಯಾವುದೇ ಸಮಾಜದ ನಾಗರಿಕರು ಏನನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಯಾವುದಕ್ಕೆ ಮೌಲ್ಯ ನೀಡುತ್ತಾರೆ ಎಂಬುದನ್ನು ಪರಿಗಣಿಸದೆ, ಎಲ್ಲಾ ಕಾಲಕ್ಕೂ ಮತ್ತು ಎಲ್ಲಾ ಸಮಾಜಗಳಿಗೂ ಅನ್ವಯವಾಗುವಂತೆ ಸಾಮರ್ಥ್ಯಗಳ ಪಟ್ಟಿಯನ್ನು 'ಫ್ರೀಜ್' (ಸ್ಥಗಿತ) ಮಾಡಲು ಸಾಧ್ಯವಿಲ್ಲ. ಅದು ಕೇವಲ ಪ್ರಜಾಪ್ರಭುತ್ವದ ವ್ಯಾಪ್ತಿಯನ್ನು ನಿರಾಕರಿಸುವುದು ಮಾತ್ರವಲ್ಲದೆ, ಒಂದು ನಿರ್ದಿಷ್ಟ ಸಮಾಜವು ಎದುರಿಸುತ್ತಿರುವ ಸಾಮಾಜಿಕ ವಾಸ್ತವದಿಂದ ಸಂಪೂರ್ಣವಾಗಿ ಹೊರ ನಿಂತು 'ಶುದ್ಧ ಸಿದ್ಧಾಂತ'ದಿಂದ ಸಾಧಿಸಬಹುದು ಅನ್ನುವ ತಪ್ಪು ಗ್ರಹಿಕೆಯನ್ನು ಆಧರಿಸಿದೆ." (ಸೇನ್ 2004a: 77?8)

ವ್ಯಕ್ತಿಗಳು ಏನನ್ನು ಮೌಲ್ಯಯುತವೆಂದು ಪರಿಗಣಿಸುತ್ತಾರೆ, ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬುದರ ಬಗೆಗಿನ ಸೇನ್ ಅವರ ಈ ದೃಷ್ಟಿಕೋನವು ಒಂದು ಹೊಸ ಸೈದ್ಧಾಂತಿಕ ಮತ್ತು ವಾಸ್ತವಿಕ ನೋಟವನ್ನು ನೀಡುತ್ತದೆ.

ಸೇನ್ ಸಾರ್ವಜನಿಕ ಮೌಲ್ಯಮಾಪನಕ್ಕಾಗಿ ನೀಡಿದ ಎರಡು ಪ್ರಮುಖ ಪರಿಕಲ್ಪನೆಗಳು ಕಾರ್ಯನಿರ್ವಹಣೆಗಳು (functionings) ಮತ್ತು ಸಾಮರ್ಥ್ಯಗಳು (capabilities) ಅತ್ಯಂತ ಶ್ರೀಮಂತವಾಗಿವೆ. ಕಳೆದ ಒಂದು ಶತಮಾನಕ್ಕೂ ಹೆಚ್ಚು ಕಾಲ ಅರ್ಥಶಾಸ್ತ್ರ ಮತ್ತು ರಾಜಕೀಯ ತತ್ತ್ವಶಾಸ್ತ್ರದಲ್ಲಿ ಪ್ರಾಬಲ್ಯ ಹೊಂದಿದ್ದ ಉಪಯುಕ್ತತಾವಾದ ಹಾಗೂ ಕಲ್ಯಾಣ ಅರ್ಥಶಾಸ್ತ್ರಕ್ಕೆ ಅದು ಪ್ರಬಲವಾದ ಪರ್ಯಾಯವಾಗಿದೆ. ಹಾಗೆಯೇ ಜಾನ್ ರಾಲ್ಸ್ ಅವರ ಪ್ರಾಥಮಿಕ ಸರಕುಗಳ ಸಿದ್ಧಾಂತಕ್ಕೂ ಅದೊಂದು ಪ್ರಬಲವಾದ ಪರ್ಯಾಯವಾಗಿದೆ.

ಆಕರ:


Development As Freedom: Amartya Sen
How to Read Amartya Sen By Lawrence Hamilton



ಅಕ್ಸಿಲೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್– ಭಾಗ ೩

ಅಧಿಕಾರಶಾಹಿ ಹೊರೆ

ಕಾರ್ತಿಕ್ ಮುರಳಿಧರನ್ ಅವರ ಪುಸ್ತಕ ಅಕ್ಸಿಲಿರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್ ಪುಸ್ತಕದ ಮೂರನೇ ಅಧ್ಯಾಯವನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಕಾರ್ತಿಕ್ ಅವರು ಇದರಲ್ಲಿ ಭಾರತದ ಅಧಿಕಾರಶಾಹಿಯ ಸಮಸ್ಯೆಯನ್ನು ಕುರಿತು ಚರ್ಚಿಸಿದ್ದಾರೆ.



ಬಹುತೇಕ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಚುನಾಯಿತ ಸರ್ಕಾರ ಶಾಸನಗಳನ್ನು ರೂಪಿಸುವ ಮೂಲಕ ಸರ್ಕಾರ ಏನು ಮಾಡಬೇಕು ಎಂಬುದನ್ನು ನಿರ್ಧರಿಸುತ್ತದೆ. ಈ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಅಧಿಕಾರಶಾಹಿಯದ್ದು. ಭಾರತದಲ್ಲೂ ಅದೇ ಆಗುವುದು. ಸರ್ಕಾರದ ಸಾಮರ್ಥ್ಯ ಹೆಚ್ಚಬೇಕಾದರೆ, ಅಧಿಕಾರಶಾಹಿಯ ದಕ್ಷತೆ ಎಲ್ಲಾ ಮಟ್ಟದಲ್ಲೂ ಹೆಚ್ಚಬೇಕು. ಅಧಿಕಾರಶಾಹಿ ಒಂದು ಮಟ್ಟದ ಕೆಲಸವನ್ನು ಚೆನ್ನಾಗಿ ನಿರ್ವಹಿಸುತ್ತಿದೆ. ಚುನಾವಣೆ, ಜನಗಣತಿ ಮತ್ತು ಲಸಿಕಾ ಅಭಿಯಾನದಂತಹ 'ಮಿಷನ್ ಮೋಡ್' ಕೆಲಸಗಳನ್ನು ನಮ್ಮ ಆಡಳಿತ ವ್ಯವಸ್ಥೆ ಯಶಸ್ವಿಯಾಗಿಯೇ ನಿರ್ವಹಿಸಬಲ್ಲದು. ಆದರೆ ಶಿಕ್ಷಣ, ಆರೋಗ್ಯ ಮತ್ತು ಸಾರ್ವಜನಿಕ ನ್ಯಾಯದಂತಹ ದೈನಂದಿನ ಮೂಲಭೂತ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವುದಕ್ಕೆ ಅದಕ್ಕೆ ಸಾಧ್ಯವಾಗುತ್ತಿಲ್ಲ.

ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು? ದಿನನಿತ್ಯದ ಕೆಲಸಗಳನ್ನು ಮಾಡಲು ಅಧಿಕಾರಿಗಳಿಗೆ ಅಗತ್ಯವಾದ ಸಿಬ್ಬಂದಿಗಳನ್ನು, ಕೌಶಲ್ಯ ಮತ್ತು ಸ್ವಾಯತ್ತತೆಯನ್ನು ನಾವು ನೀಡಿಲ್ಲ. ಮಿಷನ್ ಮೋಡ್ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿವೆ ಅಂದರೆ ಅದಕ್ಕೆ ಕರ್ತವ್ಯವನ್ನು ನಿರ್ವಹಿಸುವ ಸಾಮರ್ಥ್ಯ ಇದೆ ಅಂತ ಅರ್ಥ. ಆದರೆ ಕೆಲಸಮಾಡುವುದಕ್ಕೆ ಪರಿಸ್ಥಿತಿ ಅವರಿಗೆ ತಡೆಯೊಡ್ಡುತ್ತಿದೆ. ದಿನದಿಂದ ದಿನಕ್ಕೆ ಅಧಿಕಾರಶಾಹಿಯ ಹೊರೆ ಹೆಚ್ಚುತ್ತಾ ಹೋಗುತ್ತಿದೆ. ಅದಕ್ಕೆ ಸರಿಯಾಗಿ ಅದರ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಬೇಕಾದ ಹೂಡಿಕೆಯನ್ನು ಸರ್ಕಾರ ಮಾಡುತ್ತಿಲ್ಲ. ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಹೂಡಿಕೆ ಮಾಡುವುದಕ್ಕಿಂತ ತಕ್ಷಣಕ್ಕೆ ಮತ ತಂದುಕೊಡುವ ಸಬ್ಸಿಡಿ, ಇತ್ಯಾದಿಗಳಿಗೆ ಹಣ ವ್ಯಯಿಸಲಾಗುತ್ತಿದೆ. ಎರಡನೆಯದಾಗಿ ನಮ್ಮ ನಾಯಕರುಗಳು ತಮ್ಮ ಸಂಕುಚಿತ ಹಾಗೂ ರಾಜಕೀಯ ಉದ್ದೇಶಗಳಿಗಾಗಿ ಅಧಿಕಾರಶಾಹಿಯನ್ನು ಬಳಸಿಕೊಳ್ಳುವ ಮೂಲಕ ಅದರ ಸಾಮರ್ಥ್ಯವನ್ನು ಕುಗ್ಗಿಸುತ್ತಿದ್ದಾರೆ. ಇದರಿಂದಾಗಿ ಕ್ರಮೇಣ ಸರ್ಕಾರದ ಮೇಲಿರುವ ಜನರ ನಿರೀಕ್ಷೆ ಹಾಗೂ ಅದನ್ನು



ಪೂರೈಸುವುದಕ್ಕೆ ಅದಕ್ಕಿರುವ ಸಾಮರ್ಥ್ಯದ ನಡುವೆ ಕಂದಕ ಹೆಚ್ಚುತ್ತಿದೆ.

ಜನರು ಸುಶಿಕ್ಷಿತರಾಗಿ, ಅವರಲ್ಲಿ ಅರಿವು ಮೂಡುತ್ತಿದ್ದ ಹಾಗೆ ಸರ್ಕಾರದ ಮೇಲೆ ಒತ್ತಡ ಹೆಚ್ಚುತ್ತಿದೆ. ಒಳ್ಳೆಯ ಆಡಳಿತ ನಿರೀಕ್ಷೆ ಬೆಳೆಯುತ್ತಿದೆ. ರಾಜಕೀಯ ನಾಯಕರಿಗೆ ಒಳ್ಳೆಯ ಆಡಳಿತ ನೀಡಬೇಕೆಂಬ ಇಚ್ಛೆ ಇದ್ದರೂ ಅದಕ್ಕೆ ಸ್ಪಂದಿಸಲು ಅಧಿಕಾರಶಾಹಿಗೆ ಸಾಧ್ಯವಾಗುತ್ತಿಲ್ಲ. ಹಲವು ದಶಕಗಳಿಂದ ನಮ್ಮ ಅಧಿಕಾರಶಾಹಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹಾಗಾಗಿ ಅದು ದುರ್ಬಲವಾಗಿದೆ. ನಮ್ಮ ಅಧಿಕಾರಶಾಹಿಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುವುದು ಮತ್ತು ಅದರ ಸಾಮರ್ಥ್ಯವನ್ನು ಹೆಚ್ಚಿಸುವುದು ಸರ್ಕಾರದ ಆದ್ಯತೆಯಾಗಬೇಕು.

ಭಾರತದ ಅಧಿಕಾರಶಾಹಿ ತುಂಬಾ ಬೃಹತ್ತಾದದ್ದು. ಒಟ್ಟಾರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿದರೆ 100 ಲಕ್ಷ ನೌಕರರಿದ್ದಾರೆ. ಶಿಕ್ಷಣ, ಆರೋಗ್ಯ, ಪೋಲಿಸ್ ಇತ್ಯಾದಿ ಬಹುತೇಕ ಸಾರ್ವಜನಿಕ ಸೇವೆಗಳನ್ನು ರಾಜ್ಯ ಸರ್ಕಾರ ನೋಡಿಕೊಳ್ಳುತ್ತಿದೆ. ಹಾಗಾಗಿ ಅಲ್ಲಿ ಶೇಕಡ 75%ರಷ್ಟು ನೌಕರರಿದ್ದಾರೆ. ಅವರ ಮೇಲೆ ಐಎಎಸ್, ಐಪಿಸ್ ಅಧಿಕಾರಿಗಳಿದ್ದಾರೆ. ರಾಜ್ಯಗಳಲ್ಲೂ ಈ ಐಎಎಸ್ ಅಧಿಕಾರಿಗಳು ಮೇಲ್‌ಸ್ತರದಲ್ಲಿ ಬಹುತೇಕ ರಾಜಕೀಯ ನಾಯಕರೊಂದಿಗೆ ಕೆಲಸ ಮಾಡುತ್ತಿರುತ್ತಾರೆ. ವಿವಿಧ ವಿಭಾಗಗಳಲ್ಲಿ ಆಡಳಿತದ ಮುಖ್ಯಸ್ಥರಾಗಿರುತ್ತಾರೆ. ಕೆಳಸ್ತರದಲ್ಲಿ ಶಿಕ್ಷಣ, ಆರೋಗ್ಯ, ಸಾರ್ವಜನಿಕ ರಕ್ಷಣೆ ಇತ್ಯಾದಿಗಳನ್ನು ನೋಡಿಕೊಳ್ಳುವ ನೌಕರರಿರುತ್ತಾರೆ.

ಸಾಮಾನ್ಯ ನಂಬಿಕೆಯೆಂದರೆ ಭಾರತದಲ್ಲಿ ಅಧಿಕಾರಶಾಹಿಯ ಬೃಹತ್ ಪ್ರಮಾಣವೇ ಅದರ ಅದಕ್ಷತೆಗೆ ಕಾರಣ ಎನ್ನುವುದು. ಆದರೆ ಸತ್ಯದೂರವಾದ ಮಾತು. ಏಕೆಂದರೆ, ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ನೌಕರರ ಸಂಖ್ಯೆ ಕಡಿಮೆ. ಅಷ್ಟೇ ಅಲ್ಲದೆ ತೀವ್ರವಾದ ಕೊರತೆಯಿದೆ ಎಂದೇ ಹೇಳಬಹುದು. ಭಾರತದಲ್ಲಿ ಪ್ರತಿ ಸಾವಿರ ಜನರಿಗೆ ಕೇವಲ 16 ಜನ ಸಾರ್ವಜನಿಕ ನೌಕರರಿದ್ದಾರೆ. ಚೀನಾದಲ್ಲಿ ಅವರ ಸಂಖ್ಯೆ 57 ಇದೆ. ಮಾರುಕಟ್ಟೆ ಕೇಂದ್ರಿತ ಆರ್ಥಿಕತೆ ಎಂದು ಹೇಳುವ ಅಮೇರಿಕೆಯಲ್ಲಿ ಪ್ರತಿ ಸಾವಿರ ಜನಕ್ಕೆ 77 ಸಾರ್ವಜನಿಕ ನೌಕರರಿದ್ದಾರೆ. ಅಂದರೆ ಭಾರತಕ್ಕಿಂತ ಸುಮಾರು ಐದು ಪಟ್ಟು ಹೆಚ್ಚು. ನಮ್ಮಲ್ಲಿನ ನೌಕರರ ಕೊರತೆ ಪ್ರತಿಕ್ಷೇತ್ರದಲ್ಲೂ ಕ್ಷಮತೆಯನ್ನು ಕುಂಠಿಸುತ್ತದೆ. ಉದಾಹರಣೆಗೆ ಜಾಗತಿಕ ಆರೋಗ್ಯ ಸಂಸ್ಥೆ ಹೇಳುವುದರ ಕಾಲು ಭಾಗದಷ್ಟೂ ಡಾಕ್ಟರುಗಳು, ನರ್ಸುಗಳು ನಮ್ಮಲ್ಲಿ ಇಲ್ಲ. ಇದು ಪೋಲಿಸ್, ಅಧ್ಯಾಪಕರು ಇತ್ಯಾದಿ ವಿಷಯಗಳಲ್ಲೂ ನಿಜ. ಭರ್ತಿಯಾಗದ ಹುದ್ದೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪ್ರತಿವಿಭಾಗದಲ್ಲೂ ಎಲ್ಲಾ ಸ್ಥರದ ಹುದ್ದೆಗಳ ವಿಷಯದಲ್ಲೂ ಇದು ನಿಜ. ಸಹಜವಾಗಿಯೇ ನೌಕರರ ಕೊರತೆ ಸೇವೆಯ ಗುಣಮಟ್ಟದ ಮೇಲೂ ಪರಿಣಾಮ ಮಾಡುತ್ತದೆ.

ನೌಕರರ ಕೊರತೆಯ ಜೊತೆಗೆ ನೌಕರರಲ್ಲಿ ಕಂಡುಬರುವ ಬದ್ಧತೆಯ ಕೊರತೆ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಅಧ್ಯಾಪಕರು, ವೈದ್ಯರು ಇತ್ಯಾದಿ ನೌಕರರ ಗೈರುಹಾಜರಿಯ ಪ್ರಮಾಣ ತೀವ್ರವಾಗಿದೆ. ಹಾಗಾಗಿ ನಿರೀಕ್ಷಿತ ಪರಿಣಾಮ ಸಾಧ್ಯವಾಗುತ್ತಿಲ್ಲ. ಶೇಕಡ 25ರಷ್ಟು ಅಧ್ಯಾಪಕರು, ಶೇಕಡ 40ರಷ್ಟು ವೈದ್ಯರು ಕೆಲಸಕ್ಕೆ ಹಾಜರಾಗುವುದಿಲ್ಲ ಅನ್ನುವುದನ್ನು ಹಲವು ಸಮೀಕ್ಷೆಗಳು ತಿಳಿಸಿವೆ. ಮೇಲ್ವಿಚಾರಣೆ ಸರಿಯಾಗಿಲ್ಲದ ಕಡೆಗಳಲ್ಲಿ ಅದರ ಪ್ರಮಾಣ ಇನ್ನೂ ಹೆಚ್ಚಿಗೆ ಇದೆ. ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದರಿಂದ ಸಮಸ್ಯೆ ಇನ್ನೂ ತೀವ್ರವಾಗುತ್ತಿದೆ. ಸೂಪರ್‌ವೈಸರುಗಳು ದಾಖಲೆಗಳನ್ನು ಪರಿಶೀಲಿಸುತ್ತಾರೆಯೇ ಹೊರತು ಸೇವೆಯ ಗುಣಮಟ್ಟವನ್ನಲ್ಲ. ಎಷ್ಟೋ ಶಾಲೆಗಳಲ್ಲಿ ಪುಸ್ತಕಗಳನ್ನು, ಕಂಪ್ಯೂಟರುಗಳನ್ನು ಬೀಗಹಾಕಿದ ಬೀರುವಿನಲ್ಲಿಟ್ಟಿರುತ್ತಾರೆ. ಮಕ್ಕಳಿಗೆ ಬಳಸುವುದಕ್ಕೆ ಬಿಡುತ್ತಿಲ್ಲ. ಬಳಕೆ ಮಾಡಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಿಂತ, ವಿದ್ಯಾರ್ಥಿಗಳು ಬಳಸಿದರೆ ಹಾಳಾಗಿಬಿಡುತ್ತದೆ ಅನ್ನುವ ಆತಂಕವೇ ಹೆಚ್ಚಾಗಿ ಅವರನ್ನು ಕಾಡುತ್ತದೆ. ಮೇಲ್ವಿಚಾರಣೆಯ ಪ್ರಕ್ರಿಯೆಯೂ ಹಾಗೆ ನಡೆಯುತ್ತದೆ. ಬಳಕೆಯಾಗದೆ ಇದ್ದರೆ ಯಾರೂ ತಕರಾರು ಮಾಡುವುದಿಲ್ಲ. ಕಳೆದು ಹೋದರೆ, ಹಾಳಾದರೆ ವಿಚಾರಣೆ ನಡೆಯುತ್ತದೆ.

ಕಾರ್ತಿಕ್ ಅವರ ಇನ್ನೊಂದು ಆರೋಪವೆಂದರೆ ನೌಕರರಿಗೆ ದಿನನಿತ್ಯದ ಕೆಲಸಗಳನ್ನು ನಿರ್ವಹಿಸುವುದಕ್ಕೆ ಬೇಕಾದ ಸ್ವಾಯತ್ತತೆ ಇಲ್ಲ ಅನ್ನುವುದು. ಸ್ವಾಯತ್ತತೆ ಇದ್ದರೆ ಕೆಲಸ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅದು ಅವರನ್ನು ಕೆಲಸ ಮಾಡುವುದಕ್ಕೆ ಉತ್ತೇಜಿಸುತ್ತದೆ. ಸ್ಥಳೀಯ ಪರಿಸ್ಥಿತಿಗೆ ಸ್ಪಂದಿಸುವುದಕ್ಕೆ ಅವರಿಗೆ ಸಾಧ್ಯವಾಗುತ್ತದೆ. ಯಾವಾಗಲೂ ಮೇಲಿನಿಂದ ಆದೇಶಕ್ಕೆ ಕಾಯದೆ ತಾವೇ ಸ್ವಂತ ನಿರ್ಧಾರಗಳನ್ನು ತೆಗೆದುಕೊಂಡು ಕೆಲಸ ಮಾಡುವ ಸಂಸ್ಕೃತಿಯನ್ನು ಬೆಳೆಸುತ್ತದೆ. ಸ್ವಾಯತ್ತತೆಯ ಅನುಕೂಲಗಳ ಬಗ್ಗೆ ನಮ್ಮಲ್ಲಿ ಹಾಗೂ ಬೇರೆ ದೇಶಗಳಲ್ಲಿ ನಡೆದಿರುವ ಅಧ್ಯಯನಗಳು ಇದನ್ನು ಸಮರ್ಥಿಸುತ್ತವೆ. ಅವಕಾಶ ಹಾಗೂ ಸ್ವಾಯತ್ತತೆಯ ಕೊರತೆ ಅಧಿಕಾರಶಾಹಿಯ ಅತೃಪ್ತಿಗೆ ಬಹುತೇಕ ಕಾರಣ. ಇದನ್ನು ರಾಜಕೀಯ, ನ್ಯಾಯಿಕ ಹಾಗೂ ಆಡಳಿತಾತ್ಮಕ ಅಂಶಗಳೂ ಬೆಳೆಸಿವೆ.

ಅಧಿಕಾರಶಾಹಿ ಪರಿಣಾಮಕಾರಿಯಾಗಿ ಇಲ್ಲದಿರುವುದಕ್ಕೆ ಇನ್ನೊಂದು ಕಾರಣವೆಂದರೆ ಸರ್ಕಾರಿ ನೌಕರರು ಸ್ಥಳಿಯ ಸಮುದಾಯದೊಂದಿಗೆ ಒಳ್ಳೆಯ ಸಂಪರ್ಕ ಇಟ್ಟುಕೊಂಡಿರುವುದಿಲ್ಲ. ಸರ್ಕಾರಿ ನೌಕರರು ಕೆಲಸ ಮಾಡುವ ಸ್ಥಳದಲ್ಲಿ ವಾಸಿಸುವುದು ತುಂಬಾ ಕಡಿಮೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಎಷ್ಟೋ ಸರ್ಕಾರಿ ನೌಕರರು ವೈಯಕ್ತಿಕ ಕಾರಣಗಳಿಗಾಗಿ ಪಟ್ಟಣಗಳಲ್ಲಿ ವಾಸಿಸುತ್ತಿರುತ್ತಾರೆ. ಕೆಲಸ ಮಾಡುವ ಪ್ರದೇಶದಲ್ಲಿ ನೌಕರರು ವಾಸಿಸುತ್ತಿದ್ದರೆ, ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾರೆ ಎಂದು ಕಾರ್ತಿಕ್ ಹೇಳುತ್ತಾರೆ. ಇದಕ್ಕೆ ಅವರದೇ ಅಧ್ಯಯನವನ್ನು ಸಮರ್ಥನೆಯನ್ನಾಗಿ ನೀಡುತ್ತಾರೆ. ಜೊತೆಗೆ ಸರ್ಕಾರಿ ನೌಕರರೇ ಸಾರ್ವಜನಿಕ ಸೇವೆಯನ್ನು ಬಳಸಿಕೊಳ್ಳುವುದಿಲ್ಲ. ಖಾಸಗಿ ಸೇವೆಯನ್ನು ಆಶ್ರಯಿಸುತ್ತಾರೆ. ಕೇವಲ ಶೇಕಡ 20ರಷ್ಟು ಅಧ್ಯಾಪಕರು ಮಾತ್ರ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಕಳುಹಿಸುತ್ತಾರೆ. ಇದು ಆರೋಗ್ಯದ ವಿಷಯದಲ್ಲೂ ನಿಜ. ಸರ್ಕಾರಿ ನೌಕರರೂ ಖಾಸಗಿ ವೈದ್ಯಕೀಯ ಸೇವೆಯನ್ನೇ ಹೆಚ್ಚಾಗಿ ಬಳಸಿಕೊಳ್ಳುತ್ತಾರೆ. ಇಂತಹ ಹಲವು ಕಾರಣಗಳಿಂದ ಸಾರ್ವಜನಿಕ ಸೇವೆಯಲ್ಲಿ ಸುಧಾರಣೆ ತರುವುದು ಆದ್ಯತೆಯ ವಿಷಯವಾಗುತ್ತಿಲ್ಲ. ಸರ್ಕಾರಿ ನೌಕರರಿಗೆ ತಮ್ಮ ನೈಪುಣ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೂ ಅವಕಾಶಗಳು ಕಡಿಮೆ. ಅವರಿಗೆ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಬೇಕಾದ ತರಬೇತಿ ಸಿಗುವುದಿಲ್ಲ. ಅದಕ್ಕೆ ಬೇಕಾದ ತರಬೇತಿ ಸಂಸ್ಥೆಗಳ ಕೊರತೆ ಇದೆ. ತರಬೇತಿ ಕಾರ್ಯಕ್ರಮಗಳೂ ಕಡಿಮೆ. ಜೊತೆಗೆ ನೌಕರರ ಕೊರತೆಯಿರುವುದರಿಂದ ತರಬೇತಿಗೆ ನೌಕರರನ್ನು ಕಳುಹಿಸುವುದಕ್ಕೆ ಅಧಿಕಾರಿಗಳು ಸಿದ್ದರಿರುವುದಿಲ್ಲ. ಇದರೊಂದಿಗೆ ಸಂಬಳದ ಹೆಚ್ಚಳ ಹಾಗೂ ಬಡ್ತಿ ಕೂಡ ಹೆಚ್ಚಾಗಿ ಸೇವಾವಧಿಯನ್ನು ಅವಲಂಬಿಸಿರುತ್ತದೆ, ಅವರ ಸಾಮರ್ಥ್ಯವನ್ನಲ್ಲ. ಸಲಹೆಗಾಗಿ ಹೊರಗಡೆಯ ಪರಿಣತರನ್ನೇ ಬಹುತೇಕ ನೆಚ್ಚಿಕೊಳ್ಳಲಾಗುತ್ತದೆ. ಈ ಪ್ರವೃತ್ತಿಯಿಂದಾಗಿ ಆಂತರಿಕವಾಗಿ ಪರಿಣತರನ್ನು ಸಿದ್ಧಪಡಿಸುವುದಕ್ಕೆ ಪ್ರೋತ್ಸಾಹವಿರುವುದಿಲ್ಲ.

ಅಧಿಕಾರಶಾಹಿ ಕಾರ್ಯವಿಧಾನದಲ್ಲಿ ದಾಖಲೆಗಳಿಗೆ ನಾವು ಆದ್ಯತೆ ನೀಡುತ್ತಿರುವುದರಿಂದ ನೌಕರರ ಬಹುತೇಕ ಸಮಯ ದಾಖಲೆಗಳನ್ನು ತಯಾರಿಸುವುದಕ್ಕೇ ಹೋಗಿಬಿಡುತ್ತದೆ. ನಿಜವಾಗಿ ಕೆಲಸ ಮಾಡುವುದಕ್ಕೆ ಸಮಯ ಇರುವುದೇ ಇಲ್ಲ. ಅಂಗನವಾಡಿ



ನೇಮಕಾತಿಯಲ್ಲಿನ ಭ್ರಷ್ಟಾಚಾರದಿಂದ ಆಗುವ ಸಾಮಾಜಿಕ ನಷ್ಟ ಅಪಾರ. ಇದನ್ನು ಗಂಗಾಜಲ ಸಿನಿಮಾದಲ್ಲಿ ಸೆರೆಹಿಡಿಯಲಾಗಿದೆ. ಭ್ರಷ್ಟ ಕಿರಿಯ ಪೋಲಿಸ್ ಅಧಿಕಾರಿ ನಿಷ್ಠಾವಂತ ಎಸ್‌ಪಿ ಕೈಗೆ ಸಿಕ್ಕಿ ಬೀಳುತ್ತಾನೆ. ತಾನು ಕೆಲಸ ತೆಗೆದುಕೊಳ್ಳಲು ಲಂಚಕೊಡುವುದಕ್ಕಾಗಿ ಮಾಡಿದ ಸಾಲವನ್ನು ತೀರಿಸಲು ಹೀಗೆ ಮಾಡುತ್ತಿದ್ದೇನೆ, ನನ್ನನ್ನು ಕ್ಷಮಿಸಿಬೇಕೆಂದು ಬೇಡಿಕೊಳ್ಳುತ್ತಾನೆ. ಈ ನಿಷ್ಠಾವಂತ ಎಸ್‌ಪಿಯನ್ನು ಬೇರೆಕಡೆಗೆ ವರ್ಗಾಯಿಸಲು ಅವನ ಸಹದ್ಯೋಗಿಗಳೇ ಮಾಡುವ ವಿಭಿನ್ನ ಪ್ರಯತ್ನಗಳು ಸಂಘಟನಾತ್ಮಕ ಸಂಸ್ಕೃತಿ ಹಾಳಾಗಿರುವುದನ್ನು ತೋರಿಸುತ್ತದೆ. ಪೋಲಿಸ್ ವ್ಯವಸ್ಥೆಯ ಈ ಭ್ರಷ್ಟತೆಯಿಂದ ಪ್ರಜೆಗಳು ಹೇಗೆ ಕಷ್ಟ ಅನುಭವಿಸುತ್ತಾರೆ ಅನ್ನುವುದನ್ನು ಚಿತ್ರದಲ್ಲಿ ಉದ್ದಕ್ಕೂ ನೋಡಬಹುದು.

ಕೆಲಸಗಾರರು 14 ರಿಜಿಸ್ಟರುಗಳನ್ನು ನಿರ್ವಹಿಸಬೇಕು. ಆಡಳಿತಾತ್ಮಕ ಕೆಲಸಗಳಲ್ಲೇ ಅವರ ಶೇಕಡ 20ರಿಂದ 30ರಷ್ಟು ಸಮಯ ಹೋಗಿಬಿಡುತ್ತದೆ. ಬಹುತೇಕ ಸಂದರ್ಭದಲ್ಲಿ ಅ ದಾಖಲೆಗಳು ಬಳಕೆಯಾಗುವುದೇ ಇಲ್ಲ. ಈ ಪೇಪರ್ ಹುಲಿಯ ಕಾಟದಿಂದ ಎಷ್ಟೋ ಕಾರ್ಯಕ್ರಮಗಳನ್ನು ಯೋಜಿಸುವುದಕ್ಕೆ ಹಾಗೂ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವೇ ಆಗುವುದೇ ಇಲ್ಲ. ದಾಖಲೆಗಳೇ ಮುಖ್ಯವಾಗುವುದರಿಂದ ಎಷ್ಟೋ ಕಾರ್ಯಕ್ರಮಗಳು ಪೇಪರಿನ ಮೇಲಷ್ಟೆ ಯಶಸ್ವಿಯಾಗಿರುತ್ತವೆ. ಆದರೆ ವಾಸ್ತವದಲ್ಲಿ ಅವುಗಳಿಂದ ಯಾವುದೇ ಬದಲಾವಣೆಯೂ ಆಗಿಲ್ಲ.

ಕಾರ್ಯಕ್ಷಮತೆಯನ್ನು ಕುಂಠಿತಗೊಳಿಸುವ ಇನ್ನೊಂದು ಅಂಶ ವರ್ಗಾವಣೆ. ಐಎಎಸ್ ಅಧಿಕಾರಿಗಳು ಒಂದು ಹುದ್ದೆಯಲ್ಲಿ ಕೆಲಸ ನಿರ್ವಹಿಸುವ ಸರಾಸರಿ ಅವಧಿ ಕೇವಲ 15 ರಿಂದ 18 ತಿಂಗಳು. ಅಷ್ಟರಲ್ಲಿ ಅವರ ವರ್ಗಾವಣೆಯಾಗಿಬಿಡುತ್ತದೆ. ಇಷ್ಟು ಕಡಿಮೆ ಸಮಯದಲ್ಲಿ ಇಲಾಖೆಯ ಸಂಕೀರ್ಣತೆಗಳನ್ನು ಅರ್ಥಮಾಡಿಕೊಂಡು, ಅದರಲ್ಲಿ ಪರಿಣತಿ ಸಾಧಿಸುವುದು ಕಷ್ಟವಾಗುತ್ತದೆ. ಇದರಿಂದಾಗಿ ಹೊಸ ಅಧಿಕಾರಿಗಳು ಬಂದಾಗ ತಕ್ಷಣಕ್ಕೆ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದಿಲ್ಲ. ಪ್ರಮುಖ ಸುಧಾರಣೆ ತರುವುದಕ್ಕೆ ಉತ್ಸಾಹವಿರುವುದಿಲ್ಲ. ಏಕೆಂದರೆ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಯೋಜಿಸುವುದಕ್ಕೆ ಜಾರಿಗೊಳಿಸುವುದಕ್ಕೆ ಸಮಯ ಬೇಕಾಗುತ್ತದೆ. ಹಾಗಾಗಿ ಇರುವುದನ್ನು ಹಾಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಬಯಸುತ್ತಾರೆ. ಉನ್ನತ ಅಧಿಕಾರಿಗಳು ಬದಲಾವಣೆ ತರಲು ಬಯಸಿದರೂ ಕೆಳಹಂತದ ಸಿಬ್ಬಂದಿಗಳು ಉದಾಸೀನರಾಗಿರುತ್ತಾರೆ. ಮುಂದೆ ಬರುವ ಅಧಿಕಾರಿ ಇದನ್ನು ಬದಲಿಸಬಹುದು ಅನ್ನುವ ಅನುಮಾನದಲ್ಲಿರುತ್ತಾರೆ. ಅಧಿಕಾರಿಗಳು 'ಟೆಸ್ಟ್ ಪಂದ್ಯ'ದಂತೆ ಸುಸ್ಥಿರ ಆಡಳಿತ ನೀಡಬೇಕಿದೆ, ಆದರೆ ವ್ಯವಸ್ಥೆಯು ಅವರನ್ನು 'ಟಿ20' ಪಂದ್ಯದಂತೆ ಆಡುವುದಕ್ಕೆ ಒತ್ತಾಯಿಸುತ್ತಿದೆ. ಇದರಿಂದಾಗಿ ಪ್ರತಿಭಾವಂತ ಅಧಿಕಾರಿಗಳಿದ್ದರೂ ಇಡೀ ವ್ಯವಸ್ಥೆಯು ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.

ಯಾಕೆ ಹೀಗಿದೆ?

ಈ ವ್ಯವಸ್ಥಿತ ದೌರ್ಬಲ್ಯಗಳಿಗೆ ಐತಿಹಾಸಿಕ, ರಾಜಕೀಯ, ಆರ್ಥಿಕ, ನ್ಯಾಯಾಂಗ ಮತ್ತು ಸಾಂಸ್ಥಿಕ ಕಾರಣಗಳಿವೆ. ಆಧುನಿಕ ಭಾರತೀಯ ಪ್ರಭುತ್ವ ಸ್ವಾತಂತ್ರ್ಯ ಬಂದ ನಂತರದಲ್ಲಿಯೂ ಹಲವಾರು ವಸಾಹತುಶಾಹಿ ರಚನೆಯನ್ನೇ ಮುಂದುವರಿಸಿಕೊಂಡು ಬಂದಿದೆ. ರೈಲ್ವೆಯನ್ನು ಪ್ರಾರಂಭಿಸಿದಾಗ ಬ್ರಿಟೀಷರಿಗೆ ಭಾರತೀಯರ ಒಳಿತು ಕಲ್ಪನೆಯಲ್ಲೂ ಇರಲಿಲ್ಲ. ಅವರ ಉದ್ದೇಶ ಭಾರತದಿಂದ ಸಂಪನ್ಮೂಲವನ್ನು ಸಾಗಿಸುವುದಾಗಿತ್ತು. ಅವರಿಗೆ ಕಾನೂನು ವ್ಯವಸ್ಥೆಯನ್ನು ಕಾಪಾಡಿಕೊಂಡು, ತೆರಿಗೆಯನ್ನು ಸಂಗ್ರಹಿಸಿಕೊಂಡು ಹೋಗುವುದು ಮುಖ್ಯವಾಗಿತ್ತು. ಕಂದಾಯ ಸಂಗ್ರಹಣೆಯೇ ಮುಖ್ಯವಾಗಿದ್ದರಿಂದ ಅವರು ಆಡಳಿತದ ಮುಖ್ಯಸ್ಥನನ್ನು ಕಲೆಕ್ಟರ್ ಎಂದು ಕರೆಯುತ್ತಿದ್ದರು. ಕಾನೂನು ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದಕ್ಕೆ ಸೂಪರಿಂಟೆಂಡೆಂಟ್ ಆಫ್ ಪೋಲಿಸ್ ಇದ್ದರು. ಈಗ ಅವರ ಜವಾಬ್ದಾರಿಯಲ್ಲಿ ಬದಲಾವಣೆಯಾಗಿದೆ. ಆದರೆ ಆ ಹುದ್ದೆಗಳು ಮುಂದುವರಿದಿದೆ. ವಸಾಹತುಶಾಹಿ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ.

ಅಧಿಕಾರಿಗಳನ್ನು ಪದೇ ಪದೇ ವರ್ಗಾವಣೆ ಮಾಡುವುದು ಕೂಡ ವಸಾಹತುಶಾಹಿಯ ಪರಂಪರೆಯ ಮುಂದುವರಿಕೆಯೆ. ಅಧಿಕಾರಿಗಳು ಸ್ಥಳಿಯ ಜನರೊಂದಿಗೆ ಅತ್ಮೀಯರಾಗಿಬಿಡುತ್ತಾರೆ. ಅವರ ಬಗ್ಗೆ ಅನುಕಂಪೆ ಪ್ರಾರಂಭವಾಗಿಬಿಡುತ್ತದೆ. ತೆರಿಗೆ ಸಂಗ್ರಹಣೆ ಕಷ್ಟವಾಗುತ್ತದೆ. ಹಾಗಾಗಿ ಪದೇ ಪದೇ ವರ್ಗಾವಣೆ ಮಾಡುತ್ತಿದರು. ಆದರೆ ಈಗ ಅದೇ ಪದ್ಧತಿಯನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲ. ಪದೇ ಪದೇ ವರ್ಗಾವಣೆಯಿಂದ ಅಧಿಕಾರಿಗಳು ಬಾಧ್ಯತೆಯಿಂದ ತಪ್ಪಿಸಿಕೊಂಡುಬಿಡುತ್ತಾರೆ. ವರ್ಗಾವಣೆ ರಾಜಕಾರಣಿಗಳಿಗೆ ಅಧಿಕಾರಿಗಳನ್ನು ನಿಯಂತ್ರಿಸುವ, ಲಂಚ ವಸೂಲಿಯ ಸಾಧನವಾಗಿದೆ. ಒಟ್ಟಾರೆಯಾಗಿ ಭಾರತೀಯ ಪ್ರಭುತ್ವವೂ ವಸೂಲಿ ಪ್ರಭುತ್ವದಿಂದ ಇನ್ನೂ ಆಧುನಿಕ ಪ್ರಜಾಸತ್ತಾತ್ಮಕ ಪ್ರಭುತ್ವವಾಗಿ ಇನ್ನೂ ಪೂರ್ಣ ಪರಿವರ್ತನೆಯಾಗಿಲ್ಲ. ಇನ್ನೂ ಜನರನ್ನು ಆಳುವ ಪ್ರಭುತ್ವವಾಗಿಯೇ ಉಳಿದಿದೆ. ಜನರ ಯೋಗಕ್ಷೇಮವನ್ನು ನೋಡಿಕೊಳ್ಳುವ ಪ್ರಭುತ್ವವಾಗಿ ಬದಲಾಗಿಲ್ಲ. ಜನರ ಪ್ರಜಾಸತ್ತಾತ್ಮಕ ಬಯಕೆಗಳನ್ನು ಪ್ರತಿಬಿಂಬಿಸುವ

ಹಲವು ಹಕ್ಕುಗಳು ಮತ್ತು ನಿಯಮಗಳು ಜಾರಿಗೆ ಬಂದಿವೆ. ಆದರೆ ನಮ್ಮ ಆಡಳಿತ ವ್ಯವಸ್ಥೆಯ ರಚನೆ ಇನ್ನೂ ವಸಾಹತುಶಾಹಿ ಪ್ರಭುತ್ವದ ಪಳೆಯುಳಿಕೆಯಾಗಿಯೇ ಮುಂದುವರಿದಿದೆ.

ನಮ್ಮ ಅಧಿಕಾರಶಾಹಿಯ ದೌರ್ಬಲ್ಯಕ್ಕೆ ಹಲವು ರಾಜಕೀಯ ಕಾರಣಗಳೂ ಇವೆ. ಬಲವಾದ ಸಾರ್ವಜನಿಕ ವ್ಯವಸ್ಥೆಯನ್ನು ನಿರ್ಮಿಸುವುದು ರಾಜಕೀಯ ಆದ್ಯತೆಯಾಗಿಲ್ಲ. ಸರ್ಕಾರಿ ಹುದ್ದೆಗಳಲ್ಲಿ "ಅನಧಿಕೃತ" ವರಮಾನಕ್ಕೆ ಹೇರಳ ಅವಕಾಶವಿದೆ. ಹಾಗಾಗಿ ಹುದ್ದೆಗಳ ನೇಮಕಾತಿಯಲ್ಲಿ ರಾಜಕಾರಣಿಗಳಿಗೆ ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶಗಳು ವಿಪುಲವಾಗಿದೆ. ಇದರಿಂದ ಅಭ್ಯರ್ಥಿಗಳ ಹಾಗೂ ಸಂಸ್ಥೆಗಳ ಗುಣಮಟ್ಟ ಕುಸಿಯುತ್ತದೆ. ಭ್ರಷ್ಟಾಚಾರವೊಂದೇ ಕಾರಣವಲ್ಲ. ಎಲ್ಲಾ ರಾಜಕಾರಣಿಗಳು ಅಧಿಕಾರಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಬಯಸುತ್ತಾರೆ. ರಾಜಕಾರಣಿಗಳಿಗೆ ಅಧಿಕಾರಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು ಒಳ್ಳೆಯ ಆಡಳಿತಕ್ಕಿಂತ ಆದ್ಯತೆಯ ವಿಷಯವಾಗಿದೆ. ಸ್ವತಂತ್ರವಾಗಿ ಕೆಲಸ ಮಾಡಬಲ್ಲ ದಕ್ಷ ಅಧಿಕಾರಿಗಳನ್ನು ಅವರು ಬಯಸುವುದಿಲ್ಲ. ರಾಜಕಾರಣಿಗಳಿಗೆ ದುರ್ಬಲ ಅಧಿಕಾರಶಾಹಿಯಿದ್ದರೆ ಸಾರ್ವಜನಿಕ ಸಂಪನ್ಮೂಲವನ್ನು ತಮ್ಮ ಮತಬ್ಯಾಂಕುಗಳಿಗೆ, ಹಾಗೂ ಬೇಕಾದವರಿಗೆ ವರ್ಗಾಯಿಸುವುದಕ್ಕೆ ಸಲೀಸಾಗುತ್ತದೆ. ಅಧಿಕಾರಿಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದಕ್ಕೆ ವರ್ಗಾವಣೆಯನ್ನು ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಬಗ್ಗದ ಅಧಿಕಾರಿಗಳನ್ನು ನಿರಂತರ ವರ್ಗಾಯಿಸಲಾಗುತ್ತದೆ. ಆದರ ಇದರಿಂದ ಅಂತಿಮವಾಗಿ ಜನರ ಒಳಿತಿಗೆ ತೊಂದರೆಯಾಗುತ್ತದೆ.


ಆರ್ಥಿಕ ಕಾರಣಗಳು: ಅಧಿಕಾರಶಾಹಿಯ ದೌರ್ಬಲ್ಯಕ್ಕೆ ಇನ್ನೊಂದು ಮುಖ್ಯ ಕಾರಣ ಆರ್ಥಿಕವಾದದ್ದು. ಖಾಸಗಿ ಕಂಪೆನಿಗಳು ಬೆಲೆಗೆ ತಕ್ಕ ಸೇವೆ ಕೊಡದೇ ಹೋದರೆ ಉಳಿಯುವುದಿಲ್ಲ. ಆದರೆ ತೆರಿಗೆದಾರರ ಹಣವನ್ನು ಕೆಟ್ಟದಾಗಿ ನಿರ್ವಹಿಸಿದರೂ ಸರ್ಕಾರಗಳು ಅಂತಹ ತೊಂದರೆಯಿಲ್ಲದೆ ಹಲವು ಕಾಲ ಇರಬಹುದು. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಗಮನಿಸಿ. ನೌಕರರಿಗೆ ಹೆಚ್ಚಿನ ವೇತನ ಹಾಗೂ ಅನುಕೂಲಗಳನ್ನು ನೀಡಲಾಗುತ್ತದೆ. ನಿರ್ವಹಣೆಯಲ್ಲಿಯೂ ಸಮಸ್ಯೆ ಇರುತ್ತದೆ. ಎಲ್ಲಾ ಸೇರಿಕೊಂಡು ವಿಪರೀತ ನಷ್ಟ ಅನುಭವಿಸುತ್ತಿರುತ್ತವೆ. ಈ ನಷ್ಟವನ್ನು ತೆರಿಗೆದಾರರು ಭರಿಸಬೇಕು. ಬಹುತೇಕ ಯಾರೂ ಈ ಅಕ್ಷಮತೆಗೆ ಹೊಣೆಗಾರಿಕೆಯನ್ನು ಎದುರಿಸುವುದಿಲ್ಲ. ಲಾಭ ನಷ್ಟಗಳ ಲೆಕ್ಕಗಳೆಲ್ಲಾ ಬಜೆಟ್ಟಿನಲ್ಲಿ ಮುಚ್ಚಿಹೋಗಿರುತ್ತದೆ.

ನ್ಯಾಯಿಕ ಕಾರಣಗಳು: ನ್ಯಾಯಾಲಯಗಳು ಕೂಡ ಹೆಚ್ಚೆಚ್ಚು ಸರ್ಕಾರದ ಆಡಳಿತದಲ್ಲಿ ಮಧ್ಯಪ್ರವೇಶ ಮಾಡುತ್ತಿವೆ. ಸರ್ಕಾರದ ನೀತಿಗಳಿಂದ ಅತೃಪ್ತರಾದವರು ನ್ಯಾಯಾಲಯದಲ್ಲಿ ಮನವಿ ಮಾಡಿಕೊಳ್ಳುತ್ತಾರೆ. ನ್ಯಾಯಾಲಯಗಳಲ್ಲಿಯೂ ನೌಕರರ ಕೊರತೆಯಿದೆ. ತೀರ್ಪುಗಳು ನಿಧಾನವಾಗುತ್ತವೆ. ಸಹಜವಾಗಿಯೇ ಈ ವಿಳಂಬ ಸರ್ಕಾರದ ಪರಿಣಾಮಕಾರಿತ್ವಕ್ಕೆ ಅಡ್ಡಿಯಾಗುತ್ತವೆ. ಜೇಷ್ಠತೆಗೆ ಸಂಬಂಧಿಸಿದಂತೆ ಸಾವಿರಾರು ಮೊಕದ್ದಮೆಗಳು ಇನ್ನೂ ತೀರ್ಮಾನವಾಗದೆ ಉಳಿದಿವೆ. ನ್ಯಾಯಾಲಯದ ಮಧ್ಯಪ್ರವೇಶ ಒಳ್ಳೆಯದಿದ್ದರೂ ಹಲವು ಬಾರಿ ತೊಂದರೆ ಮಾಡುತ್ತವೆ. ನೇಮಕಾತಿಗಳನ್ನು ತಡೆಯುತ್ತವೆ. ನ್ಯಾಯಾಲಯಕ್ಕೆ ಉತ್ತರ ಕೊಡುವುದರಲ್ಲೇ ಬಹುತೇಕ ಸಮಯ ಕಳೆದುಹೋಗುತ್ತದೆ. ಈ ಎಲ್ಲಾ ಸಮಸ್ಯೆಗಳನ್ನು ತಪ್ಪಿಸಿಕೊಳ್ಳಲು ಬದಲಾವಣೆಗೆ ಆಶಿಸದೆ, ಇರುವುದನ್ನೇ ಮುಂದುವರಿಸಿಕೊಂಡು ಹೋಗುವುದು ಒಳ್ಳೆಯದು ಅನ್ನುವ ಭಾವನೆ ಬಲವಾಗಿದೆ. ತೊಂದರೆ ಬೇಡ ಅನ್ನುವ ಮನೋಭಾವವೇ ಅಧಿಕಾರಶಾಹಿ ನಿರ್ಧಾರ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ. ಕಳಪೆ ಗುಣಮಟ್ಟದ ವಸ್ತುಗಳಾದರೂ ಪರವಾಗಿಲ್ಲ ಟೆಂಡರ್ ಪ್ರಕ್ರಿಯೆಯಲ್ಲೇ ಕೊಳ್ಳೋಣ ಅಂದುಕೊಳ್ಳುವುದು ಇದೇ ಕಾರಣಕ್ಕೆ.

ಭಾರತಕ್ಕೆ ಈಗ ಬೇಕಾಗಿರುವುದು ಗೋಲುಗಳನ್ನು ಬಾರಿಸಿ ನಮ್ಮನ್ನು ಮುನ್ನಡೆಸುವ 'ಸ್ಟ್ರೈಕರ್‌ಗಳು' (Strikers). ಆದರೆ, ನಮ್ಮ ಅಧಿಕಾರಿಗಳು ಮಾತ್ರ ಗೋಲಾಗದಂತೆ ತಪ್ಪಿಸುವ 'ಗೋಲ್‌ಕೀಪರ್‌ಗಳಾಗುವುದಕ್ಕೆ' ಬಯಸುತ್ತಿದ್ದಾರೆ. ಅವರ ಗಮನವೆಲ್ಲಾ ತಪ್ಪಾಗದಂತೆ ನೋಡಿಕೊಳ್ಳುವುದರ ಕಡೆಗೇ ಇದೆ. ಗೋಲ್‌ಕೀಪರ್‌ಗಳ ಈ ಮನಸ್ಥಿತಿಗೆ ಒಂದು ಮುಖ್ಯ ಕಾರಣವಿದೆ: "ಅವರು ತಡೆದ ನೂರಾರು ಗೋಲುಗಳನ್ನು ಯಾರೂ ನೆನಪಿಟ್ಟುಕೊಳ್ಳುವುದಿಲ್ಲ, ಆದರೆ ಅವರು ಬಿಟ್ಟುಕೊಟ್ಟ ಒಂದು ಸಣ್ಣ ಗೋಲನ್ನು ಯಾರೂ ಮರೆಯುವುದಿಲ್ಲ." ಇದೇ ಪರಿಸ್ಥಿತಿ ಭಾರತೀಯ ಅಧಿಕಾರಿಗಳಿಗೂ ಇದೆ. ಅವರು ಏಕಕಾಲದಲ್ಲಿ ಅನೇಕ ಸವಾಲುಗಳನ್ನು ನಿಭಾಯಿಸಿದ್ದಕ್ಕೆ ಅವರಿಗೆ ಮೆಚ್ಚುಗೆ ಸಿಗುವುದು ಅಪರೂಪ. ಆದರೆ ಅವರು ಮಾಡುವ ಒಂದು ಸಣ್ಣ ತಪ್ಪಿಗೆ ದಂಡನೆ ಅಥವಾ ಶಿಕ್ಷೆ ಎದುರಿಸುವ ಅಪಾಯ ಮಾತ್ರ ಬಹಳ ಹೆಚ್ಚಿಗೆ ಇರುತ್ತದೆ. ಫುಟ್‌ಬಾಲ್ ಪಂದ್ಯದಲ್ಲಿ ಒಂದು ತಂಡವು ಮುನ್ನಡೆಯಲ್ಲಿದ್ದಾಗ, ರಕ್ಷಣಾತ್ಮಕವಾಗಿ ಆಡುವುದು ಮತ್ತು ತಪ್ಪುಗಳನ್ನು ಮಾಡದಿರುವುದು ಸರಿಯಾದ ಕ್ರಮ. ಆದರೆ ತಂಡವು ಹಿನ್ನಡೆಯಲ್ಲಿದ್ದಾಗ ಅದು ಸಾಧ್ಯವಿಲ್ಲ. ಭಾರತದಂತಹ ಕೆಳ–ಮಧ್ಯಮ ಆದಾಯದ ದೇಶಕ್ಕೆ, ಈ ರೀತಿ ರಿಸ್ಕ್ ತೆಗೆದುಕೊಳ್ಳದೆ "ಸುಮ್ಮನೆ ಕೂರುವುದು" ಅಥವಾ "ಜಾರಿಕೊಳ್ಳುವುದು" ಬಹಳ ದುಬಾರಿಯಾಗುತ್ತದೆ. ಭಾರತವು ಇಂದು ಅಭಿವೃದ್ಧಿಯ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಇಲ್ಲಿಯ ಅಧಿಕಾರಿಗಳು ಹೆಚ್ಚೆಚ್ಚು ನಾವಿನ್ಯಪೂರಿತ ಕೆಲಸಗಳನ್ನು ಸ್ವಯಂಪ್ರೇರಿತವಾಗಿ ಮಾಡಬೇಕಾಗಿದೆ. ಆದರೆ, ಅಧಿಕಾರಿಗಳು ಯಾವುದೇ ರಿಸ್ಕ್ ತೆಗೆದುಕೊಳ್ಳದಂತೆ ನಮ್ಮ ಪ್ರಸ್ತುತ ವ್ಯವಸ್ಥೆಯು ಅವರನ್ನು ನಿರುತ್ಸಾಹಗೊಳಿಸಿ, ಹಿಮ್ಮೆಟ್ಟಿಸುತ್ತದೆ.

ಬ್ಯೂರೋಕ್ರೆಸಿಯ ಕೆಲಸ ನಿಜಕ್ಕೂ ಒಂದು ಸವಾಲು. ಸಾಮಾನ್ಯವಾಗಿ ಅಧಿಕಾರಶಾಹಿಯ ಅದಕ್ಷತೆಯ ಬಗ್ಗೆ ಮಾತನಾಡುತ್ತೇವೆ. ಖಾಸಗಿ ಕ್ಷೇತ್ರಕ್ಕೆ ಹೋಲಿಸಿದರೆ ಅದು ಅಷ್ಟು ಪರಿಣಾಮಕಾರಿಯಾಗಿ ಕಾಣುವುದಿಲ್ಲ. ಅದಕ್ಕೆ ಒಂದು ಕಾರಣವೆಂದರೆ ಸರ್ಕಾರಿ ಕ್ಷೇತ್ರದಲ್ಲಿನ ಕರ್ತವ್ಯಗಳು ಹೆಚ್ಚು ಸವಾಲಿನದಾಗಿರುತ್ತವೆ. ಇವರು ಎಲ್ಲಾ ಪ್ರಜೆಗಳ ಅಭಿಪ್ರಾಯಕ್ಕೂ ಬೆಲೆ ಕೊಡಬೇಕು. ಖಾಸಗಿಯವರು ಒಂದು ನಿರ್ದಿಷ್ಟ ಗುಂಪಿನ ಮೇಲೆ ಕೇಂದ್ರೀಕರಿಸಿದರೆ ಸಾಕು. ಸರ್ಕಾರಿ ವಲಯದಲ್ಲಿ ವಿಭಿನ್ನ ಬಗೆಯ ಜನರ ವಿಭಿನ್ನ ಗುರಿಗಳನ್ನು ಗಮನಿಸಬೇಕಾಗುತ್ತದೆ. ಶಿಕ್ಷಣವನ್ನು ತೆಗೆದುಕೊಳ್ಳಿ. ಖಾಸಗಿಯವರು ಪ್ರವೇಶ ಪರೀಕ್ಷೆ ನಡೆಸಿ, ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳನ್ನು ತಿರಸ್ಕರಿಸಿಬಿಡುತ್ತಾರೆ. ಸಾರ್ವಜನಿಕ ಶಾಲೆಗಳಲ್ಲಿ ಯಾವುದೇ ವಿದ್ಯಾರ್ಥಿಗಳನ್ನು ತಿರಸ್ಕರಿಸುವುದಕ್ಕೆ ಆಗುವುದಿಲ್ಲ. ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣ ಕೊಡುವುದು ಸವಾಲಿನ ಕೆಲಸ. ನಾವು ಬ್ಯೂರೋಕ್ರಸಿಯಿಂದ ಹೆಚ್ಚು ಸಂಕೀರ್ಣವಾದ ಹಾಗೂ ಕಷ್ಟದ ಕೆಲಸವನ್ನು ನಿರೀಕ್ಷಿಸುತ್ತಿರುತ್ತೇವೆ. ಜೊತೆಗೆ ಅಲ್ಲಿ ಉದ್ಯೋಗಿಗಳ ಹಾಗೂ ಸಂಪನ್ಮೂಲದ ಕೊರತೆಯೂ ತೀವ್ರವಾಗಿದೆ.

ಅಧಿಕಾರಶಾಹಿಯ ಬಗ್ಗೆ ಒಂದು ಕಡೆ ಮತದಾರರ ನಿರೀಕ್ಷೆ ಹೆಚ್ಚುತ್ತಿದೆ. ಇನ್ನೊಂದು ಕಡೆ ಅದನ್ನು ಪೂರೈಸುವುದಕ್ಕೆ ಬೇಕಾದ ಸಾಮರ್ಥ್ಯ ಮತ್ತು ಸಂಪನ್ಮೂಲದ ಕೊರತೆ ಇದೆ. ಅಂದರೆ ಪ್ರಭುತ್ವದ ಮೇಲೆ ಅದರ ಸಾಮರ್ಥ್ಯಕ್ಕೆ ಮೀರಿದ ನಿರೀಕ್ಷೆ ಹಾಗೂ ಹೊರೆ ಇದೆ. ಇದನ್ನು ನಿಭಾಯಿಸಲಾರದೆ ಅದು ಮತ್ತಷ್ಟು ದುರ್ಬಲವಾಗುತ್ತದೆ. ಇರುವ ಸಾಮರ್ಥ್ಯ ಹಾಗೂ ಸಂಪನ್ಮೂಲವನ್ನೇ ವಿಭಿನ್ನ ಗುಂಪುಗಳಿಗೆ ಹಂಚಬೇಕಾಗಿದೆ. ದುರ್ಬಲ ವರ್ಗ ಹೆಚ್ಚು ಸಂಕಷ್ಟಕ್ಕೆ ಗುರಿಯಾಗುತ್ತದೆ. ಸರ್ಕಾರ ತನ್ನ ಸಾಮರ್ಥ್ಯವನ್ನು ಮೀರಿ ಭರವಸೆಗಳನ್ನು ಕೊಡುತ್ತಾ ಹೋಗುತ್ತಿದೆ. ಹಾಗಾಗಿ ಹೆಚ್ಚೆಚ್ಚು ಭರವಸೆಗಳು ಪೂರೈಕೆಯಾಗದೆ ಉಳಿದುಕೊಳ್ಳುತ್ತವೆ. ಸಾರ್ವಜನಿಕರ ವಿಶ್ವಾಸ ಕಳೆದುಕೊಳ್ಳಬೇಕಾಗುತ್ತದೆ. ಪ್ರಮುಖ ಕರ್ತವ್ಯಗಳನ್ನು ಬಿಟ್ಟು



ತಕ್ಷಣದ ಕರ್ತವ್ಯಗಳ ಕಡೆಗೆ ಗಮನಕೊಡಬೇಕಾಗುತ್ತದೆ. ನಿರೀಕ್ಷೆಗೆ ಸರಿಯಾಗಿ ಸ್ಪಂದಿಸುವುದಕ್ಕೆ ಸಾಧ್ಯವಾಗದೆ ಅಧಿಕಾರಶಾಹಿ ನಿರಾಶೆಗೊಳ್ಳುತ್ತದೆ.

ಅಧಿಕಾರಶಾಹಿಯ ಸ್ವಹಿತಾಸಕ್ತಿ

ಅಧಿಕಾರಶಾಹಿಯ ದೌರ್ಬಲ್ಯಕ್ಕೆ ಹೊರಗಿನ ಕಾರಣಗಳು ಎಷ್ಟು ಕಾರಣವೋ ಒಳಗಿನ ಕಾರಣಗಳೂ ಅಷ್ಟೇ ಕಾರಣ. ಅಂದರೆ ಅಧಿಕಾರಶಾಹಿಯೂ ಅಷ್ಟೇ ಕಾರಣ. ಕಾರ್ತಿಕ್ ಮುರುಳಿಧರನ್ ಹಲವನ್ನು ಗುರುತಿಸುತ್ತಾರೆ. ಸರ್ಕಾರಿ ನೌಕರರು ಹೆಚ್ಚಿನ ವೇತನ ಹಾಗೂ ಅನುಕೂಲಗಳನ್ನು ಪಡೆದುಕೊಳ್ಳಲು ಲಾಬಿ ಮಾಡುತ್ತಾರೆ. ಮಾರುಕಟ್ಟೆ ಮೌಲ್ಯಕ್ಕಿಂತ ಹಲವು ಪಟ್ಟು ಹೆಚ್ಚಿನ ವೇತನ ಪಡೆದುಕೊಳ್ಳುತ್ತಾರೆ. ಹಾಗಾಗಿ ಭಾರತದ ಸಾರ್ವಜನಿಕ ನೌಕರರ ವೇತನ ಹಾಗೂ ಜಿಡಿಪಿಯ ನಡುವಿನ ಅನುಪಾತ ಜಗತ್ತಿನಲ್ಲೇ ಅತಿ ಹೆಚ್ಚು ಇದೆ. ಅತಿಯಾದ ವೇತನ ಹೆಚ್ಚಿನ ನೌಕರರನ್ನು ನೇಮಿಸಿಕೊಳ್ಳಲಾಗದಿರುವುದಕ್ಕೆ ಒಂದು ಕಾರಣ ಎನ್ನುತ್ತಾರೆ ಕಾರ್ತಿಕ್ ಮುರುಳಿಧರನ್. ಜೇಷ್ಠತೆಯ ಆಧಾರದ ಮೇಲೆ ಬಡ್ತಿ ಕೊಡುವುದರಿಂದ ಹೆಚ್ಚಿನ ನೌಕರರು ಉನ್ನತ ಹುದ್ದೆಗಳಲ್ಲಿ ನಿವೃತ್ತರಾಗುತ್ತಾರೆ. ಅದರಿಂದ ಹೆಚ್ಚಿನ ಪಿಂಚಣಿ ಇತ್ಯಾದಿ ಸೌಲಭ್ಯಗಳನ್ನು ಅವರಿಗೆ ಕೊಡಬೇಕಾಗುತ್ತದೆ. ಇಂದು ವ್ಯವಸ್ಥೆಯಲ್ಲಿ ಕಾಣುತ್ತಿರುವ ಅತಿಯಾದ ಕೇಂದ್ರೀಕರಣಕ್ಕೆ ಹಿರಿಯ ಅಧಿಕಾರಿಗಳು ಭಾಗಶಃ ಕಾರಣ. ತಮ್ಮ ಅಧಿಕಾರ ಕಡಿಮೆಯಾಗುತ್ತದೆ ಅನ್ನುವ ಕಾರಣಕ್ಕೆ ಗ್ರಾಮೀಣ ಹಾಗೂ ನಗರದ ಸ್ಥಳೀಯ ಸಂಸ್ಥೆಗಳಿಗೆ ಸಂಪನ್ಮೂಲಗಳನ್ನು ಮತ್ತು ಕರ್ತವ್ಯಗಳನ್ನು ಬಿಟ್ಟುಕೊಡುವುದನ್ನು ಅವರು ವಿರೋಧಿಸುತ್ತಾರೆ. ವಿಕೇಂದ್ರೀಕರಣಕ್ಕೆ ವಿರೋಧವನ್ನು ಎಲ್ಲಾ ಹಂತಗಳಲ್ಲೂ ನೋಡಬಹುದು. ಕೇಂದ್ರ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ಬಿಟ್ಟುಕೊಡುವುದಿಲ್ಲ. ರಾಜ್ಯ ಸರ್ಕಾರಗಳು ಸ್ಥಳೀಯ ಸರ್ಕಾರಗಳಿಗೆ ಬಿಟ್ಟುಕೊಡುವುದಿಲ್ಲ. ಅಧಿಕಾರಶಾಹಿ ಇಡೀ ವ್ಯವಸ್ಥೆಯನ್ನು ತನ್ನ ಅನುಕೂಲಕ್ಕೆ ದುಡಿಸಿಕೊಳ್ಳುತ್ತಿದೆ ಅನ್ನುವ ಆರೋಪ ಸತ್ಯಕ್ಕೆ ದೂರವೇನಲ್ಲ. ಅಧಿಕಾರಶಾಹಿ ತನ್ನ ಆಸಕ್ತಿಯನ್ನು ಸಾರ್ವಜನಿಕ ಆಸಕ್ತಿಗಿಂತ ಹೆಚ್ಚು ಆದ್ಯತೆಕೊಡುತ್ತದೆ ಅನ್ನುವುದು ಪೂರ್ಣ ಸುಳ್ಳಲ್ಲ. ಅವರನ್ನೇ ಪೂರ್ಣ ದೂಷಿಸುವುದು ಸರಿಯಲ್ಲವಾದರೂ. ವ್ಯವಸ್ಥೆಯ ದೌರ್ಬಲ್ಯಕ್ಕೆ ಅವರು ಕೂಡ ಕಾರಣ.

ಅಧಿಕಾರಶಾಹಿ ದುರ್ಬಲವಾಗಿರುವುದಕ್ಕೆ ಮೇಲೆ ಹೇಳಿದ ಎಲ್ಲಾ ಕಾರಣಗಳ ಪೈಕಿ ರಾಜಕೀಯ ಕಾರಣಗಳು ಹೆಚ್ಚು ಮುಖ್ಯವಾದವು. ಹಾಗಾಗಿ ಇದಕ್ಕೆ ಪರಿಹಾರ ಹುಡುಕುವಾಗ ಅಧಿಕಾರಶಾಹಿ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ತೆಗೆದುಕೊಳ್ಳಬೇಕಾದ ರಾಜಕೀಯ ಕ್ರಮಗಳ ಬಗ್ಗೆ ಚಿಂತಿಸಬೇಕು. ಸುಧಾರಣೆಗೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತು ಸ್ವತಃ ಇನ್ನೊಂದು ಅಧಿಕಾರಶಾಹಿಯೇ ಯೋಚಿಸುವುದು ಒಳ್ಳೆಯದು.

ಒಳ್ಳೆಯ ಆಡಳಿತಕ್ಕಾಗಿ ಇಂದು ಮತದಾರರ ಒತ್ತಾಯ ಹೆಚ್ಚುತ್ತಿದೆ. ಆದರೆ ರಾಜಕಾರಣಿಗಳಿಗೆ ಒಳ್ಳೆಯ ಆಡಳಿತ ಕೊಡಬೇಕೆನಿಸಿದರೂ ಅದಕ್ಕೆ ಸ್ಪಂದಿಸಲು ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಅಧಿಕಾರಶಾಹಿಯ ಈ ದೌರ್ಬಲ್ಯಕ್ಕೆ ದಶಕಗಳ ರಾಜಕೀಯ ನಿರ್ಲಕ್ಷ್ಯ ಕಾರಣ. ಅದನ್ನು ಒಂದೆರಡು ದಿನಗಳಲ್ಲಿ ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ರಾಜಕಾರಣಿಗಳು ತಮ್ಮ ಸಂಕುಚಿತ ರಾಜಕೀಯ ಉದ್ದೇಶಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಸಾರ್ವಜನಿಕ ಹಿತಾಸಕ್ತಿಯನ್ನು ಕಡೆಗಣಿಸಿದ್ದಾರೆ. ಭ್ರಷ್ಟಾಚಾರ ಸಾಂಸ್ಥೀಕರಣಗೊಂಡಿದೆ. ಸಾಮರ್ಥ್ಯ ಹಾಗೂ ನಿಷ್ಠೆಗೆ ಬೆಲೆಯಿಲ್ಲ. ಇಂತಹ ವಾತಾವರಣದಲ್ಲಿ ಸರ್ಕಾರ ಅಧಿಕಾರಿಗಳು ಭ್ರಷ್ಟರಾಗುವುದರಲ್ಲಿ ಆಶ್ಚರ್ಯವಿಲ್ಲ. ಅವರೂ ಸರ್ಕಾರಿ ಕೆಲಸದ ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದಾರೆ.

ಹೆಚ್ಚು ಪರಿಣಾಮಕಾರಿಯಾದ ಸಾರ್ವಜನಿಕ ವ್ಯವಸ್ಥೆಯನ್ನು ಕಟ್ಟುವುದಕ್ಕೆ ಹಲವು ವರ್ಷಗಳು ಬೇಕು. ಮತದಾರರು ಒಳ್ಳೆಯ ಆಡಳಿತಕ್ಕೆ ಒತ್ತಾಯಿಸುವುದು ರಾಜಕೀಯವಾಗಿ ಅರ್ಥಪೂರ್ಣ. ರಾಜಕಾರಣಿಗಳು ಅದಕ್ಕೆ ಸ್ಪಂದಿಸಬೇಕಾಗುತ್ತದೆ. ರಾಜಕಾರಣಿಗಳು ರೇಸ್ ಕಾರ್ ಚಾಲಕರಿದ್ದಂತೆ. ಚಾಲಕನ ಸಾಮರ್ಥ್ಯ ಕಾರಿನ ಗುಣಮಟ್ಟವನ್ನು ಅವಲಂಭಿಸಿರುತ್ತದೆ. ಪ್ರಭುತ್ವ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ ಎಂಬುದು ರಾಜಕಾರಣಿಗಳು ಎಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಅನ್ನುವುದನ್ನು ಅವಲಂಬಿಸಿರುತ್ತದೆ. ಒಳ್ಳೆಯ ನಾಯಕರಾಗಲು ಬಯಸುವ ನಾಯಕರು ಕಾರನ್ನು ಅಂದರೆ ಅಧಿಕಾರಶಾಹಿಯನ್ನು ಬಲಗೊಳಿಸಲು ಹೂಡಿಕೆ ಮಾಡಬೇಕಾಗುತ್ತದೆ.

ಭ್ರಷ್ಟಾಚಾರ ತಪ್ಪಬೇಕು

ಭ್ರಷ್ಟಾಚಾರ ಹುಟ್ಟಿಕೊಳ್ಳುವುದು ಚುನಾವಣೆಯ ಖರ್ಚಿಗೆ ಹಾಗೂ

ಪಕ್ಷಕ್ಕೆ ಹಣವನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿ. ರಾಜಕೀಯ ಭ್ರಷ್ಟಾಚಾರ ಹಲವು ರೀತಿಯಲ್ಲಿ ಆಗುತ್ತದೆ. ಅದು ಸಾರ್ವಜನಿಕ ಕ್ಷೇಮದ ಮೇಲೆ ವಿಭಿನ್ನ ರೀತಿಯಲ್ಲಿ ಪರಿಣಾಮ ಬೀರುತ್ತದೆ. ಇದಕ್ಕೆ ನಿಜವಾದ ಪರಿಹಾರ ಅಂದರೆ ರಾಜಕೀಯದಲ್ಲಿ ಹಣದ ಪಾತ್ರವನ್ನು ಕಡಿಮೆ ಮಾಡುವುದು. ಆದರೆ ತಕ್ಷಣಕ್ಕೆ ರಾಜಕಾರಣಿಗಳು ಅತ್ಯಂತ ಅಪಾಯಕಾರಿಯಾದ ಭ್ರಷ್ಟಾಚಾರವನ್ನು ತಪ್ಪಿಸಿದರೂ ಎಷ್ಟೋ ಅನುಕೂಲವಾಗುತ್ತದೆ. ಮುಖ್ಯವಾಗಿ ನೇಮಕಾತಿ, ನಿಯುಕ್ತಿ ಹಾಗೂ ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಿಲ್ಲಬೇಕು. ಇದು ಸಾರ್ವಜನಿಕ ಒಳಿತಿಗೆ ನಿಜವಾಗಿ ಮಾರಕ. ಇದು ಅದಕ್ಷ ಅಧಿಕಾರಿಗಳ, ಕೆಟ್ಟ ಉದ್ದೇಶದಿಂದ ಕೆಲಸ ಮಾಡುವ ಅಧಿಕಾರಿಗಳ, ದುರ್ಬಲ ಸಂಘಟನೆಯ ಸಂಸ್ಕೃತಿಯ ಸೃಷ್ಟಿಗೆ ಕಾರಣವಾಗುತ್ತದೆ. ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದರೆ ನಿಷ್ಠಾವಂತ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವ ಅಧಿಕಾರಿಗಳು ಆಯ್ಕೆಯಾಗುವುದಿಲ್ಲ. ಲಂಚಕೊಟ್ಟವರು ಲಂಚದ ನಿರೀಕ್ಷೆಯಲ್ಲಿ ಕೆಲಸ ಮಾಡುತ್ತಾರೆ. ಇಂತಹ ವಾತಾವರಣದಲ್ಲಿ ನಿಷ್ಠಾವಂತ ಹಾಗೂ ದಕ್ಷ ಅಧಿಕಾರಿಗಳನ್ನು ಅಪಾಯವೆಂಬಂತೆ ನೋಡಲಾಗುತ್ತದೆ.

ನೇಮಕಾತಿಯಲ್ಲಿನ ಭ್ರಷ್ಟಾಚಾರದಿಂದ ಆಗುವ ಸಾಮಾಜಿಕ ನಷ್ಟ ಅಪಾರ. ಇದನ್ನು ಗಂಗಾಜಲ ಸಿನಿಮಾದಲ್ಲಿ ಸೆರೆಹಿಡಿಯಲಾಗಿದೆ. ಭ್ರಷ್ಟ ಕಿರಿಯ ಪೋಲಿಸ್ ಅಧಿಕಾರಿ ನಿಷ್ಠಾವಂತ ಎಸ್‌ಪಿ ಕೈಗೆ ಸಿಕ್ಕಿ ಬೀಳುತ್ತಾನೆ. ತಾನು ಕೆಲಸ ತೆಗೆದುಕೊಳ್ಳಲು ಲಂಚಕೊಡುವುದಕ್ಕಾಗಿ ಮಾಡಿದ ಸಾಲವನ್ನು ತೀರಿಸಲು ಹೀಗೆ ಮಾಡುತ್ತಿದ್ದೇನೆ, ನನ್ನನ್ನು ಕ್ಷಮಿಸಿಬೇಕೆಂದು ಬೇಡಿಕೊಳ್ಳುತ್ತಾನೆ. ಈ ನಿಷ್ಠಾವಂತ ಎಸ್‌ಪಿಯನ್ನು ಬೇರೆಕಡೆಗೆ ವರ್ಗಾಯಿಸಲು ಅವನ ಸಹದ್ಯೋಗಿಗಳೇ ಮಾಡುವ ಬಗೆಬಗೆಯ ಪ್ರಯತ್ನಗಳು ಸಂಘಟನಾತ್ಮಕ ಸಂಸ್ಕೃತಿ ಹಾಳಾಗಿರುವುದನ್ನು ತೋರಿಸುತ್ತದೆ. ಪೋಲಿಸ್ ವ್ಯವಸ್ಥೆಯ ಈ ಭ್ರಷ್ಟತೆಯಿಂದ ಪ್ರಜೆಗಳು ಹೇಗೆ ಕಷ್ಟ ಅನುಭವಿಸುತ್ತಾರೆ ಅನ್ನುವುದನ್ನು ಚಿತ್ರದಲ್ಲಿ ಉದ್ದಕ್ಕೂ ನೋಡಬಹುದು.

ಹಾಗಾಗಿ ಸರ್ಕಾರವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಬೇಕೆಂದುಕೊಂಡಿರುವ ರಾಜಕಾರಣಿಗಳು ಮೊದಲು ಸಾರ್ವಜನಿಕ ವಲಯದಲ್ಲಿ ನೇಮಕಾತಿ, ನಿಯುಕ್ತಿ ಹಾಗೂ ವರ್ಗಾವಣೆಯಲ್ಲಿ ಭ್ರಷ್ಟತೆಯನ್ನು ತೆಗೆಯಬೇಕು. ಒಬ್ಬ ಅಸಮರ್ಥ ಅಥವಾ ಭ್ರಷ್ಟ ಅಧಿಕಾರಿಯನ್ನು ನೇಮಿಸುವುದಕ್ಕೆ ಹಣ ತೆಗೆದುಕೊಂಡ ರಾಜಕಾರಣಿ ಐದು ವರ್ಷದ ನಂತರ ಅಧಿಕಾರದಿಂದ ಹೋಗಬಹುದು. ಆದರೆ ಭ್ರಷ್ಟ ಅಧಿಕಾರಿ ಇನ್ನೂ ಮೂವತ್ತು ವರ್ಷ ವ್ಯವಸ್ಥೆಯಲ್ಲಿರುತ್ತಾನೆ.

ಭ್ರಷ್ಟಾಚಾರ ಹೋಗಬೇಕೆನ್ನುವುದು ಸರಿ. ಆದರೆ ರಾಜಕಾರಣಿ ಭ್ರಷ್ಟಾಚಾರದಿಂದ ಬರುವ ಹಣವನ್ನು ಯಾಕೆ ಬಿಟ್ಟುಕೊಡುತ್ತಾನೆ ಅನ್ನುವುದು ನಿಜವಾದ ಪ್ರಶ್ನೆ. ಇದು ಸಾಧ್ಯವಾಗಬೇಕಾದರೆ ರಾಜಕೀಯ ಲೆಕ್ಕಾಚಾರದಲ್ಲಿ ಬದಲಾವಣೆಯಾಗಬೇಕು. ಸೇವೆಯನ್ನು ಒದಗಿಸುವುದಕ್ಕೆ ತಂತ್ರಜ್ಞಾನವನ್ನು ತಂದಿದ್ದರಿಂದ ಮತದಾರರಲ್ಲಿ ತೃಪ್ತಿ ಹೆಚ್ಚಾಗಿದೆ. ಇದು ಹಲವು ನಾಯಕರಿಗೆ ಗೊತ್ತಿದೆ. ರಾಜಕಾರಣಿಗಳು ಚುನಾವಣಾ ಪ್ರಚಾರದಲ್ಲಿ ಅಂಕಿಅಂಶವನ್ನು, ತಂತ್ರಜ್ಞಾನವನ್ನು ಹಾಗೂ ಪರಿಣತರ ನೆರವನ್ನು ಪಡೆದುಕೊಳ್ಳುತ್ತಾರೆ. ಅಂದರೆ ತಮಗೆ ಅನುಕೂಲವಾಗುವ ಕಡೆ ಅದನ್ನು ಬಳಸುತ್ತಾರೆ. ಆದರೆ ಸರ್ಕಾರದ ಆಡಳಿತವನ್ನು ಸುಧಾರಿಸುವುದಕ್ಕೆ ಅದನ್ನು ಬಳಸುವುದಕ್ಕೆ ಸಿದ್ದರಿಲ್ಲ. ಸಧ್ಯಕ್ಕೆ ಅವರು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಪರಿಣತರ ನೆರವನ್ನು ಪಡೆಯುತ್ತಾರೆ. ಮುಂದಿನ ಹಂತವಾಗಿ ಅವರು ಪರಿಣಾಮಕಾರಿಯಾದ ಸರ್ಕಾರವನ್ನು ಕಟ್ಟುವುದಕ್ಕೂ ಅಂಕಿಅಂಶ ಹಾಗೂ ತಾಂತ್ರಿಕ ನೆರವು ಪಡೆಯಬೇಕು.

ಆಡಳಿತದಲ್ಲಿ ಸುಧಾರಣೆ ತರುವುದಕ್ಕೆ ಎಲ್ಲರನ್ನು ಮನವೊಲಿಸುವ ಸಾಮರ್ಥ್ಯ, ಸಂವಹನ ಶಕ್ತಿ ರಾಜಕೀಯ ನಾಯಕರಲ್ಲಿ ಇರಬೇಕು. ಹಿಂದೆ ಆಡಳಿತದಲ್ಲಿ ಸುಧಾರಣೆ ತರುವ ಪ್ರಯತ್ನ ವಿಫಲವಾಗಿದ್ದಕ್ಕೆ ಸರ್ಕಾರಿ ನೌಕರರ ವಿರೋಧ ಕಾರಣ. ಸರ್ಕಾರಿ ನೌಕರರ ಕಾಳಜಿಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಅವರ ವಿಶ್ವಾಸವನ್ನು ಗಳಿಸಬೇಕು. ಸುಧಾರಣೆಯಿಂದ ಅವರಿಗೆ ಅನುಕೂಲವಿದೆ ಎಂದು ಮನವರಿಕೆ ಮಾಡಿಕೊಡಬೇಕು. ಹೆಚ್ಚಿನ ಜನರನ್ನು ನೇಮಿಸಿಕೊಳ್ಳುವದು, ತರಬೇತಿ ನೀಡುವುದು, ಸೇವೆಯಲ್ಲಿ ಸ್ಥಿರತೆಯನ್ನು ತರುವುದು, ಪೇಪರ್ ಕೆಲಸವನ್ನು ಕಡಿಮೆ ಮಾಡುವುದು, ಸ್ವಾಯತ್ತತೆಯನ್ನು ಹೆಚ್ಚಿಸುವುದು ಇವನ್ನೆಲ್ಲಾ ಅಧಿಕಾರಶಾಹಿಗಳು ಸ್ವಾಗತಿಸುತ್ತಾರೆ. ಸುಧಾರಣೆಯಾಗಬೇಕು ಅನ್ನುವುದು ಇಷ್ಟವಾಗದೇ ಇರುವವರು ಅವರಲ್ಲಿಯೂ ಇರಬಹುದು. ನೌಕರರಿಗೆ ಅವರ ಸಾಧನೆಯನ್ನು ಆಧರಿಸಿ ವೇತನವನ್ನು ಕೊಡುವುದಾದರೆ ಅವರು ಅದನ್ನು ಸ್ವಾಗತಿಸುತ್ತಾರೆ. ಆದರೆ ಇಡೀ ಪ್ರಕ್ರಿಯೆ ಪಾರದರ್ಶಕವಾಗಿರುತ್ತದೆ, ನ್ಯಾಯಯುತವಾಗಿರುತ್ತದೆ ಎಂಬುದು ಅವರಿಗೆ ಮನದಟ್ಟಾಗಬೇಕು. ಆಗ ಸುಧಾರಣೆಗೆ ಬೆಂಬಲ ಸಿಗುತ್ತದೆ. ಅಧಿಕಾರಶಾಹಿಯ ಸಾಮರ್ಥ್ಯ ಮತ್ತು ಸ್ವಾಯತ್ತತೆ ಹೆಚ್ಚಿ ಜನರಿಗೆ ಸೇವೆ ಸಲ್ಲಿಸುವುದಕ್ಕೆ ಸಾಧ್ಯವಾದರೆ ಎಲ್ಲಾ ಭಾರತೀಯರಿಗೂ, ಸರ್ಕಾರಿ ನೌಕರರಿಗೂ ಸುಧಾರಣೆ ಇಷ್ಟವಾಗುತ್ತದೆ. ಇದರಿಂದ ಪ್ರಜೆಗಳಿಗೆ ಸೂಕ್ತ ಸೇವೆ ಸಿಗುತ್ತದೆ ಮಾತ್ರವಲ್ಲ ಸರ್ಕಾರದ ಪರಿಣಾಮಕಾರಿತ್ವವೂ ಹೆಚ್ಚುತ್ತದೆ. ಸಾರ್ವಜನಿಕ ಅಧಿಕಾರಿಗಳ ಬಗ್ಗೆ ಸಾರ್ವಜನಿಕರ ಗ್ರಹಿಕೆಯೂ ಸುಧಾರಿಸುತ್ತದೆ.

ರಾಜಕಾರಣಿಗಳು ಹಾಗೂ ಸಾರ್ವಜನಿಕ ಅಧಿಕಾರಿಗಳ ಕೆಲಸ ನಿಜವಾಗಿಯೂ ಕಠಿಣವಾದದ್ದು. ಅವರನ್ನು ದೂಷಿಸುವುದು ಸುಲಭ. ಅವರ ಎಷ್ಟೋ ಕೆಲಸಗಳಿಗೆ ವ್ಯವಸ್ಥೆಯ ದೌರ್ಬಲ್ಯ ಕಾರಣ. ದುರ್ಬಲ ವ್ಯವಸ್ಥೆ ಹಲವು ಬಗೆಯ ಅಡ್ಡಿಗಳನ್ನು ಒಡ್ಡುತ್ತದೆ. ವ್ಯವಸ್ಥೆ ದುರ್ಬಲವಾಗಿರುವುದಕ್ಕೆ ರಾಜಕಾರಣಿಗಳು, ಅಧಿಕಾರಿಗಳು, ನ್ಯಾಯಾಲಯಗಳು, ಪ್ರಜೆಗಳು ಹಾಗೂ ನಾಗರಿಕ ಸಮಾಜ ಎಲ್ಲವೂ ಕಾರಣ. ನಿಜವಾದ ಸಮಸ್ಯೆಯೆಂದರೆ ಭಾರತೀಯ ಪ್ರಭುತ್ವದ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಮತ್ತು ಅದು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ನಾವು ಶ್ರಮ ಸಂಪನ್ಮೂಲ ಹೂಡುತ್ತಿಲ್ಲ. ಒಳ್ಳೆಯ ಕೆಲಸದ ವಾತಾವರಣ ನಿರ್ಮಾಣವಾದರೆ ಅಧಿಕಾರಶಾಹಿಯೂ ಹೆಚ್ಚು ಉತ್ಪಾದಕವಾಗುತ್ತದೆ. ಸಮಾಜಕ್ಕೆ ನಿಜವಾದ ಕೊಡುಗೆ ಸಾಧ್ಯವಾಗುತ್ತದೆ. ನಿಜವಾಗಿ ಸರ್ಕಾರಕ್ಕೆ ಹೆಚ್ಚಿನವರು ಸೇರುವುದೇ ಸಮಾಜಕ್ಕೆ ಹೆಚ್ಚಿನ ಕೊಡುಗೆ ನೀಡುವುದಕ್ಕೆ. ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಹೆಚ್ಚಿನ ಹೂಡಿಕೆ ಮಾಡಬೇಕು. ಹಾಗೆ ಹೂಡಿಕೆ ಮಾಡುವುದರಿಂದ ಅಪಾರ ಲಾಭವಿದ್ದರೂ ಅದನ್ನು ನಮ್ಮ ನಾಯಕರು ನಿರ್ಲಕ್ಷಿಸಿದ್ದಾರೆ. ಇದಕ್ಕೆ ರಾಜಕೀಯ ಗಮನ ನೀಡಬೇಕು.